SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 3 Pages:56
October - 2023, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಅಕ್ಟೋಬರ್ 2023

ಬೆಲೆ ರೂ. 20/-



ತಿರುಮಲೆ

ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು

2023 ಅಕ್ಟೋಬರ್ 15 ರಿಂದ 23 ರ ವರೆಗೆ

ತಿರುಮಲ ತಿರುಪತಿ ದೇವಸ್ಥಾನಗಳು



# ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಬ್ರಹ್ಮೋತ್ಸವಗಳು

**2023 ನವೆಂಬರ್ 10 ರಿಂದ 18 ರ ವರೆಗೆ**

**10-11-2023 ಶುಕ್ರವಾರ**
ಹಗಲು : ಧ್ವಜಾರೋಹಣ
ರಾತ್ರಿ : ಚಿಕ್ಕ ಶೇಷವಾಹನ

**11-11-2023 ಶನಿವಾರ**
ಹಗಲು : ದೊಡ್ಡ ಶೇಷವಾಹನ
ರಾತ್ರಿ : ಹಂಸವಾಹನ

**12-11-2023 ಭಾನುವಾರ**
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹವಾಹನ

**13-11-2023 ಸೋಮವಾರ**
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**14-11-2023 ಮಂಗಳವಾರ**
ಹಗಲು : ಪಲ್ಲಕ್ಕಿ ಉತ್ಸವ
ಸಾ॥ ವಸಂತೋತ್ಸವ
ರಾತ್ರಿ : ಗಜವಾಹನ

**15-11-2023 ಬುಧವಾರ**
ಹಗಲು : ಸರ್ವಭೂಪಾಲವಾಹನ
ರಾತ್ರಿ : ಗರುಡ ವಾಹನ

**16-11-2023 ಗುರುವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**17-11-2023 ಶುಕ್ರವಾರ**
ಹಗಲು : ಸ್ವರ್ಣ ರಥೋತ್ಸವ
ರಾತ್ರಿ : ಅಶ್ವವಾಹನ

**18-11-2023 ಶನಿವಾರ**
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ



# ಭಗವದ್ಗೀತೆ

ನ ಹಿ ಪ್ರಪಶ್ಯಾಮಿ ಮಮಾಪನುದ್ಯಾ -
ದ್ಯ ಚ್ಛೋಕ ಮುಚ್ಛೋಷಣಮಿಂದ್ರಿಯಾಣಾಮ್ ।
ಅವಾಪ್ಯ ಭೂ ಮಾವ ಸಪತ್ನ ಮೃದ್ಧಂ
ರಾಜ್ಯಂ ಸುರಾಣಾಮಪಿ ಚಾऽಧಿಪತ್ಯಮ್ ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -8)

ಹಗೆಗಳಿಲ್ಲದ ಸಮೃದ್ಧವಾದ ಇಡಿಯ ಭೂಮಂಡಲದ ಒಡೆತನ ಅಥವಾ ದೇವಲೋಕದ ಒಡೆತನವೇ ದೊರೆತರೂ ನನ್ನ ಇಂದ್ರಿಯಗಳನ್ನೆಲ್ಲ ಸೊರಗಿಸುವಂಥ ಈ ದುಃಖವು ಕಳೆದೀತೆಂದು ನನಗೆ ಕಾಣುವುದಿಲ್ಲ.



ವೆಂಕಟರಮಣನೆ ಬಾರೊ ಶೇಷಾಚಲವಾಸನೆ ಬಾರೋ ।
ಪಂಕಜನಾಭ ಪರಮ ಪವಿತ್ರ ಶಂಕರಮಿತ್ರನೆ ಬಾರೊ ॥ಪ॥

ಮುದ್ದು ಮುಖದ ಮಗುವೆ ನಿನಗೆ ಮುದ್ದು ಕೊಡುವೆನು ಬಾರೊ ।
ನಿರ್ದಯವೇಕೋ ಎನ್ನೊಳಗೆ ನಾನು ಪೊಂದಿದ್ದೇನು ಬಾರೊ

ಮಂದರಗಿರಿಯನೆತ್ತಿದಾನಂದ ಮೂರುತಿಯೆ ಬಾರೊ ।
ನಂದನ ಕಂದ ಗೋವಿಂದ ಮುಕುಂದ  ಇಂದಿರೆಯರಸನೆ ಬಾರೊ

ಕಾಮನಯ್ಯ ಕರುಣಾಳೊ ಶ್ಯಾಮಲವರ್ಣನೆ ಬಾರೊ ।
ಕೋಮಲಾಂಗ ಶ್ರೀಪುರಂದರವಿಟ್ಠಲನೆ ಸ್ವಾಮಿರಾಯನೆ ಬಾರೊ

ಶ್ರೀ  ಪುರಂದರದಾಸರು

(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಪ್ರಸಕ್ತಮಧುನಾ ವಿಧಿಪ್ರಣಿಹಿತೈಃ ಸಪರ್ಯೋದಕೈಃ ಸಮಸ್ತದುರಿತಚ್ಛಿದಾ ನಿಗಮಗಂಧಿನಾ ತ್ವಂ ದಯೇ ।;
ಅಶೇಷಮವಿಶೇಷತಸ್ತ್ರಿ ಜಗದಂಜನಾದ್ರೀಶಿತುಃ । ಚರಾಚರಚೀಕರಶ್ಚ ರಣ ಪಂಕಜೇನಾಂಕಿತಮ್ ॥ 85॥

ಈ ಪದ್ಯದಲ್ಲಿ ತ್ರಿವಿಕ್ರಮಾವತಾರದ ಮೂಲಕವಾಗಿ ದಯಾದೇವಿಯು ಮಾಡಿದ ಉಪಕಾರವನ್ನು ವರ್ಣಿಸುತ್ತಾರೆ.ವಾಮನಾವತಾರವು ತ್ರಿವಿಕ್ರಮಾವತಾರದಲ್ಲಿಯೇ ಪರ್ಯವಸಾನ ಹೊಂದುವುದರಿಂದ ಇಲ್ಲಿ ಅದನ್ನೇ ವರ್ಣಿಸಿರುತ್ತಾರೆ. ಇಂದ್ರಾದಿ ದೇವತೆಗಳನ್ನು ಹಿಂಸೆಪಡಿಸುತ್ತಿದ್ದ ಬಲಿಯ ಗರ್ವವನ್ನು ಮುರಿಯುವ ಸಂದರ್ಭದಲ್ಲಿ ಈ ಅವತಾರವು ಏರ್ಪಟ್ಟಿರುವುದು. ಅವಕಾಶವು ಸಿಕ್ಕಿದಂತೆಲ್ಲ ಲೋಕೋಪಕಾರವನ್ನು ಮಾಡುವುದರಲ್ಲಿಯೇ ದಯಾದೇವಿಯು ಜಾಗರೂಕಳಾಗಿರುವಳು. ಈ ಅವತಾರವೇರ್ಪಟ್ಟಾಗ ಭಗವಂತನ ತಿರುವಡಿಗಳಲ್ಲಿ ತಾನು ಪ್ರವೇಶಿಸಿ ಮೂರು ಲೋಕಗಳಲ್ಲಿಯೂ ಇರುವ ಸಮಸ್ತ ಪ್ರಾಣಿವರ್ಗಗಳಿಗೂ ಪರಮೋಪಕಾರವನ್ನು ಉಂಟುಮಾಡಿದಳು.

ಬಲಿಚಕ್ರವರ್ತಿಯಲ್ಲಿ ಭಿಕ್ಷೆ ಬೇಡಿ ತೆಗೆದುಕೊಂಡ ಮೂರು ಹೆಜ್ಜೆಯ ಭೂಮಿಯನ್ನು ಅಳೆಯುವ ನೆಪದಿಂದ ಭಗವಂತನು ಅತ್ಯಂತ ಹಿರಿಯದಾದ ರೂಪವನ್ನು ಕೈಗೊಂಡು, ಒಂದು ಹೆಜ್ಜೆಯಿಂದ ಕೆಳಗಿನ ಸರ್ವಲೋಕಗಳನ್ನು ಎರಡನೆಯ ಹೆಜ್ಜೆಯಿಂದ ಮೇಲಿನ ಸರ್ವ ಲೋಕಗಳನ್ನು ಅಳೆಯುವಾಗ ಆ ತಿರುವಡಿಯು ಸತ್ಯ ಲೋಕವನ್ನು ಪ್ರವೇಶಿಸುವುದು. ಆಗ ಚತುರ್ಮುಖ ಬ್ರಹ್ಮನು ಧರ್ಮ ತೀರ್ಥಗಳಿಂದ ಭಗವಂತನ ತಿರುವಡಿಗೆ ಅಭಿಷೇಕ (ಪಾದ್ಯ)ವನ್ನು ಮಾಡಿದನು. ಆಗ ಆ ತೀರ್ಥಗಳೊಡನೆ ಮಿಶ್ರಿತವಾದ ಜೇನು ತುಪ್ಪವು ತಿರುವಡಿಯಲ್ಲಿ ಸೇರಿತು. ಆ ತಿರುವಡಿಯು ಎಲ್ಲ ಪಾಪಗಳನ್ನೂ ಹೋಗಲಾಡಿಸುವಂತಹುದು. ಯಾವ ರೀತಿಯಿಂದಾಗಲಿ ಆ ತಿರುವಡಿ ಸಂಬಂಧವುಂಟಾದವನಿಗೆ ಪಾಪಸಂಪರ್ಕವೇ ಇರುವುದಿಲ್ಲ. ಅಲ್ಲದೆ ಈ ತ್ರಿವಿಕ್ರಮನ ಪಾದವು ವೇದಗಳಲ್ಲಿ ಹಲವಾರು ಕಡೆ ಹಲವಾರು ರೀತಿಗಳಿಂದ ಸ್ತುತಿಸಲ್ಪಟ್ಟಿರುವುದು. ಕಮಲ ಪುಷ್ಪದಂತೆ ಅತ್ಯಂತ ಮೃದುವಾಗಿಯೂ ಮನೋಹರವಾಗಿಯೂ ಇರುವ ಇಂತಹ ತಿರುವಡಿಯಿಂದ ಲೋಕಗಳನ್ನು ಅಳೆಯುವಾಗ ಚರಾಚರಾತ್ಮಕವಾದ ಈ ಸಮಸ್ತ ಲೋಕಗಳಿಗೂ ಈ ತಿರುವಡಿಯ ಸಂಬಂಧವುಂಟಾಯಿತು. ಆಗ ಭಗವಂತನ ತಿರುವಡಿಯಿಂದ ಸಮಸ್ತ ಲೋಕಗಳಿಗೂ ಮುದ್ರೆಯನ್ನು ಒತ್ತಿದಂತ್ತಾಯಿತು. ಭಗವಂತನ ತಿರುವಡಿ ಸಂಬಂಧವುಂಟಾಗುವುದೆಂಬುದು ಸಾಮಾನ್ಯವಾಗಿ ದೊರಕುವಂತಹುದಲ್ಲ. ವಿಶೇಷವಾದ ಪುಣ್ಯದಿಂದಲೇ ಲಭಿಸತಕ್ಕದ್ದು. ಅಂತಹ ಶ್ರೇಷ್ಠವಾದ ದಯಾ ದೇವಿಯು ಸಂದರ್ಭವು ಒದಗಿದಾಗ ಒಂದು ಅಣುವನ್ನು ಸಹ ಬಿಡದಂತೆ ಸರ್ವ ಪ್ರಾಣಿವರ್ಗಗಳಿಗೂ ತಾರತಮ್ಯವಿಲ್ಲದಂತೆ ಅಂದರೆ ಹೆಚ್ಚು ಪುಣ್ಯ ಮಾಡಿದವರಲ್ಲಿ ಹೆಚ್ಚು ಆದರೆ, ಪಾಪ ಮಾಡಿದವರಲ್ಲಿ ಆದರ ಕಡಿಮೆ ಎಂಬ ವ್ಯತ್ಯಾಸವಿಲ್ಲದಂತೆ - ಎಲ್ಲರಿಗೂ ಒಂದೇ ಸಮವಾಗಿ ಉಂಟುಮಾಡಿದಳೆಂದರೆ ಅವಳ (ದಯಾ ದೇವಿಯ) ಪ್ರಭಾವವು ಎಂಥಹುದೆಂಬುದೇ ಆಶ್ಚರ್ಯಕರವಾದುದು. ಹೀಗೆ ಸಮಸ್ತ ಪ್ರಾಣಿಗಳಿಗೂ ತಿರುವಡಿ ಸಂಬಂಧವನ್ನು ಏರ್ಪಡಿಸಿ ಅವುಗಳನ್ನು ಕೃತಾರ್ಥಗಳನ್ನಾಗಿ ಮಾಡುವುದೇ ಈ ಅವತಾರದ ಮುಖ್ಯವಾದ ಪ್ರಯೋಜನ. ಬಲಿಚಕ್ರವರ್ತಿಯನ್ನು ತುಳಿದುದು ಅನುಷಂಗಿಕವಾದುದೇ. ಮಿಕ್ಕ ಅವತಾರಗಳಲ್ಲಿ ಕೆಲವರಿಗೆ ಮಾತ್ರ ಒಳ್ಳೆಯದಾಯಿತು. ಈ ಅವತಾರದಲ್ಲಿಯಾದರೋ ಪುಣ್ಯಶಾಲಿ, ಪಾಪಿ ಎಂಬ ಭೇದವಿಲ್ಲದಂತೆಯೂ, ಚೇತನ ಅಚೇತನವೆಂಬ ಭೇದವಿಲ್ಲದಂತೆಯೂ ಸಮಸ್ತ ವಸ್ತುಗಳಿಗೂ ಒಳ್ಳೆಯದಾಯಿತಲ್ಲವೆ! ಆದ್ದರಿಂದಲೇ ವೇದಗಳಿಗೂ ಈ ಅವತಾರದಲ್ಲಿ ವಿಶೇಷವಾದ ಆದರವು ಕಂಡು ಬರುವುದು.

ಯಾವ ಪದಾರ್ಥದಲ್ಲಿ ಯಾವನ ಮುದ್ರೆಯಿರುವುದೋ ಆ ಪದಾರ್ಥವು ಅವನದೆಂಬುದು ಲೋಕಪ್ರಸಿದ್ಧವಾದುದು. ಪರಮಪುರುಷನ ತಿರುವಡಿ ಮುದ್ರೆಯನ್ನು (ವೈಷ್ಣವ ಮುದ್ರೆಯನ್ನು) ಸರ್ವವಸ್ತುಗಳಲಿಯೂ ಇಟ್ಟು ಒಂದು ಅಣುವನ್ನು ಬಿಡದಂತೆ ಸರ್ವವಸ್ತುಗಳೂ ವೈಷ್ಣವವೇ ಪರಮ ಪುರುಷನದೇ ಎಂದು ದಯಾ ದೇವಿಯು ಸ್ಥಾಪಿಸಿರುವಳು ಇದೇ ಇಲ್ಲಿನ ಮುಖ್ಯ ವಿಷಯ ಮುದ್ರೆಯೊತ್ತುವ ರೀತಿಯು ಕಠಿನವಾಗಿದ್ದರೆ ನೋವಾಗಬಹುದು. ಹಾಗಿಲ್ಲದೆ, ತಾವರೆಯಂತೆ ಅತ್ಯಂತ ಮೃದುವಾದ ತಿರುವಡಿಯಿಂದ ಮುದ್ರೆಯೊತ್ತುವುದರಿಂದ ವಿಧವಾದ ನೋವಿಗೂ ಅವಕಾಶವಿಲ್ಲ. ತಾವರೆಯಲ್ಲಿ ಜೇನೂ ಸುಗಂಧವೂ ಇರುವುದು ಸ್ವಾಭಾವಿಕವಾದುದು. ಈ ತಿರುವಡಿಯೂ ಅದರಂತೆಯೇ ಎಂಬುದು ಪ್ರಸಕ್ತಮಧುನಾ, ನಿಗಮಗಂಧಿನಾ ಎಂಬ ಪದಗಳಿಂದ ವ್ಯಕ್ತವಾಗುವುದು.

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಭಾದ್ರಪದ - ಆಶ್ವಯುಜ ಮಾಸ ಸಂಚಿಕೆ

ಸಂಪುಟ : 03 ಅಕ್ಟೋಬರ್ - 2023 ಸಂಚಿಕೆ : 03



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ.ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಬ್ರಹ್ಮೋತ್ಸವದಲ್ಲಿಹರಿದಾಸರು | -ಡಾ.ಎಸ್. ನಂಜುಂಡಸ್ವಾಮಿ | 07 |
| ಮಹಾಲಯ ಪಿತೃಯಜ್ಞ | -ಡಾ॥ ಎಸ್.ರಾಮೂರ್ತಿಶರ್ಮ | 11 |
| ನಾಡಹಬ್ಬ ದಸರಾ | -ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 12 |
| ವರ್ಣಿಸಲಳವಲ್ಲ ವೆಂಕಟಗಿರಿಯ ಸೃಷ್ಟಿ ಬಹು ಸಿರಿಯ | -ಶ್ರೀಮತಿ. ಪ್ರಿಯಾಪ್ರಾಣೇಶ್‌ಹರಿದಾಸ | 16 |
| ತಿರುಪತಿಯ ಹುಚ್ಚಾಚಾರ್ಯರು | -ಡಾ॥ಎನ್.ಜಿ.ವಿಜಯಲಕ್ಷ್ಮೀರಾಘವೇಂದ್ರಾಚಾರ್ಯ | 18 |
| ಶ್ರೀಕೃಷ್ಣದೇವರಾಯನ ತಿರುಪತಿ ಯಾತ್ರೆಗಳು | -ಡಾ॥ ಕೆ.ವಿ. ರಾಜೇಶ್ವರಿ | 19 |
| ಕರುನಾಡ ನವಶಕ್ತಿ ಮಾತೆಯ ಪೀಠಗಳು | -ಡಾ॥ ಡಿ. ಮುರಳೀಧರ | 22 |
| ನವರಾತ್ರಿಯಲ್ಲಿ ಶ್ರೀನಿವಾಸನ ದರ್ಶನ | -ಡಾ॥ ಸುಮನ ಬದರೀನಾಥ್ | 23 |
| ಪ್ರತಿಕ್ಷಣವು ಭಕ್ತರ ಸೇವೆಯಲ್ಲಿ 24x7 | -ಶ್ರೀಮತಿ. ಎನ್. ಪಾರ್ವತಿ | 31 |
| ಬನ್ನೇರುಘಟ್ಟದ ಚಂಪಕಧಾಮ ಸ್ವಾಮಿ ದೇವಾಲಯ | -ಕೆಂಗೇರಿ ಚಕ್ರಪಾಣಿ | 35 |
| ಶ್ರೀಮನ್ ಮಾಧವತೀರ್ಥರು | -ಡಾ॥ವಾದಿರಾಜ ವಿ. ಅಗ್ನಿಹೋತ್ರಿ | 36 |
| ಚಾರು- ಭಾಷಿಣಿ ಶಬರಿ | -ಡಾ॥ ವಾಣಿಶ್ರೀ ಬಿ.ಎಂ. | 38 |
| ಪರಮಪುರುಷಶ್ರೀವಿಷ್ಣುಸ್ತವನ | -ಮೂರ್ತಿ ರಾಮನಾಥಪುರ | 40 |
| ಶ್ರೀ ಪ್ರಾಣೇಶದಾಸರು | -ಡಾ॥ ಆರ್.ವಾದಿರಾಜು | 42 |
| ಹಸೆಗೆ ಬಾರಯ್ಯಾ ಹದಿನಾಲ್ಕು ಲೋಕದೊಡೆಯ | -ಪರಗಿ ಭಾರತೀರಮಣ ಆಚಾರ್ಯ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ರಸಪ್ರಶ್ನೆಗಳು | | 47 |
| ನೀತಿಕಥೆ -ಮೋಹವೆಂಬ ಜಾಲದಿಂದ ಹೊರ ಬರುವ ಹಾದಿ | -ಎ.ಆರ್. ರಘುರಾಮ | 48 |
| ಚಿತ್ರಕಥೆ - ನೀರೇ ಅಲ್ಲವೇ ಎಂದು ಭಾವಿಸಬಾರದು | -ಡಾ॥ ಕೆ. ರವಿಚಂದ್ರನ್ | 52 |

ಮುಖಚಿತ್ರ -ಗರುಡವಾಹನದಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯವರು, ತಿರುಮಲೆ
ಹಿಂಬದಿಚಿತ್ರ - ಶ್ರೀ ಪದ್ಮಾವತಿ ಅಮ್ಮನವರು, ತಿರುಚಾನೂರು

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

## ಸಂಪಾದಕೀಯ

# ಜಗತ್ಕಲ್ಯಾಣೋತ್ಸವಗಳು

ಸಮಸ್ತ ಪ್ರಪಂಚದಲ್ಲಿ **"ಸಪ್ತಗಿರಿ"** ಕ್ಷೇತ್ರ ಬಹಳ ವಿಶೇಷವಾದುದೇ ಅಲ್ಲದೇ ಸಕಲ ದೇವತೆಗಳಿಗೂ ನಿವಾಸವಾಗಿದೆ. ಶ್ರೀವೈಕುಂಠದಲ್ಲಿನ ಕ್ಷೀರಸಮುದ್ರದಲ್ಲಿ ಶೇಷಶಾಯಿಯಾಗಿ ನೆಲೆಸಿರುವ ಪರಮಪುರುಷನಾದ ಶ್ರೀಮಹಾವಿಷ್ಣುವು ಈ ಪುಣ್ಯಕ್ಷೇತ್ರದಲ್ಲಿ ದರ್ಶನವನ್ನು ನೀಡುತ್ತಾ ಭಕ್ತರು ಕೇಳಿದ್ದನ್ನೆಲ್ಲಾ ನೀಡುವ ಅಪದ್ಬಾಂಧವ , ಅನಾಥರಕ್ಷಕ ಎಂದು ಕರೆಸಿಕೊಳ್ಳುತ್ತಿದ್ದಾನೆ. ಅದ್ದಕ್ಕೇ ಈ ದಿವ್ಯಸ್ಥಳದ ಮೇಲೆ ನೆಲೆಸಿದ ಸ್ವಾಮಿಯು ಬಯಸಿದ ವರಗಳನ್ನು ನೀಡುವ ವರಗಳರಾಯನೆಂದು ಕೀರ್ತಿಸಲ್ಪಡುತ್ತಿದ್ದಾನೆ. ಈ ಸ್ವಾಮಿಯನ್ನು ಭಕ್ತರು ಪ್ರೀತಿಯಿಂದ ಏಡುಕೊಂಡಲವಾಡಾ, ವೆಂಕಟೇಶ್ವರ, ತಿರುಮಲೇಶ, ತಿರುಮಲಪ್ಪ ತಿಮ್ಮಪ್ಪ, ಶ್ರೀನಿವಾಸ, ಆನಂದನಿಲಯ, ಹೀಗೆ ಹಲವಾರು ಹೆಸರುಗಳಿಂದ ಕರೆಯುತ್ತಾರೆ.

ಬ್ರಹ್ಮಾಂಡದಲ್ಲೆಲ್ಲಾ ತಿರುಮಲೆಯ ಕ್ಷೇತ್ರಕ್ಕೆ ಸಮನಾದ ದಿವ್ಯ ಕ್ಷೇತ್ರವು ಮತ್ತೊಂದಿಲ್ಲ ಹಾಗೆಯೇ ತಿರುಮಲೇಶನಿಗೆ ಸಮನಾದ ದೇವನೂ ಈ ಭೂತ ಹಾಗೂ ಭವಿಷ್ಯತ್ ಕಾಲದಲ್ಲೂ ಇಲ್ಲ. ನೂರಾರು ದಿವ್ಯತೀರ್ಥಗಳಿಂದ ಅನೇಕ ಬೆಟ್ಟಗಳಿಂದ ಕೂಡಿರುವ ಈ ಭೂವೈಕುಂಠವು ಸದಾ ಯಾತ್ರಿಕರಿಂದ ಕೂಡಿದ್ದು, ಕೋಲಾಹಲ ಭರಿತವಾಗಿರುತ್ತದೆ. ಈ ಕ್ಷೇತ್ರದಲ್ಲಿ ಪ್ರತಿದಿನವೂ ಹಬ್ಬವೇ ! ಪ್ರತಿ ಹೊತ್ತೂ ಪರಮಾನ್ನ, ಪಾಯಸಗಳೇ!

ಸುಪ್ರಭಾತ, ಸಹಸ್ರನಾಮಾರ್ಚನೆ, ನಿತ್ಯಕಲ್ಯಾಣೋತ್ಸವ, ಡೋಲೋತ್ಸವ, ಸಹಸ್ರದೀಪಾಲಂಕರಣ ಸೇವೆ. ಏಕಾಂತ ಸೇವೆಯಂತಹಾ ನಿತ್ಯೋತ್ಸವ, ಅಷ್ಟದಳಪಾದಪದ್ಮಾರಾಧನೆ, ಸಹಸ್ರಕಲಾಶಾಭಿಷೇಕ, ಶುಕ್ರವಾರಾಭಿಷೇಕದಂತಹಾ ವಾರೋತ್ಸವಗಳು, ಪುಷ್ಪಯಾಗ, ಪವಿತ್ರೋತ್ಸವ, ತೆಪ್ಪೋತ್ಸವದಂತಹಾ ಸಂವತ್ಸರೋತ್ಸವಗಳಿಂದ ಶ್ರೀದೇವಿ, ಭೂದೇವಿಯರೊಂದಿಗೆ ಕೂಡಿರುವ ಶ್ರೀನಿವಾಸನ ವೈಭೋಗಗಳನ್ನು ವರ್ಣಿಸುವುದಕ್ಕೆ ಸಾವಿರಬಾಯಿಗಳೂ ಸಾಲುವುದಿಲ್ಲ. ಆದರೆ ಇವೆಲ್ಲಕ್ಕಿಂತಲೂ ವಿಶಿಷ್ಟವಾಗಿ, ವರ್ಷಕ್ಕೊಮ್ಮೆ ಹತ್ತು ದಿನಗಳ ಕಾಲ ನಡೆಯುವ ಬ್ರಹ್ಮೋತ್ಸವಗಳು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಶ್ರೀವೆಂಕಟೇಶ್ವರನಿಗೆ ಪ್ರತಿ ವರ್ಷ, ಆಶ್ವೀಜ ಶುದ್ಧ ಪಾಡ್ಯಮಿಯಿಂದ ಶುದ್ಧ ದಶಮಿಯವರೆಗೂ ಹತ್ತು ದಿನಗಳ ಕಾಲ ಬ್ರಹ್ಮೋತ್ಸವಗಳು ನಡೆಯುತ್ತವೆ. ಅಧಿಕಮಾಸ ಬಂದರೆ ಭಾದ್ರಪದಮಾಸದಲ್ಲಿ ಒಂದು ಬ್ರಹ್ಮೋತ್ಸವ, ಆಶ್ವೀಜ ಮಾಸದಲ್ಲಿ ಮತ್ತೊಂದು ಬ್ರಹ್ಮೋತ್ಸವವೆಂದು, ಆಶ್ವೀಜ ಮಾಸದಲ್ಲಿ ನಡೆಯುವ ಉತ್ಸವವನ್ನು ನವರಾತ್ರಿ ಬ್ರಹ್ಮೋತ್ಸವೆಂದು ಕರೆಯುತ್ತಾರೆ.

"ನ ಮೇ ಭಕ್ತಃ ಪ್ರಣಶ್ಯತಿ!" ಎಂದು ಶ್ರೀ ಕೃಷ್ಣಭಗವಾನನು ಅಭಯವನ್ನು ನೀಡಿದ್ದಾನೆ. ಶ್ರೀನಿವಾಸನನ್ನು ಬೇಡಿಕೊಂಡ ಭಕ್ತರಿಗೆ ಸಕಲ ಮನೋಭೀಷ್ಟಗಳು ನೆರವೇರುವುದರಲ್ಲಿ ಸಂಶಯವಿಲ್ಲ. ಭಕ್ತರು ಮನಸ್ಸಿನಲ್ಲೇ ಬೇಡಿಕೊಳ್ಳುತ್ತಾರೆ. ಕ್ಷಣಕಾಲ ಭೌತಿಕ ನೇತ್ರಗಳಿಂದ , ಚಿರಕಾಲವೂ ಮನೋನೇತ್ರಗಳಿಂದ ದರ್ಶಿಸುತ್ತಾರೆ. ಸರ್ವವ್ಯಾಪಕನಾದ ಸ್ವಾಮಿಯು ಅವರ ಕೋರಿಕೆಗಳನ್ನು ಆಸೆಗಳನ್ನು ಗುರುತಿಸಿ, ಅವರನ್ನು ಅನುಗ್ರಹಿಸಿ, ಆನಂದಪರವಶರನ್ನಾಗಿ ಮಾಡುತ್ತಾ, ಆನಂದ ನಿಲಯನೆಂಬ ಹೆಸರನ್ನು ಸಾರ್ಥಕ ಮಾಡಿಕೊಳ್ಳುತ್ತಿದ್ದಾನೆ. **"ಆನಂದವೇ ಬ್ರಹ್ಮ"** ಎಂದು ಉಪನಿಷತ್ತು ಹೇಳುತ್ತದಾದ್ದರಿಂದ ಈ ಬ್ರಹ್ಮೋತ್ಸವಗಳು ಪರಮಾತ್ಮನಿಗೆ ಸಂಬಂಧಿಸಿದ ಆನಂದೋತ್ಸವಗಳಾಗಿವೆ. ಈ ಪರಮಾತ್ಮನೇ ಶ್ರೀನಿವಾಸನಾಗಿದ್ದಾನೆ! ಸ್ವಾಮಿಗೆ ಭಕ್ತರು ಕೇಳಿಕೊಳ್ಳುವ ವಿಷಯಗಳು, ಆ ಸ್ವಾಮಿಯು ಅವರಿಗೆ ಅನುಗ್ರಹಿಸುವ ರೀತಿ, ಸ್ವೀಕರಿಸುವ ಹರಕೆಗಳು , ಇವೆಲ್ಲವೂ ಸ್ವಾಮಿಗೆ, ಭಕ್ತನಿಗೆ ಮಾತ್ರಾ ತಿಳಿದಿರುತ್ತವೆ. ಆದರೆ ಕೇಳದವರಿಗೆ ಇಲ್ಲವೆನ್ನದೇ ನೀಡುತ್ತಾನೆ. ಇದು ಸತ್ಯ! ಸತ್ಯ! ಪುನಃಸತ್ಯ! ಸ್ವಾಮಿಯಲ್ಲಿ ಜನಾಕರ್ಷಣೆ , ಭಕ್ತರಲ್ಲಿ ಆನಂದಾಕರ್ಷಣೆ ನೆಲೆಗೊಂಡಿರುತ್ತವೆ. ಆದ್ದರಿಂದಲೇ ಬಯಸಿದವರಿಗೆ ಕೈಗೆಟುಕುವಂತೆ ದೊರೆಯುವ ಬಂಗಾರವಾಗಿ, ಕ್ಷಣಕಾಲದ ಸಂದರ್ಶನ ಭಾಗ್ಯದೊಂದಿಗೆ, ಅಶಾಶ್ವತವಾದ, ನೀರಿನ ಮೇಲಿನ ಗುಳ್ಳೆಯಂತಹಾ ಈ ಮನುಷ್ಯನ ಜೀವನವೇ ಧನ್ಯವನ್ನಾಗಿಸಿ, ಕಲಿಯುಗದ ಪ್ರತ್ಯಕ್ಷದೈವವೆಂದು ಕರೆಸಿಕೊಳ್ಳುತ್ತಿದ್ದಾನೆ!!

ಈ ಶೋಭಕೃತ್ ಸಂವತ್ಸರದ ಶರತ್ಕಾಲಬ್ರಹ್ಮೋತ್ಸವಗಳು ಸ್ವಾಮಿಗೆ, ಭಕ್ತರಿಗೆ ಯಾವತ್ ಪ್ರಪಂಚಕ್ಕೂ ಉತ್ಸವಗಳೇ ಆಗಿವೆ! ಈ ಉತ್ಸವಗಳ ಸರ್ವದೇವತೆಗಳು ಆನಂದೋತ್ಸವಗಳು! ಭಕ್ತರು ಕ್ರಮಶಿಕ್ಷಣದೊಂದಿಗೆ ಸದ್ಭಕ್ತಿಯೊಂದಿಗೆ, ಸಂಪ್ರದಾಯ ಪರಿರಕ್ಷಣೆಯನ್ನು ಪಾಲಿಸುತ್ತಾ ಈ ಮಹೋತ್ಸವಗಳನ್ನು ವಿಜಯವಂತವಾಗಿಸುವುದರಲ್ಲಿ ಅವರವರ ಪಾತ್ರವನ್ನು ಅವರವರು ಸಮರ್ಥವಾಗಿ ನಿರ್ವಹಿಸುತ್ತಾರೆಂದೂ, ನಿರ್ವಹಿಸಬೇಕೆಂದು ಆಶಿಸುತ್ತೇವೆ!!

**ಗೋವಿಂದಾ! ಗೋವಿಂದಾ! ಗೋವಿಂದಾ!!**



# ಬ್ರಹ್ಮೋತ್ಸವದಲ್ಲಿ ಹರಿದಾಸರು

– ಡಾ.ಎಸ್. ನಂಜುಂಡಸ್ವಾಮಿ
7899110310

ಪ್ರಾಚೀನ ಕರ್ನಾಟಕ ದೇಶಕ್ಕೂ ತಿರುಮಲೆಯ ವೇಂಕಟರಮಣನಿಗೂ ಅವಿನಾಭಾವ ಸಂಬಂಧವಿದೆ. ಹರಿದಾಸರ ಕೀರ್ತನೆಗಳಿಂದ, ವಿಜಯನಗರ ಅರಸರಾದ ಕೃಷ್ಣದೇವರಾಯ, ಅಚ್ಯುತರಾಯರ ಕಾಲದ ಶಾಸನಗಳಿಂದ, ತಿರುಪತಿ ಗಿರಿಯ ವೆಂಕಟೇಶನ ಮೇಲಿನ ಈ ಭಕ್ತಿ ಭಾವನೆಗಳ ವಿಶೇಷ ಸಂಬಂಧದ ಆಳ ಅಗಲಗಳ ಹರವು ತಿಳಿದು ಬರುತ್ತದೆ. ಹರಿದಾಸರಿಗೆ ಕ್ಷೇತ್ರ ದರ್ಶನ ಶಾಸ್ತ್ರ ವಿಧಿಸಿದ ಕಟ್ಟಳೆ. "ಗಾತ್ರವ ಬಳಲಿಸಿ ಶ್ರೋತ್ರದಿ ಕೇಳುತ್ತ ಯಾತ್ರೆಯ ಮಾಡು ವೇಂಕಟಪತಿ ಮೂರ್ತಿಯ ನೇತ್ರದಿ ನೋಡು" ಎಂದು ವಾದಿರಾಜರು. "ದೇಶವನೆ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿ ದುರಾಶೆಯನು ತೊರೆದು" ಎಂದು ಪುರಂದರದಾಸರು, "ತೀರ್ಥಕ್ಷೇತ್ರಗಳ ಮೂರ್ತಿ ಮಹಿಮೆಗಳ ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿ" ಎಂದು ಜಗನ್ನಾಥದಾಸರು ಹೇಳಿದ್ದಾರೆ. ದಾಸರುಗಳು ಪ್ರಸಿದ್ಧವಾದ ಕ್ಷೇತ್ರಗಳಿಗೆ ಭೇಟಿ ಮಾಡಿ,ಅಲ್ಲಿ ಸಾಧ್ಯವಾದಷ್ಟು ವಾಸ್ತವ್ಯ ಮಾಡಿ ತಮ್ಮ ಇಷ್ಟದೈವಕ್ಕೆ ತ್ರಿಕರಣ ಪೂರ್ವಕವಾಗಿ ಸೇವೆ ಸಲ್ಲಿಸಿ ಅಲ್ಲಿನ ಭಾಗವತ ಭಕ್ತ ಮಹಾ ಜನರೊಡನೆ ಸೇರಿ ಸ್ತುತಿ ಕೀರ್ತನೆಗಳನ್ನು ರಚಿಸಿ ಹಾಡಿ ಹೊಗಳಿ ತಣಿಯುತ್ತಿದ್ದರು.

ತಿರುಮಲೆ ಜಗತ್ ಪ್ರಸಿದ್ಧವಾದ ಕ್ಷೇತ್ರ,ಕೃತ ಯುಗದಲ್ಲಿ ವೃಷಭಾದ್ರಿಯೆಂದು, ತ್ರೇತಾಯುಗದಲ್ಲಿ ಅಂಜನಾದ್ರಿಯೆಂದೂ,ದ್ವಾಪರಯುಗದಲ್ಲಿ ಶೇಷಾಚಲವೆಂದೂ, ಕಲಿಯುಗದಲ್ಲಿ ವೇಂಕಟಾಚಲವೆಂದೂ ಪ್ರಸಿದ್ಧವಾದುದು. ಇಲ್ಲಿ ಏಳು ಬೆಟ್ಟಗಳ ಸಾಲಾಗಿ ಇದ್ದು ಇದನ್ನು ಸಪ್ತಗಿರಿ ಎಂದು ಕರೆಯುತ್ತಾರೆ. ಕ್ರಿ.ಸ್ತ. ಶಕದ ಮೊದಲ ಶತಕಗಳಲ್ಲಿಯೇ ಅನೇಕ ಆಳ್ವಾರರುಗಳು ಈ ಕ್ಷೇತ್ರವನ್ನು ಸಂದರ್ಶಿಸಿ ತಮ್ಮ ಪಾಶುರಗಳಲ್ಲಿ ವೆಂಕಟೇಶನನ್ನು ಹಾಡಿ ಹೊಗಳಿದ್ದಾರೆ. ರಾಮಾನುಜಾಚಾರ್ಯರು ತಿರುಪತಿಯಲ್ಲಿದ್ದು ಇಲ್ಲಿಯ ನಿತ್ಯ ಪೂಜಾಕೈಂಕರ್ಯಗಳನ್ನು ಸುವ್ಯವಸ್ಥೆ ಗೊಳಿಸಿದರು.

ಭಾರತೀಯ ಧಾರ್ಮಿಕ ಸುಧಾರಣಾ ಚಳುವಳಿ ಮತ್ತು ಧಾರ್ಮಿಕ ಸಾಹಿತ್ಯ ಕ್ಷೇತ್ರದಲ್ಲಿ ಕರ್ನಾಟಕದ ಹರಿದಾಸ ಪರಂಪರೆಯ ಪಾತ್ರ ಬಹಳ ಮಹತ್ವದ್ದು. ಕರ್ನಾಟಕದಲ್ಲಿ ಮಾಧ್ವ, ಶ್ರೀವೈಷ್ಣವ ಮತ್ತು ಸ್ಮಾರ್ತ ಭಾಗವತ ಪರಂಪರೆಯ ಸುಮಾರು 200 ಹರಿದಾಸರುಗಳನ್ನು ಗುರುತಿಸಲಾಗಿದೆ. ಕರ್ನಾಟಕದ ಎಲ್ಲ ಪಂಥದ ಹರಿದಾಸರಿಗೆ ತಿರುಮಲೆಯಲ್ಲಿ ನೆಲೆಸಿರುವ ವೇಂಕಟರಮಣ ಅಥವಾ ತಿರುಪತಿಯ ತಿಮ್ಮಪ್ಪನೆಂದರೆ ಬಹಳ ಅಭಿಮಾನದ ದೈವ. ಬಹುತೇಕ ಕರ್ನಾಟಕದ ಹರಿದಾಸರೆಲ್ಲರೂ ತಿರುಪತಿಗೆ ಹೋಗಿ, ಅಲ್ಲಿ ಕೆಲವು ಕಾಲ ನೆಲಸಿದ್ದು, ತಿರುಮಲೆಯ ವೇಂಕಟರಣನ ಸೇವೆಯನ್ನು ಮಾಡಿ, ಅವನ ಬಗ್ಗೆ ಕೀರ್ತನೆಗಳನ್ನು ರಚಿಸಿ, ಅವನನ್ನು ಎಷ್ಟು ಹಾಡಿಹೊಗಳಿದರೂ ತಣಿಯರು. ತಿರುಪತಿಯ ಹೆಗ್ಗಳಿಕೆಯನ್ನು, ವೇಂಕಟರಮಣನ ಸೊಬಗನ್ನು, ಅಲ್ಲಿ ಪೂಜಾ ಮಹೋತ್ಸವಗಳನ್ನು ಕಣ್ಣಾರೆ ಕಂಡು ಹಾಡಿ ನಲಿದಿದ್ದಾರೆ. ಕರ್ನಾಟಕದ ದಾಸಸಾಹಿತ್ಯದ ಆದ್ಯ ಪ್ರವರ್ತಕರೆನಿಸಿದ ನರಹರಿ ತೀರ್ಥರಿಂದ ಹಿಡಿದು ಗೋವಿಂದವಿಠಲ ದಾಸರವರೆಗೆ ಸುಮಾರು 50-60 ಜನ ದಾಸರು ದಾಸಸಾಹಿತ್ಯ ಪರಂಪರೆಯಲ್ಲಿ ಅದ್ಯರೆನಿಸಿದ್ದಾರೆ. ಅವರಲ್ಲಿ ಕೆಲವು ದಾಸವರೇಣ್ಯರು ತಿರುಪತಿ ಗಿರಿವಾಸನ ಮೇಲೆ ರಚಿಸಿದ ಕೀರ್ತನೆಗಳಿಂದ ತಿರುಪತಿ-ತಿರುಮಲೆಯ ಇತಿಹಾಸವನ್ನು ಮತ್ತು ವೆಂಕಟೇಶ್ವರನ ವೈಭವವನ್ನು ಕಟ್ಟಿ ಕೊಡಬಹುದು. ಸಾಮಾನ್ಯವಾಗಿ ಕರ್ನಾಟಕದ ಹರಿದಾಸರೆಲ್ಲರೂ ತಿರುಮಲೆಯಲ್ಲಿ ನಡೆಯುವ ಬ್ರಹ್ಮೋತ್ಸವದ ಕಾಲಕ್ಕೆ ಅಲ್ಲಿ ಸೇರುತ್ತಿದ್ದರು. ಬ್ರಹ್ಮೋತ್ಸವದ ವೈಭವವನ್ನು ಕಣ್ಣಾರೆ ಕಂಡು ಅದನ್ನು ತಮ್ಮ ಕೀರ್ತನೆಗಳಲ್ಲಿ ನೇರವಾಗಿ ಪರೋಕ್ಷವಾಗಿ ವರ್ಣಿಸಿ ಹಾಡಿ ಸ್ತುತಿಸಿದ್ದಾರೆ.

ಶ್ರೀ ಪಾದರಾಜರು ತಮ್ಮ ಶಿಷ್ಯರಾದ ವ್ಯಾಸರಾಯರಿಗೆ ತಿರುಮಲೆಯ ವೇಂಕಟೇಶನ ಪೂಜಾ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಟ್ಟರು. ವ್ಯಾಸ ರಾಜರು ಕ್ರಿ.ಶ.



# ಹಂಸವಾಹನೋತ್ಸವ

ಹಂಸವು ತನ್ನ ಹಂಸ ಕ್ಷೀರ ನ್ಯಾಯಕ್ಕೆ ಪ್ರಸಿದ್ಧ, ಹಾಲಿನಲ್ಲಿ ಮಿಶ್ರಿತವಾದ ನೀರನ್ನು ಬಿಟ್ಟು ಅದರಲ್ಲಿಯ ಹಾಲನ್ನು ಮಾತ್ರ ಸೇವಿಸುವ ಪಕ್ಷಿ ಹಂಸ, ನಮ್ಮ ಮನ ಹಂಸದ ಬಣ್ಣದಂತೆ ಶುದ್ಧವಾಗಿರಬೇಕು. ಮನದಲ್ಲಿ ಹಂಸದ ತೂಕದಷ್ಟೇ ಹಗುರವಾಗಿರಬೇಕು ಅಂದರೆ ಸಂಸಾರದ ಬಂಧನದ ಭಾರಗಳು ಆಧ್ಯಾತ್ಮದ ಜ್ಞಾನಕ್ಕೆ ಬಾಧಕವಾಗಬಾರದು. ಹೀಗೆ ಬೇರೆ ಪರಮಾತ್ಮನಂತೆ ವೇಷ ಹಾಕಿದವರನ್ನು ಹಿಂದೆ ಸರಿಸಿ ಪ್ರಪಂಚವನ್ನೇ ಉದ್ಧರಿಸುತ್ತಿರುವ ಪರಮಾತ್ಮನನ್ನು ಮಾತ್ರ ಆರಿಸಿಕೊಳ್ಳುವ ಹಂಸದಂತೆ ನಮ್ಮ ಭಕ್ತಿ ಇರಬೇಕು.

1486 ರಿಂದ 1498 ರ ವರೆಗೆ ಶ್ರೀನಿವಾಸನ ಪೂಜಾ ಕೈಂಕರ್ಯವನ್ನು ನಡೆಸಿದರು. ಕೊನೆಗೆ ಮೂಲ ಅರ್ಚ ಕರ ಮನೆ ತನದವರಿಗೆ ಪೂಜಾ ಕೈಂಕರ್ಯಗಳ ಹಕ್ಕನ್ನು ಹಿಂದಿರುಗಿಸಿ ವಿಜಯನಗರಕ್ಕೆ ಹಿಂದಿರುಗಿದರೆಂದು ಇತಿಹಾಸದಿಂದ ತಿಳಿದು ಬರುತ್ತದೆ. ವ್ಯಾಸರಾಯರು ತಿರುಮಲೆಯ ದೇವಾಲಯದ ಗರ್ಭಗುಡಿಯ ಶಿಖರಕ್ಕೆ ಚಿನ್ನದ ಕವಚವನ್ನು ಹೊದಿಸಿದರು ಮತ್ತು ಗೋಪುರದ ಉತ್ತರ ದಿಕ್ಕಿನ ವಿಮಾನ ದಲ್ಲಿ ಶ್ರೀನಿವಾಸನ ಮೂರ್ತಿಯನ್ನು ನಿರ್ಮಿಸಿದರು ಎಂದು ತಿಳಿದು ಬರುತ್ತದೆ. ಈಗಲೂ ಭಕ್ತರು ವಿಮಾನ ಶ್ರೀನಿವಾಸನ ದರ್ಶನವನ್ನು ಮಾಡುತ್ತಾರೆ. ವ್ಯಾಸರಾಯರು ತಿರುಮಲೆಯ ವೆಂಕಟರಮಣನ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿದರು.

ವ್ಯಾಸರಾಯರ ಶಿಷ್ಯರಾದ, ದಾಸಶ್ರೇಷ್ಠರಾದ ಪುರಂದರದಾಸರ ಇಷ್ಟದೈವ "ಶೇಷಗಿರಿಯ ಮೇಲೆ ವಾಸವಾಗಿಹ ಸಾಸಿರ ನಾಮದ ವೇಂಕಟರಮಣ'' "ಕಲೌ ವೇಂಕಟನಾಯಕಃ''ಎಂಬುದು ಅವರ ಅಭಿಮತ. "ವೇಂಕಟರಮಣನೆ ಬಾರೋ, ಶೇಷಚಲವಾಸನೆ ಬಾರೋ''ಎಂದು ಅರ್ತರಾಗಿ ವೆಂಕಟರಮಣನನ್ನು ಕರೆಯುತ್ತಾರೆ . ತಿರುಮಲೇಶನನ್ನು ಕುರಿತು ಅವರು ಸುಮಾರು 50ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾರೆ. ಪುರಂದರ ದಾಸರು ಕ್ರಿ.ಶ. 1486 ರಿಂದ 1498 ರ ವರೆಗೆ ತಿರುಮಲೆಯ ಬೆಟ್ಟದ ಮೇಲೆ ನೆಲೆನಿಂತು ದೇವರಿಗೆ ನಿತ್ಯಾರ್ಚನೆ ಸಲ್ಲಿಸುತ್ತಿದ್ದರು ಎಂದು ಪ್ರತೀತಿ ಇದೆ. ಬ್ರಹ್ಮೋತ್ಸವದ ಕಾಲದಲ್ಲಿ ಕಾಶಿ ರಾಮೇಶ್ವರ ಆದಿಯಾಗಿ ದೇಶದ ನಾನಾ ಕಡೆಗಳಿಂದ ಬಂದಿದ್ದ "ಜನಗಳ ಕೂಟ, ಪರಿಷೆಯ ಗುಂಪು ಮರಗಳ ತೋಪಿನ ತಂಪು, ಬ್ರಾಹ್ಮಣರ ಊಟ, ಕೋಲಾಟ'' ಮೊದಲಾದವು ತಿರುಮಲೆಯಲ್ಲಿದ್ದಿತೆಂದು ವರ್ಣಿಸಿದ್ದಾರೆ. "ಪಾಪ ವಿನಾಶಿನಿ ಸ್ನಾನ ಹರಿ ಪಾದೋ ಕಪಾವನ'' "ಉರಗಾದ್ರಿಯಲಿ ಚಂದ್ರ ಪುಷ್ಕರಣಿ ಮೊದಲಾದ ಪರಿ ಪರಿ ತೀರ್ಥದಲ್ಲಿ ಮುಣುಗಿ ಮುಣುಗಿ ತಿರುವೆಂಗಳಪ್ಪನ'' ದರ್ಶನ ಮಾಡಿದ್ದನ್ನು ಹೇಳುತ್ತಾರೆ. "ಮೂಡಲ ಗಿರಿಯಲಿ ನಿಂತ ಮುದ್ದು ವೆಂಕಟಪತಿ ಬಲವಂತ ಈಡಿಲ್ಲ ನಿನಗೆ ಶ್ರೀಕಾಂತ'' ಎಂದು ಸ್ತುತಿಸುತ್ತಾರೆ. "ತಪ್ಪು ಗಾಣಿಕೆ ಕಪ್ಪಗಳನ್ನು ಸಪ್ತ ದ್ವೀಪಗಳಿಂದ ತರಿಸುವ ಉಪ್ಪು ಓಗರ ಗಳನೆ ಮಾಡಿಸಿ ಉಚಿತ ದಿಂದಲಿ ಹಣವಗಳಿಸುವ ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ ಒಪ್ಪದಲಿ ಕ್ರಯ ಮಾಡಿಕೊಡಿಸುವ ಅಪ್ಪ ವೆಂಕಟರಮಣ'' "ಕೇಸಕ್ಕಿ ಅನ್ನನ ತಿಂಬ ವನ, ಬಡ್ಡಿಕಾಸು ಬಿಡದೆ ಹೊನ್ನ ಬಳಸಿಕೊಂಬನ. ದೋಸೆ, ಅನ್ನವ ಮಾರಿಸುವನ ತನ್ನ ದಾಸರ ಮೇಳದಿ ಕುಣಿದಾಡುವನ'' ಎನ್ನುತ್ತಾರೆ. ಸುಮಾರು ಕ್ರಿ.ಶ. 1500 ನೇ ಇಸವಿಯಲ್ಲಿಯೇ ತಿರುಪತಿಯಲ್ಲಿ ಪೊಂಗಲ್, ಪುಳಿಯೋಗರೆ, ತೀರ್ಥ,ವಡಮಾಲೆ ಇವುಗಳನ್ನು ಭಕ್ತರಿಗೆ ಮಾರುವ ಮೂಲಕ ಅಪಾರ ಹಣ ಸಂಗ್ರಹ ಆಗುತ್ತಿದ್ದುದು, ದಾಸರ ಮೇಳವೇ ನೆರೆಯುತ್ತಿದ್ದ ಅಂಶ ಇದರಿಂದ ತಿಳಿದು ಬರುತ್ತದೆ.

ಕನಕದಾಸರು ವಿಶಿಷ್ಟಾದ್ವೈತ ಪರಂಪರೆಯನ್ನು ಅನುಯಾಯಿಗಳು, ತಿರುಪತಿಯ ತಿಮ್ಮಪ್ಪನ ವರಪ್ರಸಾದದಿಂದ ಜನಿಸಿದ ಅವರ ಜನ್ಮ ನಾಮ ತಿಮ್ಮಪ್ಪ. ಕೃಷ್ಣದೇವರಾಯನ ರಾಜಗುರು ತಿರುಮಲೆ ತಾತಾಚಾರ್ಯರ ಶಿಷ್ಯರು. ಆದರೂ ವ್ಯಾಸರಾಯರಿಂದ ದಾಸ ದೀಕ್ಷೆ ಪಡೆದು ಪುರಂದರದಾಸರ ಜೊತೆಗೇ ಇದ್ದುಕೊಂಡು ದಾಸ ಸಾಹಿತ್ಯ ರಚನೆ ಮಾಡಿದರು. ಅವರೂ ಕೂಡಾ ತಿರುಪತಿಗೆ ಹೋಗಿದ್ದರು. "ಚೊಕ್ಕ ಕನಕಪ್ಪನ ಹಿಂದೆ ನಾ ತಿರುಪತಿಗೆ ಬಂದೆ "ತಿರುಪತಿಯೊಳು ನೆಲೆಸಿಹ ವೆಂಕಟೇಶನು ನೀನು, ಚರಣ ಕೆರಗುವ ಕನಕದಾಸನು ನಾನು'',ಏನೆಂದು ಕೊಂಡಾಡಿ ಸ್ತುತಿಸಲೋ ದೇವ ನಾನೇನು ಬಲ್ಲೆ ನಿನ್ನ ಮಹಿಮೆಗಳ ತಿರುಪತಿಯವಾಸ ಶ್ರೀವೆಂಕಟೇಶನೆ ನಿನ್ನ ಚರಣಸೇವಕರ ಸೇವಕ ನಾನು'', "ಭಕ್ತರದಾಸನೆಂದು ವೆಂಕಟೇಶ ನೀನೊಲಿದು ಬಂದಿದ್ದೀಯಾ'' ಕೊಡಿಸು ನಿನ್ನ ಭಕ್ತರ ಸಂಗವ ಕನಕದಾಸನೊಡೆಯ ವೆಂಕಟಾದ್ರಿಮಾಧವ "ಕನಕಪ್ರಿಯ ತಿರುಪತಿಯ ಗಿರಿಯಾದಿ ಕೇಶವ'' ಇಂತಹ ಅನೇಕ ಕೀರ್ತನೆ ಗಳನ್ನು ಅವರು ತಿರುಮಲೆಯ ವೇಂಕಟೇಶನ ಮೇಲೆ ರಚಿಸಿ ಹಾಡಿದ್ದಾರೆ. ತಾಳ್ಲಪಾಕ ಅನ್ನಮಾಚಾರ್ಯರನ್ನು ಕನಕದಾಸರು ಭೇಟಿಯಾಗಿದ್ದರೆಂದು ಮಹಿಪತಿದಾಸರ ಮಗ ಕಾಖಂಡಕಿ ಕೃಷ್ಣದಾಸರ ಕೀರ್ತನೆಯೊಂದರಿಂದ ತಿಳಿದು ಬರುತ್ತದೆ.

ಇದೇ ಕಾಲದಲ್ಲಿದ್ದ ವಾದಿರಾಜರು (1540-1600) ತಿರುಪತಿಯ ಬೆಟ್ಟಕ್ಕೆ ಬಂದಾಗ ಅವರಿಗೆ ಇಡೀ ಬೆಟ್ಟ, ಒಂದು ಸಾಲಿಗ್ರಾಮ ಶಿಲೆಯಂತೆ ಕಂಡು ಬಂದಿತೆಂದು, ಸಾಲಿಗ್ರಾಮ ಶಿಲೆಯನ್ನು ಕಾಲಿನಿಂದ ತುಳಿಯಬಾರದೆಂದು ತಮ್ಮ ಮೊಣಕಾಲಿನಿಂದಲೇ ಬೆಟ್ಟವನ್ನು ಹತ್ತಿರೆಂದು ಪ್ರತೀತಿ ಇದೆ.''ಸೇವಕನೆಲೋ ನಾನು ನಿನ್ನಯ ಪಾದ ಸೇವೆ ನೀಡೆಲೋ ನೀನು, ಪಂಕಜಾಸನ ವಿನುತ ತಿರುಪತಿ ವೇಂಕಟ ಬಿರುದಾಂಕ ಜಯಜಯ, ಯಶೋಧೆ ಕಂದ ಹರಿಗೋವಿಂದ ಶೇಷಗಿರಿಯಲಿ ನಿಂದ''. ''ಎಂದು ಕಾಂಬೆನು ಎನ್ನ ಸಲಹುವ ಬಂಧುಬಳಗ ನಮ್ಮಪ್ಪನ ತಿರುಪತಿಲಿಪ್ಪನ ವರಾಹತಿಮ್ಮಪ್ಪನ,ಸ್ವಾಮಿ ಪುಷ್ಕರಣಿಯಲಿ ಸ್ನಾನ ನೇಮಕ ಮಾಡುವೆ ಪುಣ್ಯಕ್ಷೇತ್ರವ ನೋಡುವೆ'',''ಸಾರಿದೆನೋ ನಿನ್ನ ವೆಂಕಟರಮಣ, ದೇಶ ದೇಶದವರ ಪೊರೆವಂತೆ ಪೊರೆಯೆನ್ನ ಶೇಷಾಚಲ ಘನ್ನ'' ಈ ಮೊದಲಾದ ಕೀರ್ತನೆಗಳಲ್ಲಿ ವಾದಿರಾಜರು ತಿರುಪತಿಗೆ ಹೋಗಿ ಬ್ರಹ್ಮೋತ್ಸವ ಕಾಲದಲ್ಲಿ ಶ್ರೀನಿವಾಸನ ಪೂಜಾ ಕೈಂಕರ್ಯಗಳನ್ನು ಮಾಡಿ ತಿರುಪತಿ ಗಿರಿ ವಾಸನ ಮೇಲೆ ಅನೇಕ ಕೀರ್ತನೆಗಳನ್ನು ರಚಿಸಿರುವುದು ತಿಳಿದು ಬರುತ್ತದೆ.''ಬ್ರಹ್ಮಾಂಡ ಮಾದ್ಯಃ ಪುಮಾನ್ ಶ್ರೀಮದ್ವೇಂಕಟ ಭೂಧರಣೇಂದ್ರ ರಮಣಃ ಕುರ್ಯಾದ್ದರಿಮಂಗಲಮ್ ಎಂದು ಅಂತ್ಯವಾಗುವ ಶ್ರೀ ವೆಂಕಟೇಶ ಮಂಗಲಾಷ್ಟಕವನ್ನೂ ವಾದಿರಾಜರು ರಚಿಸಿದ್ದಾರೆ.

ಕಾಖಂಡಕಿಯ ಪ್ರಸನ್ನ ವೇಂಕಟದಾಸರು ತಿರುಪತಿಯ ವೆಂಕಟೇಶನಿಂದಲೇ ಅಂಕಿತವನ್ನು ಪಡೆದರೆಂದು ಹೇಳುತ್ತಾರೆ ''ಪ್ರಸನ್ನವೇಂಕಟ ರಮಣ/ವೆಂಕಟೇಶ/ ವೆಂಕಟಾದ್ರೀಶ'' ಅವರ ಅಂಕಿತನಾಮ. ''ಅಂಜಿಕಿನ್ಯಾಕೆನಗೆ ಕಂಜನಾಭ ಶ್ರೀನಿವಾಸನ ದಯವಿರಲು, ಆವ ದೇಶದಲಿರೆ ಆವ ಕಾಲದಲಿರೆ ಸೇವೆಗೆ ನಾ ತಪ್ಪೆ ಕೃಪೆ ತಪ್ಪಿಸ ಬೇಡ ಭಾವಿಕ ರೊಡೆಯ ಶ್ರೀಪ್ರಸನ್ನ ವೇಂಟಾದ್ರೀಶ'' ಎಂದೇ ಅವರು ಬ್ರಹ್ಮೋತ್ಸವ ಕಾಲದಲ್ಲಿ ತಿರುಪತಿಗೆ ಹೋಗುತ್ತಿದ್ದುದನ್ನು ಹೇಳಿದ್ದಾರೆ. ''ಸಾರ್ಥಕವು ಸದ್ಯ ಸಾಧುನಿಕರದ ಗಾತ್ರ ಕ್ಷೇತ್ರದ ಯಾತ್ರೆಯ ಬಿಡದೆ, ಸಾಧುಪ್ರಿಯ ಪ್ರಸನ್ನ ವೇಂಕಟ ರಮಣನು ಸಾಧುಗಳಿಗೆ ಮೆಚ್ಚಿದವರಿಗೆ ಮೆಚ್ಚುವನು'' ಎಂದು ಹೇಳಿ ತಿರುಪತಿಯ ಯಾತ್ರೆಯ ಮಹತ್ವವನ್ನು ಹೇಳಿದ್ದಾರೆ.

ದಾಸ ಸಾಹಿತ್ಯ ಮತ್ತು ದಾಸಪರಂಪರೆಯನ್ನು ಎರಡನೆಯ ಹಂತದಲ್ಲಿ ಪುನರುಜ್ಜೀವನಗೊಳಿಸಿದ ಚೇಕಲಪರವಿಯ ವಿಜಯದಾಸರು (1682- 1773) ತಿರುಪತಿಯಲ್ಲಿ ನಡೆಯುತ್ತಿದ್ದ ಬ್ರಹ್ಮರಥೋತ್ಸವಕ್ಕೆ ತಪ್ಪದೇ ಹೋಗುತ್ತಿದ್ದರು. ಸುಳಾದಿಯೊಂದರಲ್ಲಿ ತಿರುಪತಿ ಕ್ಷೇತ್ರವನ್ನು ಇಳೆಯ ವೈಕುಂಠವೆಂದು ಹೇಳಿ. ಶ್ರೀನಿವಾಸ ದೇವಾಲಯವನ್ನು ವರ್ಣಿಸಿದ್ದಾರೆ. ''ತಳಿರು ತೋರಣ ಕಟ್ಟಿ ಪರಮಮಂಗಳವಾಗಿ ಸುಳಿದಿವೆ. ಬಲು ಕಾಂತಿ ಗಗನ ಮುಟ್ಟಿ ಚೆಲುವ ಮಹಾದ್ವಾರ ಪರಿಪರಿ ಮಾಟವಾ ಬಾಗಿಲು, ಅಲ್ಲಿ ಕುಳಿತಿದ್ದ ದ್ವಾರದವರು,ಒಳಗೆ ಗರುಡಗಂಬ ಮತ್ತೆ ಪ್ರಾಕಾರ ಮಧ್ಯಪೊಳಲು ಭೋಗಮಂಟಪ ಸುತ್ತ ಪೌಳಿ, ಕಳಶದಿಂದೊಪ್ಪುವ ವೈಚಿತ್ರ್ಯವಾದಾನಂದ ನಿಲಯ, ವಿಮಾನ, ಮ್ಯಾಲೆ ಗೋಚರಿಪ ಬಲು ಮೂರ್ತಿಗಳುಂಟು, ಬಲಭಾಗದಲಿ ಉತ್ತಮ ತೀರ್ಥವೊಂದು'' ಹೀಗೆ ಅಂದಿನ ತಿರುಮಲೆಯ ದೇವಾಲಯವನ್ನು ವರ್ಣಿಸಿರುವ ಸುಳಾದಿ ಇದೊಂದೇ ಎನ್ನಬಹುದು.

ತಿರುಪತಿಯ ಬ್ರಹ್ಮರಥೋತ್ಸವ, ಕಲ್ಯಾಣೋತ್ಸವಕ್ಕೆ ಬಂದ ಸಹಸ್ರಾರು ಭಕ್ತಜನಸಮೂಹವನ್ನು ನೋಡಿದ ವಿಜಯದಾಸರು ''ನಿನ್ನ ದರು

## ಹನುಮಂತ ವಾಹನ

**ನವರಾತ್ರಿಯ ಆರನೇ ದಿನ ಹನುಮಂತ ವಾಹನೋತ್ಸವವು ಇರುತ್ತದೆ. ಹನುಮಂತನು ರಾಮದೇವರ ಪರಮ ಭಕ್ತ . ದಾಸ್ಯ ಭಾವವನ್ನು ಹೊಂದಿದ್ದ ಆಂಜನೇಯ ದಾಸತ್ವವನ್ನು ಹೇಗೆ ಅನುಸರಿಸಬೇಕೆಂದು ಸ್ವತಃ ತಾನೇ ಜನರಲ್ಲಿ ತಿಳಿಸುತ್ತಾರೆ. ಹನುಮಂತ ದೇವರು ಬುದ್ಧಿ, ಬಲ, ಯಶ, ಸಾಹಸ, ಆರೋಗ್ಯ ಮತ್ತು ಶಕ್ತಿಯ ಪ್ರತೀಕ ಇಷ್ಟೆಲ್ಲ ಸಾಮರ್ಥ್ಯ ಇರುವವನಾದ ಹನುಮಂತ ದೇವರು ಎಲ್ಲರಿಗೂ ಪ್ರಾಣವನ್ನು ನೀಡುವ ವಾಯು ದೇವರ ಅವತಾರ ಅಂತಹ ವಾಯುದೇವರು ಪರಮಾತ್ಮನ ಸೇವೆಗೆ ಸತತ ನಿರತವಾಗಿರುತ್ತಾರೆ. ಹನುಮಂತ ದೇವರು ಸಾರುವುದು ನಮ್ಮಲ್ಲಿ ಎಷ್ಟೆಲ್ಲಾ ಶಕ್ತಿ ಇದ್ದರೂ ಸರ್ವ ಶಕ್ತನಾದ ಭಗವಂತನ ಭಕ್ತಿ ಮಾಡಬೇಕು ಎಂಬ ಸಂದೇಶವನ್ನು ನೀಡುತ್ತಾರೆ.**



ಶನಕೆ ಬಂದವನಲ್ಲವೋ, ಪುಣ್ಯವಂತರ ದಿವ್ಯಚರಣ ನೋಡಲಿ ಬಂದೆ, ಸೊಲ್ಲಿಗೆ ಕಂಭದಿ ತೋರಿದ ಮಹಾಮಹಿಮೆ ಅಲ್ಲಿ ಇಲ್ಲೇನಯ್ಯಾ ಬಲ್ಲ ಭಜಕರಿಗೆ, ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ ನೆಲೆಗಾಣನೆಲೆ ನೆರೆಹೊರೆಯೊಳು, ಒಲಿದ ಭಕುತರಿಗಾಗಿ ಮದುವೆ ಹಮ್ಮಿಕ್ಕೊಂಡೆ, ಸುಲಭ ದೇವರ ದೇವ ವಿಜಯವಿಠಲ ವೇಂಕಟಾ'' ಎಂದು ಉದ್ಗಾರವೆತ್ತಿದ್ದಾರೆ. ಬ್ರಹ್ಮೋತ್ಸವ ಕಾಲದಲ್ಲಿ ಉತ್ಸವವಾಹನ ಬೀದಿಲಿ ಮೆರೆಯುತ ಬರಲು ಸತ್ಸಂಗತಿಗೆ ಹರಿದಾಸರಲ್ಲದೆ ವತ್ಸಸಿರಿ ವಿಜಯವಿಠಲವತ್ಸ ಮುಂದುಲ್ಲದೆ ಧೇನುತಾಮುಂದೇನು''ಎಂದು ವೆಂಕಟೇಶ್ವರನ ಬ್ರಹ್ಮರಥೋತ್ಸವದ ಮುಂದೆ ಹೋಗುತ್ತಿದ್ದ ಹರಿದಾಸ ಸಮೂಹವನ್ನು ವರ್ಣಿಸಿದ್ದಾರೆ.

ವಿಜಯದಾಸರ ಶಿಷ್ಯರಾದ ಗೋಪಾಲದಾಸರು (1722 - 1865) ತಿರುಪತಿಗೆ ಹೋಗಿದ್ದಾಗ ''ಕೊಟ್ಟ ಬಿಡಾರದಲ್ಲಿ ಎಷ್ಟು ದಿನ ಜೀವಿಸಲೋ ಕಷ್ಟ ಪಡಲಾರೆ ಹರಿಯೇ ಪ್ರಾಣನಾಯಕ ಗುರುಗೋಪಾಲವಿಠಲ ಆನಂದ ನಿಲಯವಾಸ ಶ್ರೀಶ'' ಎಂದು ಕೇಳುತ್ತಾರೆ. ದೇವರ ದರ್ಶನ ಮಾಡಿ ''ಮೂರು ನಾಮಗಳ ಧರಿಸಿದ ಕಾರಣವೇನು ಸಾರಿ ಪೇಳೆಲೊ ಈಗಲೇ ಶ್ರೀರಮಾಪತಿ ವೆಂಕಟರಮಣ'' ಎಂದು ಕೇಳಿ ''ಕಾಲಕಾಲಕ್ಕೆ ಬರುವ ಭಕುತ ಜನಗಳ ವೃಂದ ದೃಷ್ಟಿ ತಾಕುವುದೆಂಬ ತೋರುವ ಬಗೆಯೋ'', ''ಮೂರು ಲೋಕಗಳಿಹವು ಮೂರು ರೂಪನು ನಾನು ಮೂರು ಮಾಳ್ಪೆನು ಜಗವ ಮೂರು ಗುಣದಿ ಮೂರು ತಾಪವ ಗೆದ್ದು ಮಾರ್ಗದಿ ಭಜಿಸಿ ಪಾರು ಮಾಡುವೆನೆಂದು ತೋರುವ ಬಗೆಯೋ'' ಎಂದೂ ಚಮತ್ಕಾರದಿಂದ ಉತ್ತರಿಸಿದ್ದಾರೆ. ತಿರುಪತಿಯಲ್ಲಿ ಭಕ್ತಜನ ಸಮೂಹ ಯಾವಾಗಲೂ ತುಂಬಿರುತ್ತಿತ್ತು ಎಂಬುದು ಇದರಿಂದ ತಿಳಿಯುತ್ತದೆ.

ಗೋಪಾಲದಾಸರ ಶಿಷ್ಯರಾದ ದಾಸಶ್ರೇಷ್ಠ ಜಗನ್ನಾಥದಾಸರಿಗೆ (1728-1809) ವೆಂಕಟಗಿರಿಯ ಮತ್ತು ಅಲ್ಲಿ ನೆಲೆಸಿರುವ ವೇಂಕಟರಮಣನನ್ನು ಎಷ್ಟು ಹೊಗಳಿದರೂ ಸಾಲದು ಜಗನ್ನಾಥದಾಸರು ಸುಮಾರು 15 ಕೀರ್ತನೆಗಳನ್ನು ತಿರುಪತಿ ಗಿರಿವಾಸನ ಮೇಲೆ ರಚಿಸಿ ಸ್ತುತಿಸಿದ್ದಾರೆ. ''ಆ ವೇಂಕಟ ಗಿರಿ ನಿಲಯನಂಘ್ರಿ ರಾಜೀವಯುಗಳಗಾ ನಮಿಸುವೆನು''ಎಂಬ ಕೀರ್ತನೆಯಲ್ಲಿ ತೊಂಡಮಾನ ರಾಜ ಮತ್ತು ಬ್ರಾಹ್ಮಣನ ಮೇಲೆ ಶ್ರೀನಿವಾಸನು ಕರುಣೆ ತೋರಿದ್ದನ್ನು ವೃದ್ಧ ಬ್ರಾಹ್ಮಣನಿಗೆ ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿಸಿ ಯೌವನವನ್ನು ನೀಡಿದ್ದ ಕಥೆಯನ್ನು ಹೇಳಿದ್ದಾರೆ. ''ನಾರಾಯಣಾದ್ರಿ ಕೃತವಾಸ ಶರಣು ತೋರಯ್ಯ ತವರೂಪ ರವಿಕೋಟಿಭಾಸ'' ಎಂಬ ಕೀರ್ತನೆಯಲ್ಲಿ ಆದಿಶೇಷ ಅಥವಾ ವಾಸುಕಿಯು ನಾರಾಯಣನನ್ನು ಕುರಿತು ತಪಸ್ಸು ಮಾಡಿ , ಆ ಬೆಟ್ಟಕ್ಕೆ ತನ್ನ ಹೆಸರನ್ನಿಡಬೇಕೆಂದು,ಅಲ್ಲಿ ವೇಂಕಟರಮಣನು ಬಂದು ನೆಲೆಸಬೇಕೆಂದು ಪ್ರಾರ್ಥಿಸಿದಾಗ ಸ್ವಾಮಿಯು ವರವನ್ನು ನೀಡಿದ ವಿಚಾರ ಇದೆ. ''ಪನ್ನಗಾದ್ರಿ ನಿವಾಸ ಸುದರುಶನ ಪಾಂಚಜನ್ಯಧರ ದೂರ್ವಾಸ ಪ್ರಮುಖ ಮುನಿ ಸನ್ಮಾನ ಕರುಣಿ''ಕೀರ್ತಿನೆಯಲ್ಲಿ ದೂರ್ವಾಸ ಮುನಿಗೆ ಅಭಯ ನೀಡಿದ ವಿಚಾರವಿದೆ. ''ರಥವನೇರಿದ ರಥಿಕನಾರೆ ಹೇಳಮ್ಮಯ್ಯ, ಭೂತಳ ಜನರಭಿಲಾಷೆ ಸಲಿಸಲು ವಾತಾಶನ (ಶೇಷ) ಗಿರಿಗಿಳಿದ ಕಾಣಮ್ಮಯ್ಯ'' ಕೀರ್ತನೆಯಲ್ಲಿ ಬ್ರಹ್ಮ ರಥೋತ್ಸವವನ್ನು ವರ್ಣಿಸಿದ್ದಾರೆ. ತೀರ್ಥ ಕ್ಷೇತ್ರಗಳ ವರ್ಣನೆಯಲ್ಲಿ ಸರಸ್ವತಿ ನದಿಯು ಪುಷ್ಕರಣಿಗಳೊಳಧಿಕಳೆಂದೆನಿಸಿ ಸ್ವಾಮಿ ಪುಷ್ಕರಣಿಯಲ್ಲಿ ಸರೋವರ ರೂಪದಲ್ಲಿ ನೆಲಸಿದ ಕಥೆಯನ್ನು ಹೇಳಿದ್ದಾರೆ.

ಹರಿದಾಸಿಯಾದ ಹರಪನಹಳ್ಳಿ ಭೀಮವ್ವನವರು ತಿರುಪತಿ ಗಿರಿಯನ್ನು, ತಿರುಮಲೆಯ ವೇಂಕಟೇಶನನ್ನು ಕಣ್ಣಿಗೆ ಕಟ್ಟುವಂತೆ ಸುತ್ತಿಸಿದ್ದಾರೆ. ''ಎಷ್ಟು ಹೇಳಲಿ ವೆಂಕಟಗಿರಿಯ ದೃಷ್ಟಿಗೆ ಬಹುಸಿರಿಯ ಬೆಟ್ಟವನೆ ಮನಸಿಟ್ಟೇರಲು ಬೇಡಿದ ಇಷ್ಟಾರ್ಥಗಳ ಈಡಾಡುವ ದೊರೆಯೇ,''ಚಿತ್ರ ವಿಚಿತ್ರದ ಮಹಾದ್ವಾರ ಚಿನ್ನದ ಗೋಪುರ ಸ್ವಚ್ಛವಾದ ಸ್ವಾಮಿ ಪುಷ್ಕರಣಿಯ ತೀರ,ಸುತ್ತಲು ಪ್ರಾಕಾರ '' ಹೀಗೆ ಅಂದಿನ ತಿರು ಮಲೆಯ ವರ್ಣನೆ ಸೊಗಸಾಗಿ ಮೂಡಿ ಬಂದಿದೆ. ''ತಪ್ಪುಗಾಣಿಕೆಯ ಬೇಡುವ ಸರ್ಪಶೈಲದ ತಿಮ್ಮಪ್ಪ ಕಪ್ಪವ ಕಾಸು ಕವಡೆ ಮುಡುಪು ಹಾಕದೆ ತಾನೊಪ್ಪ ಜಪ್ಪಿಸಿ ನೋಡುವ ಜನರ ತಪ್ಪ,ದೇಶದೇಶದೊಳು ಈತನ ವಾರುತೆಯು ತುಂಬಿದ ಕೀರುತಿಯು''ಎಂದು ಜನರು ಇಷ್ಟ ದೈವ ವೇಂಕಟರಮಣನಿಗೆ ಜನತೆ ಅಂದಿನಿಂದಲೂ ಭಕ್ತಿಯಿಂದ ಕಾಣಿಕೆಯನ್ನು ಒಪ್ಪಿಸುತ್ತಿದ್ದ, ತಿರುಪತಿಯು ಇಡೀ ದೇಶದಲ್ಲೇ ಪ್ರಸಿದ್ಧವಾಗಿದ್ದ ವಿಚಾರವನ್ನು ಹೇಳಿದ್ದಾರೆ.

ನೆಕ್ಕರ ಕೃಷ್ಣದಾಸರು ಉಡುಪಿಯ ಕೃಷ್ಣಾಪುರದ ವಿಭುದೇಂದ್ರ ತೀರ್ಥರ ಶಿಷ್ಯರು. ತಿರುಪತಿಯ ತಿಮ್ಮಪ್ಪನ ಭಕ್ತರು ''ವರಾಹ ತಿಮ್ಮಪ್ಪ'' ಇವರ ಅಂಕಿತ. ತಿರುಮಲೆಯ ವೆಂಕಟೇಶನ ಬಗ್ಗೆ ಅಪಾರ ಭಕ್ತಿಯುಳ್ಳ ಅವರು, ತಿರುಮಲೆ ಕ್ಷೇತ್ರದ ಬಗ್ಗೆ, ವೇಂಕಟರಮಣನ ಬಗ್ಗೆ ಅನೇಕ ಸ್ವಾರಸ್ಯಕರ ವಿಷಯಗಳನ್ನುಳ್ಳ ಕೀರ್ತನೆಯನ್ನು ರಚಿಸಿದ್ದಾರೆ. ''ಅಂಗಡಿ ಗೋವಿಂದಣ್ಣನ ವಿಂಗಡಿಸಿರೋ, ಮುಂಗಡದ ಬಡ್ಡಿಯನು ಮುಂದೆ ಕಳುಹಿಸಿ ಬೆಟ್ಟದೊಳು ನಿಲ್ಲುವೆಯೋ ಕಟ್ಟುವೆಯೊ ರೊಕ್ಕವನು'',''ದೇಶ ದೇಶದಿಂದ ಕಪ್ಪ ಗಾಸಿಯಾಗದಂತೆ ತರಿಸಿ ಕೋಶಕಿಕ್ಕಿಕೊಂಬ ಲಕ್ಷ್ಮಿಯ ಈಶ''ಎಂದು ಹಾಡಿದ್ದು,ತಿರುಮಲಗಿರಿವಾಸನಿಗೆ ಜನರು ಅಪಾರ ಕಾಣಿಕೆಗಳನ್ನು ಅರ್ಪಿಸುತ್ತಿದ್ದ ವಿಷಯವನ್ನು ತಿರುಪತಿಯಲ್ಲಿ ಅಂಗಡಿಗಳ ಸಾಲುಗಳು ಇದ್ದುದನ್ನೂ ಹೇಳಿದ್ದಾರೆ.''ಸುಮ್ಮನೊಲಿವನೆ ಪರ ಬೊಮ್ಮನಾದ ತಿಮ್ಮರಾಯ,ಮಂದವಾರದ ದಿವಸದಲಿ ಮಡಿಯನುಟ್ಟುಕೊಂಡು ಗೋವಿಂದ ಎನ್ನುತ ನಾಮ ವಿಕ್ಕಿ ವಂದನೆಯ ಮಾಡದನಕ'' ಎನ್ನುವ ಮೂಲಕ ಶನಿವಾರ ತಿಮ್ಮಪ್ಪನ ಪೂಜೆಗೆ ಶ್ರೇಷ್ಠವೆಂದು ಹೇಳಿದ್ದಾರೆ. ಹೀಗೆ ಕರ್ನಾಟಕದ ಹರಿದಾಸರುಗಳು ತಿರುಮಲೆಯ ತಿಮ್ಮಪ್ಪನ ಮೇಲೆ ರಚಿಸಿರುವ ಕೀರ್ತನೆಗಳನ್ನು ವಿಶ್ಲೇಷಿಸಿದರೆ ತಿರುಪತಿ-ತಿರುಮಲೆಯ ಇತಿಹಾಸವನ್ನು ಅಲ್ಲಿ ನಡೆಯುತ್ತಿದ್ದ ಬ್ರಹ್ಮರಥೋತ್ಸವದ ದೃಶ್ಯಗಳನ್ನೂ ಕಟ್ಟಿಕೊಡಬಹುದು.




ಭಾರತೀಯ ಸನಾತನ ಧರ್ಮವೆಂದು ಪ್ರಸಿದ್ಧವಾಗಿರುವ ಹಿಂದು ಧರ್ಮವು ಮೂಲಭೂತವಾಗಿ ಪಿತೃಗಳ ಆರಾಧನೆಗೆ ಮಹತ್ವವನ್ನು ಕೊಟ್ಟಿದೆ. ವೇದಗಳು ಉಪನಿಷತ್ತುಗಳು ಪಿತೃಯಜ್ಞಕ್ಕೆ ವಿಶೇಷವಾದ ಸ್ಥಾನವನ್ನು ಕೊಟ್ಟಿವೆ. "ಪಿತೃಯಜ್ಞೇನಃ ಪ್ರಜಾಪತಿಃ ಪುರೋಡಾಷಮಷ್ಟಾಕಪಾಲಂನಿರ್ವಪತಿ" - ಎಂಬಂತಹ ಸಾಲುಗಳು ಪಿತೃಗಳ ಆರಾಧನಾ ಕ್ರಮವನ್ನು ವಿಶೇಷವಾಗಿ ಒತ್ತಿ ಹೇಳುತ್ತವೆ. ಅವರ ಆರಾಧನ ವಿಧಾನಗಳನ್ನು ಯಜ್ಞಕ್ಕೆ ಸಮಾನವೆಂದು ಯಜ್ಞವೆಂದೇ ಭಾವಿಸುವಂತೇ ಸಾರಿ ಹೇಳುತ್ತಿವೆ.

ಉಪನಿಷತ್ತುಗಳಲ್ಲಿ ಮುಖ್ಯವಾಗಿ ಶಿಕ್ಷಾವಲ್ಲಿಯು "ಮಾತೃದೇವೋಭವ - ಪಿತೃದೇವೋಭವ - ಆಚಾರ್ಯದೇವೋಭವ - ಅತಿಥಿದೇವೋಭವ...ಯಾನ್ಯನವದ್ಯಾನಿ ಕರ್ಮಾಣಿ, ನೋ ಇತರಾಣಿ." ಇತ್ಯಾದಿ ಮಹಾವಾಕ್ಯಗಳನ್ನು ಶ್ರುತಪಡಿಸುವುದರ ಮೂಲಕ ಲೋಕದಲ್ಲಿ ಮಾನವ ಜನ್ಮವನ್ನು ಪಡೆದು ಹುಟ್ಟುವ, ತನ್ನ ಜೀವಿತಕ್ಕೆ ಕಾರಣವಾಗಿರುವ ಹಾಗೂ ಲೋಕದಲ್ಲಿ ಆ ಜೀವವು ಏಳಿಗೆಯಾಗುವುದಕ್ಕೆ ಸಂಪೂರ್ಣ ಸಹಕಾರವನ್ನು ನೀಡಿ ಪೋಷಿಸಿ ಬೆಳಸುವ ಇತರ ಮಾತಾ-ಪಿತೃ-ಸ್ವರೂಪಗಳನ್ನು ಗೌರವದಿಂದ ನೋಡಬೇಕಾದ ನಾವು, ಅವರ ಋಣಗಳನ್ನು ತೀರಿಸಿ ವಿಮುಕ್ತರಾಗಬೇಕಾದ ಕರ್ತವ್ಯವನ್ನು ಸಾರಿ ಹೇಳುತ್ತಿವೆ. "ಅನೃಣಾಃಪರಸ್ಮಿಗ್ಗ್ ಸ್ತೃತೀಯೇ ಲೋಕಾಃ" ಎನ್ನುವ ಅರಣ್ಯಕಗಳು ಪಿತೃಗಳ ಋಣವನ್ನು ತೀರಿಸುವುದೇ ಪುತ್ರರ ಜೀವಿತ ಗುರಿಯಾಗಿರಬೇಕೆಂದು ಹೇಳುತ್ತಿವೆ.

ಹೀಗಾಗಿಯೇ ಪ್ರತಿಯೊಂದು ಜೀವಿಯ ಜೀವಿತ ಕಾಲದ ಬೆಳವಣಿಗೆಯು ಬೇರೊಬ್ಬ ಜೀವಯುಗಳ (ತಂದೆ ತಾಯಿ/ ಪೋಷಕರ) ಋಣದಲ್ಲಿಯೇ ಆಶ್ರಿತ ಜೀವಿತ ಋಣಿಯಾಗಿ ಬೆಳೆಯಬೇಕಾದ ಅನಿವಾರ್ಯತೆಯು ಇದೆ ಎಂಬುದನ್ನು ಸೂಚಿಸುತ್ತಿದೆ. ಅದೊಂದು ಲೋಕ ಮತ್ತು ಲೋಕಾಂತರಿತಗಳ ಸಂಬಂಧವನ್ನು ಬೆಸೆದು ಲೋಕಾ ಮತ್ತು ಅ-ಲೋಕಗಳ ಸಂಬಂಧಗಳನ್ನು ಭಾವ ಚಿಂತನೆಗಳಲ್ಲಿ ಸ್ಮೃತಿಗಳಲ್ಲಿ ನೆನೆಸಿಕೊಳ್ಳುವುದು ಆಶ್ರೀತ ಜೀವಿಯ ಮನೋಧರ್ಮವಾಗಿ, ಆ ಚಿಂತನೆಗಳಿಂದ ಉಂಟಾಗುವ ವ್ಯಾಕುಲತೆಯಿಂದ ಮುಕ್ತರಾಗುವುದಕ್ಕಾಗಿಯೇ ಆಗಿದೆ. ದೇವಋಣ-ಪಿತೃಋಣ ಋಷಿ ಋಣಗಳನ್ನು ವಿಶೇಷವಾಗಿ ಹೇಳಿ ಆನಂತರದಲ್ಲಿ ಮಾನುಷ ಋಣವನ್ನು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಪಿತೃಗಳು ಎಂಬ ಪದವು ಹಲವು ವಿಭಾಗಗಳಲ್ಲಿ ಚದುರಿಕೊಂಡಿರುವುದುಂಟು. 1) ಪಿತೃ - ಪಿತಾಮಹ - ಪ್ರಪಿತಾಮರೆಂದೋ ಅಥವಾ ವಸುರುದ್ರಾದಿತ್ಯ ರೂಪಗಳೆಂದು ಗುರ್ತಿಸಿರುವುದು. 2) ದ್ವಾದಶ ಪಿತೃ 3) ಷೋಡಶ ಪಿತೃಗಳೆಂದು ವಿಭಾಗಿಸಿ ಆ ಪಿತೃಗಳಿಗೂ ಮತ್ತು ಕರ್ತೃವಿಗಿರುವ ಸಂಬಂಧಗಳನ್ನು ಹೆಣೆದು,ಆ ಮೂಲಕ ವಂಶಾಚಾರ, ಶಿಷ್ಟಾಚಾರ, ಸಖಾದಿ ಸಂಬಂಧಗಳನ್ನು ಕಾಲಾನುಗತವಾಗಿ ಮುಂದುವರೆಯುವಂತೆ ಮಾಡಿರುವುದು ಅತ್ಯಂತ ವ್ಯವಸ್ಥಿತವಾಗಿರುವ ಗೋತ್ರ ಸಂಬಂಧ ವಂಶ ವೃಕ್ಷಗಳ ಸಂಬಂಧಗಳನ್ನು ಒಳಗೊಂಡ ತರ್ಪಣ ವಿಧಾನಗಳೆನಿಸುತ್ತವೆ. ಈ ವಿಧಾನಗಳನ್ನು ಧಾಟಿ ಕ್ಷೇತ್ರ ಸಂಬಂಧಿತ ಶ್ರಾದ್ಧಾದಿ ಪ್ರಯೋಗಗಳನ್ನು ರೂಪಿಸಿರುವ ಶ್ರುತಿ - ಸ್ಮೃತಿ - ಇತಿಹಾಸ ಪುರಾಣಗಳು, ಪಿತೃಋಣದ ಮುಕ್ತಿಗಾಗಿ ನಡೆಸುವ ಕ್ಷೇತ್ರ ಕರ್ಮಾನುಷ್ಠಾನ ಫಲಗಳನ್ನು ನಿರೂಪಿಸಿವೆ.

ಇಲ್ಲಿ ಸ್ತ್ರೀ ಮತ್ತು ಪುರುಷ ರೂಪಗಳನ್ನು ತಂದೆ ಮತ್ತು ತಾಯಿಯರ ಸಂಬಂಧಗಳಲ್ಲಿ ಹುಟ್ಟಿಕೊಳ್ಳುವ ಸಂಬಂಧಿತ ಋಣಗಳನ್ನು ಕಲ್ಪಿಸಿಕೊಂಡ ಕರ್ತೃವು 32 ಧರ್ಮ ಪಿಂಡಗಳನ್ನು ಕ್ಷೇತ್ರಗಳಲ್ಲಿ ಪ್ರತ್ಯಕ್ಷವಾಗಿ ತಾನು ನೋಡಿದ್ದ ಪಿತೃಗಳ ಹೆಸರಿನಲ್ಲಿ ಈಗ ಅಭೌತಿಕ ರೂಪದಲ್ಲಿ ಪಿತೃದೇವತೆಗಳೆನಿಸಿರುವ ಜನ್ಮಧಾತಾದಿಗಳಿಗೆ ತಿಲ-ತರ್ಪಣ-ಪಿಂಡ ಪ್ರದಾನ ಅಗ್ನೌಕರಣಾದಿ ತ್ರಯ ವಿಧಾನಗಳಲ್ಲಿ ನೀಡುವುದು ಅತ್ಯಂತ ಶ್ರೇಯಸ್ಕರವಾದ ವ್ಯವಸ್ಥೆಯೆನಿಸಿದೆ ಈ ಮೂಲಕ ಕರ್ತೃವು ತನ್ನನ್ನು 'ಪಿತೃಮುಕ್ತಿ ಹೇತೂನ್' ಎನ್ನುವ ಶ್ರುತಿ ವಾಕ್ಯದದಂತೆ ಪಿತೃಗಳ ಋಣವನ್ನು ತೀರಿಸುವುದಕ್ಕಾಗಿ ಶ್ರಮಿಸುವ ಶ್ರದ್ಧೆಯನ್ನು ವಿಧೇಯತೆಯನ್ನು ಆಚಾರ್ಯಾದಿ ಬ್ರಾಹ್ಮಣರಲ್ಲಿ ತೋರಿಕೊಳ್ಳುವ ರೀತಿಯು ಹೃದಯ ಸ್ಪರ್ಶಿಯಾಗಿ ನಿಲ್ಲುತ್ತದೆ. ಈ ಮಹತ್ವದ ಅರ್ಥವನ್ನು ಪ್ರತಿಪಾದಿಸಿಕೊಂಡು ತನ್ನ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳುವುದರಲ್ಲಿಯೆ ಕರ್ತೃವಿನ ಧ್ಯೇಯವು ಯಶಸ್ಸನ್ನು ಪಡೆಯುತ್ತದೆಂದು ಭಾವಿಸಬಹುದು. ಹೀಗೆ ನಡೆದುಕೊಂಡಾಗ ಪಿತೃಗಳು ಸಂತುಷ್ಟರಾಗಿ , ತಮ್ಮ ವಂಶೀಕರಾಗಿ ಹುಟ್ಟಿದ ಮಕ್ಕಳಿಗೆ "ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿಚ। ಪ್ರಯಚ್ಛಂತು ತಥಾ ರಾಜ್ಯಂ ಸತ್ಯಾ ಪಿತಾ ಆಶಿಷಸ್ಸಂತು॥ "ಎಂಬ ಮಹಾವಾಕ್ಯದ ಮಹಾಫಲಗಳನ್ನು ಕರ್ತೃವು ಹೊಂದುವವನಾಗುತ್ತಾನೆಂದು ಕಾಮಿತ ಫಲಗಳನ್ನು ನೀಡಿ ಸಂರಕ್ಷಿಸುವ ದೈವಗಳೆನಿಸಿದ್ದಾರೆ.

ಇಂತಹ ಮಾತುಗಳನ್ನು ಸಾರಿ ಹೇಳುವ ವೈದಿಕ ಸನಾತನ ತತ್ವಗಳು "ಪಿತೃಪಕ್ಷ" ವೆಂಬ ಪರಿಕಲ್ಪನೆಯನ್ನು ಲೋಕಕ್ಕೆ ಪ್ರಕಟಪಡಿಸಿರುವುದನ್ನು ಇದರ ಹಿಂದಿರುವ ಸಾರ್ಥಕತೆಯನ್ನು ಅರ್ಥ ಮಾಡಿಕೊಂಡು ಕರ್ತೃವು ಕರ್ಮಾನುಷ್ಠಾನ ತತ್ಪರನಾದಾಗ ಆತನ ಜನ್ಮವು ಸಾರ್ಥಕವಾಗುವುದರಲ್ಲಿ ಸಂಶಯವಿಲ್ಲವೆಂದು ಪರಿಭಾವಿಸಬಹುದು.

# ನಾಡಹಬ್ಬ ದಸರಾ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621

ರಾಮಾಯಣ - ಮಹಾಭಾರತದ ರಚನೆಯ ಕಾಲದಿಂದಲೂ (ಹಲವು ಸಹಸ್ರ ವರ್ಷಗಳ ಕಾಲ್ಪನಿಕ ದಾಖಲೆ) ಭಾರತೀಯ ಸಂಸ್ಕೃತಿಯ ಒಂದು ಅಂಗವಾಗಿ ನವರಾತ್ರಿಯ ಹಬ್ಬದ ಆಚರಣೆ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಕಾಲದ ಬದಲಾವಣೆಗೆ ತಕ್ಕಂತೆ ಹಬ್ಬದ ಆಚರಣೆಯ ಸಾರ್ವಜನಿಕ ವಿಧಿ-ವಿಧಾನಗಳಲ್ಲೂ ಮಾರ್ಪಾಟಾಗುತ್ತಿರುವುದೂ ನಿಜ. ಮಳೆಗಾಲದ ವೈಭವದ ಅನಂತರ, ಬೆಳೆದು ನಿಂತ ಹಸಿರಿನ ಪೈರು, ನಿಸರ್ಗದ ಸೌಂದರ್ಯದ ದರ್ಶನಗಳ ಹಿನ್ನೆಲೆಯಲ್ಲಿ ನಡೆದು ಬಂದಿರುವ ಈ ಹಬ್ಬದ ಆಚರಣೆಗೆ ಎರಡು ಮುಖಗಳು.

ದ ಸ ರಾ - ಶಿಷ್ಟ ಶಕ್ತಿಯ ವಿಜಯೋತ್ಸವದ ಸಂಕೇತವಿದು. ನಾಡಿನಾದ್ಯಂತ ಆಶ್ವಯುಜದ ಮೊದಲ ತೇದಿಯಿಂದ ಹತ್ತು ದಿನ ಕಾಲ ಸಂತಸ ಸಂಭ್ರಮಗಳಿಂದ ಆಚರಿಸುತ್ತಿರುವ ಈ ಹಬ್ಬವು ಸಹಜ ಶೈಲಿಯ ಬದುಕಿಗೆ ಸ್ಫೂರ್ತಿ, ಮೊದಲನೆಯದು ಧಾರ್ಮಿಕ ವಿಧಿ-ವಿಧಾನಗಳು, ಅದೆಲ್ಲ ವ್ಯಕ್ತಿಗತವಾದದ್ದೇ, ಇಲ್ಲಿ ಅಬ್ಬರದ ಪ್ರಚಾರ ಇಲ್ಲ, ಅವರವರ ಯೋಗ್ಯತೆಗೆ ತಕ್ಕಂತೆ ಮನೆ ಮನೆಗಳಲ್ಲಿ ಹಬ್ಬದ ಆಚರಣೆ ಸಂಪ್ರದಾಯದ ಪಾಲನೆ. ಈಗ ಒಂಬತ್ತು ದಿನಗಳು ಮನೆಯಲ್ಲಿನ ಹಬ್ಬದ ವಾತಾವರಣವನ್ನು ಕಾಪಾಡಿಕೊಂಡು ಬರುವಷ್ಟು ವ್ಯವಧಾನ, ತಾಳ್ಮೆ ನಾಗರೀಕ ಸಮಾಜದಲ್ಲಿ ಕಂಡು ಬರುತ್ತಿಲ್ಲ. ಅದು ಸಮಾಜದ ಗರ್ಭದಲ್ಲೇ ಆಗಿರುವ ಬದಲಾವಣೆ.

### ಮೈಸೂರು ದಸರಾ ಒಂದು ಅವಿಸ್ಮರಣೀಯ ಉತ್ಸವ

ಕರ್ನಾಟಕದ ಭವ್ಯ ಇತಿಹಾಸ, ಅಪೂರ್ವ ಕಲೆ ಮತ್ತು ವೈವಿಧ್ಯಮಯ ಸಂಸ್ಕೃತಿಗಳ ಅತ್ಯಾಕರ್ಷಕ ಅನಾವರಣ ಮೈಸೂರು ದಸರಾ.ಕಣ್ಮನ ತಣಿಸುವ ಸಡಗರ. ಸಂಭ್ರಮಗಳು, ರೋಮಾಂಚಕಾರಿ ಸ್ಪರ್ಧೆಗಳು, ಪಂಜಿನ ಮೆರವಣಿಗೆ. ಹತ್ತು ಹಲವು ವರ್ಣಸಲದಳ ದೃಶ್ಯಾವಳಿಗಳಿಗೆ ಮೈಸೂರು ನಗರ ಸುಂದರ ವೇದಿಕೆ. ಇಡೀ ನಗರವೇ ಹತ್ತು ದಿನಗಳ ಕಾಲ ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು, ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿಸುವುದು. ವಿಜಯದಶಮಿಯಂದು ನಡೆಯುವ ಜಂಬೂಸವಾರಿ ಮೆರವಣಿಗೆ ಇವೆಲ್ಲಕ್ಕೂ ಕಳಸಪ್ರಾಯ ಅಂದು ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯನ್ನು ಹೊತ್ತು ರಾಜಗಾಂಭೀರ್ಯದಿಂದ ಸಾಲಂಕೃತ ಆನೆಗಳು ಸಾಗುವುದನ್ನು ನೋಡುವುದೇ ಅಪೂರ್ವ ಅನುಭವ. ಈ ಅನುಪಮ ದೃಶ್ಯವನ್ನು ಕಣ್ಮನ ತುಂಬಿ ಜೀವಮಾನದ ಅದ್ಭುತ ಅನುಭವವಾಗಿಸಿಕೊಳ್ಳಲು ವಿಶ್ವದ ಎಲ್ಲಾ ಭಾಗಗಳಿಂದಲೂ ಪ್ರವಾಸಿಗರು ಮೈಸೂರಿನತ್ತ ಧಾವಿಸುವುದು ಮೈಸೂರು ದಸರಾ ವೈಭವದ ವಿಶ್ವ ಖ್ಯಾತಿಗೆ ಸಾಕ್ಷಿ.

### ಒಂದಾನೊಂದು ಕಾಲದಲ್ಲಿನ ವೈಭವದ ವಿಜೃಂಭಣೆ :

ಮೈಸೂರು ಮಹಾರಾಜರ ಕಾಲದ ದಸರೆಯ ವೈಭವವೇ ಬೇರೆ. ನವರಾತ್ರಿಯ ಒಂಬತ್ತು ದಿನಗಳ ದರ್ಬಾರು. ಸಂಜೆ ಅರಮನೆಯ ಮುಂದೆ ನೆರೆದ ಜನಸ್ತೋಮ ಸಂಜೆ ಕತ್ತಲೇರಿದಂತೆ ರಾಜರ ಆಗಮನ. ಜಗಜಗಿಸುವ ಬಣ್ಣದ ಉಡುಪು, ಪೇಟ, ತುರಾಯಿ, ಎರಡೂ ಕೈಗಳ ನಾಲ್ಕು ನಾಲ್ಕು ಬೆರಳುಗಳಿಗೂ ನವರತ್ನಗಳ ಉಂಗುರ. ಪ್ರಸನ್ನ ಚಿತ್ತದಿಂದ ಆಗಮಿಸಿದ ರಾಜರು ಸಿಂಹಾಸನಕ್ಕೆ ಪ್ರದಕ್ಷಿಣೆ ಮಾಡಿ, ಮಂಗಳಾರತಿ ಮಾಡಿ ಸಿಂಹಾಸನ ಏರಿದೊಡನೆ ಧಿಗ್ಗನೆ ಬೆಳಗುವ ಸಹಸ್ರ ಸಹಸ್ರ ದೀಪಗಳು.





ಮೈಸೂರು ಎಂದೊಡನೆ ಎಲ್ಲರಿಗೂ ನೆನಪಾಗುವುದು ಅಲ್ಲಿಯ ಅರಮನೆ. ಕೋಟೆಯೊಳಗೆ ವಿಶಾಲವಾದ ಮೈದಾನದ ನಡುವೆ ಮೆರೆಯುವ ಸೌಂದರ್ಯ ಅದರ ಸುತ್ತ ಎರಚಾಡಿದ ದೇವಸ್ಥಾನಗಳು. ಬಲೆಯಂತೆ ದಕ್ಷಿಣೋತ್ತರ ಪೂರ್ವಪಶ್ಚಿಮವಾಗಿ ಹಬ್ಬದ ವಿಶಾಲವಾದ ರಸ್ತೆಗಳ ನಡುನಡುವೆ ಹುಲ್ಲುಹಾಸು ಅರಮನೆಯ ಎದುರಿಗೆ, ಎಲ್ಲರನ್ನೂ ಸ್ವಾಗತಿಸಲು ತೋಳುಗಳನ್ನು ತೆರೆದು ನಿಂತಂತೆ ಅಗಲವಾದ ಜಯ ಮಾರ್ತಾಂಡ ದ್ವಾರ. ಉಳಿದ ಮೂರೂ ದಿಕ್ಕುಗಳಲ್ಲೂ ಅಲ್ಲಲ್ಲಿ ದ್ವಾರಗಳು. ಈ ಕೋಟೆಯಲ್ಲಿ ಗೋಡೆಗಳಿಗಿಂತ ಬಾಗಿಲುಗಳೇ ಪ್ರಧಾನ ಎನಿಸುವ ರೀತಿ. ಕೋಟೆಯೆಂದರೆ ಯುದ್ಧದ ನೆನಪು,ಅರಿ ರಾಜರನ್ನು ಹಿಮ್ಮೆಟ್ಟಿಸುವ ಸಂಕಲ್ಪದ ಪ್ರತೀಕ. ಆದರೆ ಮೈಸೂರರಮನೆಯ ಸುತ್ತಣ ಕೋಟೆ ಅಪ್ಪಟ ಅಹಿಂಸಾತ್ಮಕ. ಬ್ರಿಟಿಷರ ರಕ್ಷಣೆ ಇರುವಾಗ ಬೇರೆ ರಕ್ಷಣೆ ಏಕೆ? ಇಷ್ಟಕ್ಕೂ ಅದು ಮೈಸೂರಿನ ರಾಜಭವ್ಯೈಭವದ ನಡುವಿನ ಬಿಗಿದ ಬಂಗಾರದ ಡಾಬು. ದೈವನೇ ಕಾವಲಿರುವಂತೆ ಮೈಸೂರಿನ ದಕ್ಷಿಣಕ್ಕೆ ಮೊಸಳೆಯಂತೆ ಮಲಗಿದ ಬೆಟ್ಟದ ಮೇಲೆ ದೇವಿ ಚಾಮುಂಡಿ.

ಬ್ರಿಟಿಷರ ಸಾಮಂತರಾಗಿದ್ದ ರಾಜರ ಪೈಕಿ ಮೈಸೂರರಸರ ಬಗ್ಗೆ ಪರಂಗಿ ಅರಸರಿಗೆ ಅಪಾರ ಅಭಿಮಾನ ನಾಲ್ವಡಿ ಕೃಷ್ಣರಾಜರಂತೂ ಸಾತ್ವಿಕತೆಯೇ ಸಂಸ್ಕೃತಿಯೇ ಸಾಕಾರ. ಇಪ್ಪತ್ತೊಂದು ಕುಶಾಲು ತೋಪುಗಳು ಮರ್ಯಾದೆ ಇದ್ದ ಕೆಲವೇ ರಾಜರುಗಳ ಪೈಕಿ ಮೈಸೂರರಸರೂ ಒಬ್ಬರು.ಮಹಾತ್ಮ ಗಾಂಧಿಯವರಿಂದಲೂ ಕೃಷ್ಣರಾಜ ಪ್ರಭುಗಳ ರಾಜರ್ಷಿಯೆಂದು ಪ್ರಕೀರ್ತಿ ಆಧುನಿಕ ಮೈಸೂರು ಸಂಸ್ಥಾನದ ಇತಿಹಾಸದ ಉದ್ದಕ್ಕೆ ಸರದಿಯಂತೆ ದಿವಾನ್‌ಗಿರಿ ಮಾಡಿದವರೆಲ್ಲ ಪ್ರಭುಗಳ ಇಂಗಿತ ಅರಿತು ಅವರ ಸಂಸ್ಥಾನವನ್ನು ಮಾದರಿ ಮೈಸೂರಾಗಿ ಮಾಡಿದರು. ಪರಂಪರೆಯ ವಸ್ತ್ರದ ಒಡಲಿನಲ್ಲೂ ಅಂಚಿನಲ್ಲೂ ಆಧುನಿಕತೆಯ ಚಿನ್ನದ ಜರಿ ಸೇರಿಸಿದರು. ಇನ್ನು ಜನರೋ ತಮ್ಮನ್ನಾಳುವವರು ಧರ್ಮಪ್ರಭು, ರಾಜ ಪ್ರತ್ಯಕ್ಷ ದೇವತೆ ಎಂದು ನಂಬಿದವರು. ಇವರ ಆಳ್ವಿಕೆಯ ವೈಭವವನ್ನು ತಿಳಿಯಬೇಕಾದರೆ ದಸರೆಯ ಕಾಲದಲ್ಲಿ ಈ ಪ್ರಭುವಿನ ದರ್ಶನ ಮಾಡಬೇಕು ಎಂದು ನಂಬಿದ್ದರು. ವರ್ಷಕ್ಕೊಮ್ಮೆ ಬರುತ್ತಿದ್ದ ದಸರೆಯ ಸಮಯಕ್ಕೆ ದಂಡು ದಂಡಾಗಿ, ಹಿಂಡು ಹಿಂಡಾಗಿ ಜನ ಬಂದು ಜಮಾಯಿಸುತ್ತಿದ್ದರು.

ಆ ಕಾಲದಲ್ಲಿ ಹೋಟಲುಗಳು ಹೆಚ್ಚಾಗಿರಲಿಲ್ಲ. ಈಗಿನಂತೆ ಬೆಳಿಗ್ಗೆ ಬಂದು ಬೇಗಬೇಗ ಪ್ರೇಕ್ಷಣೆಯ ಸ್ಥಳಗಳನ್ನು ನೋಡಿ ಸಂಜೆ ದಸರೆಯ ಜಂಬೂಸವಾರಿಯನ್ನು ವೀಕ್ಷಿಸಿ ರಾತ್ರಿಯ ವೇಳೆ ದೌಡಾಯಿಸುವುದು ಸಾಧ್ಯವಾಗುವಂತೆ ವೇಗವಾದ ಸಾರಿಗೆ ಸೌಲಭ್ಯವಿರಲಿಲ್ಲ. ಈಗಿನ ದಸರೆಯ ಜನಜಂಗುಳಿಯ ಆಗಮನ ನಿರ್ಗಮನ ನಡುವೆ ಅವರ ಧಾವಂತ ನೋಡಿದಾಗ ಸಂತೆಯ ನೆನಪಾಗದೆ ಇರದು. ವ್ಯಾಪಾರ ಮುಗಿದ ಮೇಲೆ ಕರಗಿ ಹೋಗುವ ಹಿಂಡು.ಒಂದೆರಡು ದಿನಗಳಲ್ಲೇ ಮತ್ತೆ ಎಲ್ಲೆಲ್ಲೂ ಭಣಭಣ. ಇನ್ನೊಂದು ದಸರೆಯ ಆಗಮನಕ್ಕಾಗಿ ಕಾಯುತ್ತಾ ನಿದ್ರಿಸುವ ರಾಜಕುಮಾರಿ ಯಂತೆ ಮಲಗುತ್ತದೆ ಮೈಸೂರು.

ಆಗ ಹಾಗಿರಲಿಲ್ಲ. ದಸರೆಗೆ ಇನ್ನೂ ಕೆಲವು ದಿನ ಇವೆಯೆನ್ನುವಾಗಲೇ ಮೈಸೂರಿನ ಮನೆಗಳೆಲ್ಲಾ ನೆಂಟರಿಂದ ತುಂಬಿರುತ್ತಿತ್ತು. ಹಜಾರ, ಕೊಠಡಿ, ಊಟದ ಮನೆ, ಜಗಲಿ ಎಲ್ಲೆಲ್ಲೂ ಹಾಸಿ ಕೂತ , ಮಲಗಿದ ನೆಂಟರ ತಂಡ, ಈ ಅತಿಥಿಗಳನ್ನೆಲ್ಲ ನಿಭಾಯಿಸುವುದು ಹೇಗೆ ಎಂದು ಮನೆಯ ಯಜಮಾನನ ಚಿಂತೆ ಯಜಮಾನಿಗೂ ಕಸಿವಿಸಿ. ಬಂದವರಿಗೆಲ್ಲಾ ಕಾಲಕಾಲಕ್ಕೆ ಊಟ ತಿಂಡಿ ಇತ್ಯಾದಿ ಅಣಿಯಾಗಬೇಕು. ನೋಡಬೇಕಾದ ಸ್ಥಳಗಳಿಗೆಲ್ಲ ಅವರನ್ನು ಕರೆದುಕೊಂಡು ಹೋಗಬೇಕು.ಊರಿನ ಶಾಲೆಕಾಲೇಜು ಛತ್ರ ಗಳಲ್ಲೆಲ್ಲ ಪ್ರವಾಸಿಗರ ಮೊಕ್ಕಾಮು.

ರಾಜಬೀದಿಗಳಿಗೆಲ್ಲ ಕೆಮ್ಮಣ್ಣಿನ ಕೆಂಪು ಮರಳಿನ ಹೊದಿಕೆ. ರಸ್ತೆಯ ಬದಿಗೆ ಸಾಲು ಮರಗಳಿಗೆ ಸುಣ್ಣ ಕೆಂಬಣ್ಣದ ಪಟ್ಟೆಯ ಶೃಂಗಾರ. ಮನೆಮನೆಗೂ ಸುಣ್ಣ ಬಣ್ಣ. ಮೆರವಣಿಗೆಯ ರಸ್ತೆಗಳಿಗೆ ಉದ್ದಕ್ಕೂ ನಾಲ್ಕಾರು ಸಾಲುಗಳಲ್ಲಿ ಬಣ್ಣಬಣ್ಣದ ದೀಪಗಳ ಅಲಂಕಾರ.ಈಗಿನ ಕಾಲದಲ್ಲಿ ಹೂವಾಡಿಗರು ವಿರಳವಾಗಿ ಹೂ ಕಟ್ಟಿದ ಮಾಲೆಯಂತೆ ಈಗಿನ ವಿದ್ಯುದ್ದೀಪಾಲಂಕಾರ.ಈಗ ಆಗಿನಂತೆ ಒತ್ತಾಗಿರುವುದಿಲ್ಲ.ಆಗಿನ ಜ್ವಾಜ್ವಲ್ಯಮಾನ ದೀಪದ ಪ್ರಭೆಯ ಮುಂದೆ ಈಗಿನ ದೀಪಗಳ ಸಾಲು ಮಿಣುಕುಹುಳುಗಳ ಹಾಗೆ. ಸುಮಾರು 80 ವರ್ಷಗಳ ಹಿಂದಿನಿಂದಲೂ ದಸರೆ ನೋಡಿದವರೂ ಇದ್ದಾರೆ. ಈಗಿನ ದಸರೆಯನ್ನು ನೋಡಿದಾಗ ನಾವು ಯಾವುದೋ ಅಮೂಲ್ಯವಾದ ಸಂಪತ್ತನ್ನು ಕಳೆದುಕೊಂಡಿದ್ದೇವಲ್ಲ ಎನಿಸಿ ವಿಷಾದವಾಗುತ್ತದೆ. ಈಗ ಮೈಸೂರಿನ ವೈಭವವನ್ನು ಅಷ್ಟಿಷ್ಟು ಕಾಣವುದು ದಸರೆಯ ದಿನಗಳಲ್ಲಿ ಮಾತ್ರ ಅದೂ ಕೊನೆಯ ಒಂದೆರಡು ದಿನಗಳಲ್ಲಿ. ಆಗ ಹತ್ತೂ ದಿನವು ವೈಭವ - ಅದರ ಅನಂತರವೂ ಚಾಮುಂಡಿಯ ರಥೋತ್ಸವ,ತೆಪ್ಪೋತ್ಸವ ಮುಗಿದ ಮೇಲೆ ಕರಗುತ್ತಿದ್ದರು ಜನ. ಅಷ್ಟೇ ಅಲ್ಲ, ವರ್ಷವಿಡೀ ಆಗಾಗ ನವರಾತ್ರಿಯ ನೆನಪು





ತರುವ ಒಂದಿಲ್ಲೊಂದು ಉತ್ಸವ, ಹಬ್ಬ ಸಂಕ್ರಾಂತಿಯ ದಿನದಂದು ಸಂಜೆ ಊರಿನ ಹಸು,ಕರು, ರಾಸು ಇತ್ಯಾದಿಗಳು ಅರಮನೆಯ ಮುಂದಣ ವಿಶಾಲ ಮೈದಾನದಲ್ಲಿ ಕಿಚ್ಚು ಹಾಯುವ ಸಂಭ್ರಮ. ರಥಸಪ್ತಮಿಯಂದು ಊರಿನ ದೇಗುಲಗಳ ದೇವರುಗಳೆಲ್ಲ ಅರಮನೆಯ ಮುಂದೆ ಜಮಾವಣೆ. ಚಿಕ್ಕ ದೊಡ್ಡ ರಥಗಳ ಮೆರವಣಿಗೆ.

ಕೃಷ್ಣೋತ್ಸವದ ಹಿಂದೆಯೇ ಓಡಿ ಬರುತ್ತಿತ್ತು ಶರನ್ನವರಾತ್ರಿ. ಅದು ಇನ್ನೇನು ಬಂತು ಎನ್ನುವುದನ್ನು ನೆನಪು ಮಾಡಿಕೊಡಲೇ ಎಂಬಂತೆ ಹಲವು ದಿನ ಮೊದಲೇ ಮೈಸೂರಿನ ಆನೆ ಕರು ಹಟ್ಟಿಯಿಂದ ಹೊರಗೆ ಬೀದಿಗೆ ಬರುತ್ತಿತ್ತು.ಆನೆಗಳ ಸಾಲು.ಗೂಡಿನಿಂದ ಹೊರಟಿರುವ ಇರುವೆಗಳ ಸಾಲಿನಂತೆ. ಈಗ ದಸರೆಯ ವೇಳೆಗೆ ಕಾಕನಕೋಟೆ ಕಾಡಿನಿಂದ ಆನೆಗಳನ್ನು ತರಬೇಕು. ಊರ ಜನರ ನಡುವೆ ಓಡಾಡಿಸಿ ಬಗ್ಗಿಸಬೇಕು. ಆಗ ಹಾಗಲ್ಲ. ಈಗ ಜೆಎಸ್ಎಸ್ ವಿದ್ಯಾಸಂಸ್ಥೆಯ ಕಟ್ಟಡ ಇರುವೆಡೆಯಲ್ಲಿದ್ದ ಕಾಡಿನಂತೆ ದಟ್ಟವಾದ ಮರಗಳ ಈ ಪ್ರದೇಶವೇ ಆನೆ ಕರುಹಟ್ಟಿದ್ದ. ಅದು ಅರಮನೆಗೆ ಸೇರಿದ ಗಜಶಾಲೆ. ವರ್ಷವೀಡೀ ಅಲ್ಲಿಯ ಆನೆಗಳು ಮೈಸೂರಿನ ಅಗ್ರಹಾರಗಳಲ್ಲಿ ಬರುತ್ತಿದ್ದವು ಮಕ್ಕಳ ಆನಂದ ಹೇಳತೀರದು.ಮನೆ ಮನೆಯಲ್ಲೂ ಅವಕ್ಕೆ ಬೆಲ್ಲ. ತೆಂಗಿನಕಾಯಿ. ಅವನ್ನು ಆನೆಗಳು ಒಟ್ಟೊಟ್ಟಾಗಿ ಹೊಟ್ಟೆಗೆ ಸೇರಿಸುತ್ತಿದ್ದುದ್ದನ್ನು ನೋಡಿ ಮಕ್ಕಳಿಗೆ ಮಹಾ ವಿಸ್ಮಯ. ದಸರೆಯ ದಿನ ಹತ್ತಿರವಾದಂತೆ ಮದುವೆಗೆ ಸಿದ್ಧವಾಗುವ ಹೆಣ್ಣಿನಂತೆ ಮೈಸೂರು ಹೊಸ ಕಳೆ ತಳೆಯುತ್ತಿತ್ತು. ಬಿ.ಎಂ.ಶ್ರೀ ಅವರ ಮಾತಿನಲ್ಲಿ ಹೇಳುವುದಾದರೆ

ಮಂಗಳ ಮಸುಗಿತು ಮೈಸೂರರಮನೆ;
ಸಿಂಗಾರವಾಯಿತು ಮೈಸೂರು

ಕೃಷ್ಣನ ವೈಭವವೆಲ್ಲವ ತೋರುವ, ಸಾರುವ ಮೀರುವ ಮೈಸೂರು. ಅರಮನೆಗೆ ವರ್ಷವಿಡೀ ಏನಾದರೂ ದುರಸ್ತಿ. ಬದಲಾವಣೆ ಆಗುತ್ತಲೇ ಇತ್ತು.ದಸರೆಯ ವೇಳೆಗಂತೂ ಎಲ್ಲವೂ ಹೊಸತನದಿಂದ ಸಜ್ಜು, ಅರಮನೆಯ ದೀಪಗಳು ಈಗಿಗಿಂತ ಆಗ ಹೆಚ್ಚು ಒತ್ತಾಗಿದ್ದವು. ಹೆಚ್ಚು ಪ್ರಕಾಶಮಾನವಾದ ದೀಪಗಳು ಅವು. ಅರಮನೆಯ ಮುಂದೆಯೂ ಉದ್ದಕ್ಕೂ ನಾಲ್ಕು ನಾಲ್ಕು ಸಾಲು ದೀಪಗಳ ಮಾಲೆ, ಕೋಟೆಗೂ ವಿದ್ಯುತ್ ವೈಭವ. ಆಗೋ ಬಂದೇ ಬಿಟ್ಟಿತ್ತು. ಶರನ್ನವರಾತ್ರಿ,ರಾಜರಿಂದ ದೇವೀಪೂಜೆ. ಆಶ್ವೀಜ ಶುದ್ಧದ ಪಾಡ್ಯದಂದು ಬೆಳಿಗ್ಗೆ ಶುಭ ಮುಹೂರ್ತದಲ್ಲಿ ದೊರೆಯಿಂದ ಸಿಂಹಾಸನಾರೋಹಣ. ವಾದ್ಯಗಳು ಮೊಳಗುತ್ತಿರುವಾಗ ರಾಜಭಕ್ತ ಪ್ರಜೆಗಳು ಕಿಕ್ಕಿರಿದು ನೆರೆದು ದರ್ಬಾರ್ ಹಾಲಿನ ನಡುವೆ ದೊರೆ ಸಿಂಹಾಸನವೇರಿದೊಡನೆಯೇ ಅರಮನೆಯ ದಕ್ಷಿಣ ದ್ವಾರದಿಂದಾಚೆಗಿರುವ ತೋಪುಖಾನೆಯಿಂದ ಇಪ್ಪತ್ತೊಂದು ಕುಶಾಲು ತೋಪುಗಳ ಧ್ವನಿ. ಆಗ ಊರು ಈಗಿನಷ್ಟು ಬೆಳೆದಿರಲಿಲ್ಲ. ಆ ಶಬ್ದ ಎಲ್ಲರಿಗೂ ಕೇಳಿಸುತ್ತಿತ್ತು. ಮನೆಮನೆ ಯಲ್ಲೂ ಬೊಂಬೆ ಇಡುವ ಪದ್ಧತಿ. ಗುಂಡಿನ ಭೋಗರೆತಿ ಕೇಳಿದೊಡನೆಯೇ ಬೊಂಬೆಗಳ ನಡುವೆ ರಾಜರಾಣಿ ಬೊಂಬೆಗಳನ್ನು ಕೂರಿಸಿ ಆರತಿ ಬೆಳಗುತ್ತಿದ್ದರು. ಮನೆಯ ಹಾಗೂ ನೆಲಮನೆಗಳ ಮಕ್ಕಳಿಗೆಲ್ಲ ಬೊಂಬೆಬಾಗಿನ,ಚಕ್ಕುಲಿ ಕೋಡುಬಲೆ, ಉಂಡೆ, ಇತ್ಯಾದಿ ಎಲ್ಲ ಮನೆಗಳಲ್ಲೂ ಬಾಗಿನ ಗಿಟ್ಟಿಸಿದ ಮಕ್ಕಳಿಗೆ ಇನ್ನೇನು ಬೇಕು?

ನವರಾತ್ರಿಯ ಒಂಬತ್ತು ದಿನಗಳೂ ದರ್ಬಾರು ಸಂಜೆಯಲ್ಲಿ ಅರಮನೆಯ ಮುಂದೆ ನೆರೆದ ಜನಸ್ತೋಮ. ಅರಮನೆಗೂ ಜನಸ್ತೋಮಕ್ಕೂ ನಡುವಣ ಮೈದಾನದಲ್ಲಿ ದಂಡು, ಪೋಲೀಸ್ ಪಡೆ, ಅಂಗರಕ್ಷಕ ದಳ, ಅರಮನೆಯ ಸಕಲ ಲಾಂಛನ , ಆನೆ, ಕುದುರೆ, ಒಂಟೆ, ಕಾಲಾಳು ಪ್ರದರ್ಶನ, ವಾದ್ಯದ ಮೊಳಗು ಸಂಜೆ ಕತ್ತಲೇರಿದಂತೆ ರಾಜರ ಆಗಮನ. ಜಗಜಗಿಸುವ ಚಿನ್ನದ ಬಣ್ಣದ ಉಡುಪು ಪೇಟ ತುರಾಯಿ. ಎರಡೂ ಕೈಗಳ ನಾಲ್ಕು ನಾಲ್ಕು ಬೆರಳುಗಳಿಗೂ ನವರತ್ನಗಳ ಉಂಗುರ. ಪ್ರಸನ್ನ ಚಿತ್ತದಿಂದ ಆಗಮಿಸಿದ ರಾಜರು ಸಿಂಹಾಸನ್ನೇರಿದೊಡನೆ ದಿಗ್ಗನೆ ಸಹಸ್ರ ಸಹಸ್ರ ದೀಪಗಳು ಗೊತ್ತಿಕೊಳ್ಳುತ್ತಿದ್ದವು.ರಾಜರು ಬಂದೊಡನೆ ದರ್ಬಾರಿನಲ್ಲೆಲ್ಲ ದರ್ಬಾರ್ ಉಡುಪು ಧರಿಸಿದವರು ಎದ್ದುನಿಂತು ಗೌರವ ಸೂಚಿಸುತ್ತಿದ್ದರು. ಅತ್ತ ಇತ್ತ ನಿಂತ ಭಟರಿಂದ ಪರಾಕಿನ ಪೋಷಣೆ.ಅರಮನೆಯ ಮುಂದೆ ಕುಸ್ತಿಯ ಅಖಾಡ ರೈಲು ಹಳಿಗಳಂತೆ ಹಳ್ಳಿಗಳ ಮೇಲೆ ಉರುಳುವ ಗಾಲಿ ಜೋಡಿಸಿದ ಅಖಾಡದ ಮೇಲೆ ಕುಸ್ತಿ ಸ್ಪರ್ಧೆ, ಸಿಂಹಾಸನದ ಮುಂದೆ ನೆಲದಿಂದ ಮೇಲೆದ್ದ ವೇದಿಕೆಯ ಮೇಲೆ ಸಂಗೀತ, ವಿಶಾಲ ಮೈದಾನದಲ್ಲಿ ಕವಾಯಿತು ಮತ್ತು ಇತರ ಪ್ರದರ್ಶನಗಳು.ಅರಮನೆಗೆ ಎದುರಾಗಿ ತಾತ್ಕಾಲಿಕವಾಗಿ ನಿರ್ಮಿಸಿದ ಕಟಿಕಟೆಯ ಈಚೆಗೆ ದಟ್ಟೈಸಿ ನಿಂತ ಜನಸ್ತೋಮ ಮುದುಕರು, ಮಕ್ಕಳು, ಹೆಂಗಸರು, ಗಂಡಸರು ದೂರದೂರದಿಂದ ಬಂದ ಮಂದಿ ಎಲ್ಲರೂ. ದೊರೆಯ ದರ್ಶನ ಪಡೆಯಲು ವೈಭವವನ್ನು ವೀಕ್ಷಿಸಲು ಜನರ ನೂಕು ನುಗ್ಗಲು. ಸಂಸ್ಥಾನದ ಎಲ್ಲೆಡೆಗಳಿಂದಲೂ ದಸರಾ ಡ್ಯೂಟಿಗಾಗಿ ಬಂದ ವಿಶೇಷವಾದ ಸಮವಸ್ತ್ರ ತೊಟ್ಟ ಪೋಲಿಸರ ಪಾಡು ಹೇಳುವುದೇ ಬೇಡ. ಅಡ್ಡಲಾಗಿ ಕಟ್ಟಿದ ಕಟಕಟೆಯ ಬಾಳೆಯ ಕಂದಿನ ಪಟ್ಟೆಯನ್ನು ಕಿತ್ತು ಆದರಿಂದಲೇ ಪ್ರೇಕ್ಷಕರಿಗೆ ಪೆಟ್ಟು ಕೊಟ್ಟು ಬೆದರಿಸುವ ಪರಿ.ಹಳ್ಳಿಯ ಮುಗ್ಧಜನ.ತಮ್ಮ ಪ್ರಭುವನ್ನು ನೋಡಲು ಎಲ್ಲರಿಗೂ ಆತುರ. ಕಾಸುಕೊಟ್ಟು ದುರ್ಬೀನು ತೆಗೆದುಕೊಂಡು ನೋಡಲು ಕಿತ್ತಾಟ. ದೊರೆಯ ಪ್ರಸನ್ನವದನ ನಿಚ್ಚಳವಾಗಿ ಕಂಡಾಗ ಸಂತೋಷವೋ ಸಂತೋಷ ಜೊತೆಗೆ ಹುರಿದ ಕಡಲೆಕಾಯಿ, ಸೌತೆಕಾಯಿ ಸೀಳು, ಹುರಿಗಾಳು ಮುಂತಾದ ತಿನಿಸು. ಮಕ್ಕಳಿಗೆ ಸಂಭ್ರಮ ಹೇಳತೀರದು. ಸ್ವರ್ಗಕ್ಕೆ ಮೂರೇ ಬೆರಳು, ಎಂದ ಹಾಗೆ. ಆ ವೇಳೆಗೆ ಅರಮನೆಯ ಮಹಾದ್ವಾರದ ಬಳಿಯ ದೇವಸ್ಥಾನದಿಂದ ದೇವಿಯ ಮೆರವಣಿಗೆ ಅರಮನೆಯ ಮುಂದಕ್ಕೆ ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಇತರ ಆನೆಗಳು ಇತ್ಯಾದಿ. ಮೆರವಣಿಗೆಯ ಮುಂದಿನ ಆನೆ ಸೊಂಡಲಿನಿಂದ ಮಹಾರಾಜರ ಕಡೆಗೆ ಹೂಗಳನ್ನರಚುತ್ತಿತ್ತು. ಆ ದೃಶ್ಯವನ್ನು ನೆನೆದಾಗ ಈಗಲೂ ಮೈನವಿರೇಳುವಂತಾಗದಿರದು.

ಮಹಾನವಮಿಯ ದಿವಸ ಬೆಳಿಗ್ಗೆ ಆಯುಧ ಪೂಜೆ.ಅರಮನೆಯ ರಥಗಳು, ಲಾಂಛನಗಳು, ಆನೆ ಕುದುರೆ, ಹಸು , ಶಸ್ತ್ರಗಳು ಎಲ್ಲಕ್ಕೂ ಮಹಾ ರಾಜರ ಅರಮನೆಯ ಮುಂದೆ ನಿರ್ಮಿಸಿದ ವೇದಿಕೆಯ ಮೇಲೆ ನಿಂತು ಹೂ ಎರಚಿ ಪ್ರಜೆ ಸಲ್ಲಿಸುತ್ತಿದ್ದರು. ಅದೊಂದು ಗತವೈಭವ. ಮಹಾನವಮಿ ಯಂದು ಸಂಜೆ ಯುರೋಪಿಯನ್ ದರ್ಬಾರು. ಅಂದು ಬೇರೆಯವರಿಗೆ ದರ್ಬಾರಿಗೆ ಪ್ರವೇಶವಿಲ್ಲ. ಯುರೋಪಿಯನ್ ಅಧಿಕಾರಿಗಳು ಬ್ರಿಟಿಷ್ ಪ್ರೆಸಿಡೆಂಟ್ ಮುಂತಾದವರು ಅಂದು ದರ್ಬಾರಿನಲ್ಲಿ ಭಾಗವಹಿಸುತ್ತಿದ್ದರು ಅವರ ಉಡುಗೆಯಲ್ಲಿ ದೊರೆ ಬ್ರಿಟೀಷರ ಸಾಮಂತರೇ ಆದರೂ ಆ ಸ್ಥಾನಕ್ಕೆ ಮರ್ಯಾದೆ.

ದಶಮಿಯಂದು ಜುಂಬುಸವಾರಿ, ಬನ್ನಿ ಮಂಟಪಕ್ಕೆ ದಿಬ್ಬಣ, ಗೊತ್ತಾದ ಮುಹೂರ್ತಕ್ಕೆ ಸರಿಯಾಗಿ ಮಹಾರಾಜರು ಆನೆಯ ಮೇಲಣ ಅಂಬಾರಿಯನ್ನೇರಿ ಕುಳಿತುಕೊಳ್ಳುತ್ತಿದ್ದರು. ಅಂಬಾರಿಯಲ್ಲಿ ದೊರೆಗಳ ಹಿಂದೆ ಅವರ ಸಕಲ ಬಂಧು, ರಾಜಮನೆತನದವರು, ಸಾಮಾನ್ಯವಾಗಿ ಸೋದರಮಾವ,ಅರಮನೆಯ ಸಕಲ ಮರ್ಯಾದೆಗಳೊಡನೆ ಮೆರ ವಣಿಗೆ, ಲಾಂಛನಗಳು ಬೆಳ್ಳಿರಥ, ಆನೆಗಾಡಿ ಅದರಲ್ಲಿ ಅರಸರು ಎಂದರೆ ಅರಸು ಮಂದಿ ಕುಳಿತುಕೊಳ್ಳುತ್ತಿದ್ದರು. ಆಗ ಸ್ತಬ್ದ ಚಿತ್ರಗಳಿರುತ್ತಿರಲಿಲ್ಲ. ಜನಪದ ತಂಡಗಳ ಪ್ರದರ್ಶನವೂ ಇರಲಿಲ್ಲ. ಅರಮನೆಯ ಅಂಗರಕ್ಷಕ ದಳ, ಪೋಲಿಸ್ ದಳ, ಅಶ್ವಾರೋಹಿಗಳು. ಸೈನ್ಯ ಇತ್ಯಾದಿ. ಉದ್ದನೆಯ ಮರ ಗಾಲಿನಲ್ಲಿ ನಡೆಯುವವರು, ಕುಳ್ಳರು, ಬಗೆ ಬಗೆಯ ವೇಷಧಾರಿಗಳು, ಆನೆ, ಕುದುರೆ, ಕಾಲಾಳು, ಒಂಟೆ ಇತ್ಯಾದಿ. ಉದ್ದಕ್ಕೂ ಕಿಕ್ಕಿರಿದು ನಿಂತ ಜನ. ಅಂಗಡಿಗಳ ಮುಂದೆ ಅವುಗಳ ಒಡೆಯರು ಮಂಟಪ ಕಟ್ಟಿ ಹೂ ಹಾರ ಸಮೇತ ನಿಂತಿರುತ್ತಿದ್ದರು. ಅಂಬಾರಿಯಲ್ಲಿ ಕುಳಿತ ದೊರೆ ಅಲ್ಲಿಗೆ ಬಂದೊಡನೆಯೇ ಆನೆ ನಿಲ್ಲುತ್ತಿತ್ತು.ಕೋಲಿನ ತುದಿಗೆ ಜೋಡಿಸಿದ ತಟ್ಟೆ ಯಲ್ಲಿ ಹಾರ, ಹೂ, ಹಣ್ಣು ಸಮರ್ಪಣೆ. ರಾಜರು ಅದನ್ನು ಮುಟ್ಟಿ ಕೈಮುಗಿ ಯುತ್ತಿದ್ದರು.ನೆರೆದ ಜನಸ್ತೋಮದಿಂದ ಜಯಕಾರ. ರಾಜ ಭಕ್ತಿಯ ಪ್ರದರ್ಶನ. ಅಲ್ಲಲ್ಲಿ ಉದ್ದನೆಯ ಕೋಲಿಗೆ ಕೆಂಪು ಹಸಿರು ವಿದ್ಯುತ್ ದೀಪ ಸಿಕ್ಕಿಸಿಕೊಳ್ಳುತ್ತಿದ್ದರು.ಕೆಂಪು ದೀಪ ಕಂಡೊಡನೆ ಮೆರವಣಿಗೆ ನಿಲ್ಲಬೇಕು. ಹಸಿರು ದೀಪ ಬಂದಾಗ ಮುಂದಕ್ಕೆ ಸಾಗಬೇಕು. ಆರಂಭದಲ್ಲಿ ನಿಶಾನೆ ಆನೆ. ನಗಾರಿ ನೌಬತ್ತು ಮೊಗಲ್ ಚಕ್ರವರ್ತಿಯಿಂದ ಬಂದ ಮರ್ಯಾದೆ ಯಂತೆ. ಆನೆಗಳ ಜೊತೆಗೆ ಕುದುರೆಗಳು, ಒಂಟೆಗಳು ಎಲ್ಲ. ಬಗೆಬಗೆಯ ವಿನೋದಗಳು ದರ್ಬಾರ್ ಡ್ರೆಸ್ಸಿನಲ್ಲಿ ಜಿಲ್ಲಾಧಿಕಾರಿಗಳು ಕುದುರೆಯೇರಿ ಮೆರವಣಿಗೆಯಲ್ಲಿ ಸಾಗುತ್ತಿದ್ದರು. ಇತರ ಅಧಿಕಾರಿಗಳೂ ಭಾಗವಹಿಸು ತ್ತಿದ್ದರು. ಜಂಬೂಸವಾರಿ ಮೊದಲು ದೊಡ್ಡ ಪೇಟೆಯ (ಈಗಿನ ಅಶೋಕ ರಸ್ತೆ) ಮಾರ್ಗವಾಗಿ ಹೋಗಿ ರಾತ್ರಿ ಅದೇ ದಾರಿಯಲ್ಲಿ ಹಿಂದಿರುಗುತ್ತಿತ್ತು. ರಾತ್ರಿ ವಾಪಸ್ಸು ಬರುವ ಮೆರವಣಿಗೆಯ ವೈಭವವೇ ವೈಭವ. ದಟ್ಟವಾದ ದೀಪಮಾಲೆ ಉದ್ದಕ್ಕೂ ನಾಲ್ಕಾರು ಸಾಲು. ರಾತ್ರಿಯ ಮೆರವಣಿಗೆಯನ್ನೀಗ ರದ್ದು ಮಾಡಲಾಗಿದೆ. ದಸರಾ ದರ್ಬಾರಿನ ಮೆರವಣಿಗೆಯ ಮುಖ್ಯ ಆಕ ರ್ಷಣೆಗಳೆಂದರೆ ಮಹಾರಾಜರು. ಚಾಮುಂಡಿ, ರಾಜರಾಜೇಶ್ವರಿ ವಿಗ್ರಹ ಗಳು ಆ ರೀತಿಯ ಪರಿಣಾಮ ಬೀರಲಾರವು ಇದು ಇತ್ತ ಧಾರ್ಮಿಕವೂ



ಅಲ್ಲ, ಅತ್ತ ಸಾಂಸ್ಕೃತಿಕವೂ ಅಲ್ಲ. ಆಗಲೂ ಧಾರ್ಮಿಕ ಹಿನ್ನೆಲೆ ಇತ್ತು. ಹಬ್ಬದ ಆಚರಣೆಯಂತೆಯೂ ಇತ್ತು ದಸರಾ ಫೆಸ್ಟಿವಿಟೀಸ್ ಎಂದು ಆಗ ಇದನ್ನು ಕರೆಯಲಾಗುತ್ತಿತ್ತು ಎಂದರೆ ಹಬ್ಬ ಉತ್ಸವ, ಸಂತೋಷ ಸಮಾರಂಭ. ಈಗಿನ ದಸರೆಯದು ಕೇವಲ ಪ್ರವಾಸೋದ್ಯಮ ದೃಷ್ಟಿ ವ್ಯಾಪಾರ ದೃಷ್ಟಿ ಜನರು ಪಾಲ್ಗೊಳ್ಳುವಂಥವಲ್ಲ. ಎಲ್ಲ ಸರ್ಕಾರಿ ಆಚರಣೆಗಳಂತೆ ಇದು ಕೂಡಾ ಆಗಿನ ಮೈಸೂರು ದಸರಾ ಬೆಂಗಳೂರಿನ ಕರಗ ಇವನ್ನು ನೆನೆಸಿಕೊಂಡಾಗ ಈಗಲೂ ಮೈ ಪುಳಕಗೊಳ್ಳುತ್ತದೆ. ಕರಗದ ಗುಂಪಿನ ನುಗ್ಗಾಟದಲ್ಲಿ ಸೇರಿದಾಗ ದೊರಕುವ ಖುಷಿ ಈಗೆಲ್ಲಿ?

### ವೈಭವೋಪೇತ

ವೈಭವೋಪೇತದದ ದಸರಾವನ್ನು ವೀಕ್ಷಿಸಲು ದೇಶ-ವಿದೇಶಗಳಿಂದ ಲಕ್ಷ ಸಂಖ್ಯೆಯಲ್ಲಿ ಜನ ಮೈಸೂರಿಗೆ ಆಗಮಿಸುತ್ತಿದ್ದರು. ಹಳೆಯ ಮೈಸೂರಿನ ಜನತೆಗಾದರೂ ಅದು "ಚಿರಮಭಿ ವರ್ಧಿತಾಂ ಯದುಕುಲ ಸಂತಾನ ಶ್ರೀಃ" ಎಂದು ಅಭಿಮಾನದಿಂದ ಹೇಳುವ ಸಂಭ್ರಮದ ಉತ್ಸವಾಗಿ ದ್ದಿತು. ತಮ್ಮ ನೆಚ್ಚಿನ ರಾಜರು ಆನೆಯ ಮೇಲಿನ ಬಂಗಾರದ ಅಂಬಾರಿಯಲ್ಲಿ ಕುಳಿತು, ಅಲಂಕೃತವಾದ ಮೈಸೂರು ರಾಜಮಾರ್ಗದಲ್ಲಿ ಚತುರಂಗ ಬಲ ಸಮೇತ ರಾದ ವೈಭವದಿಂದ ಮೆರವಣಿಗೆಯಲ್ಲಿ ಹೊರಟಾಗ "ದೇವೇಂದ್ರನ ಸ್ವರ್ಗ ಲೋಕವೇ" ಧರೆಗಿಳಿದು ಬಂದಿತೋ ಎಂಬಂತೆ ಜನತೆ ಉತ್ಸಾಹದಿಂದ ಮೈ ಮರೆಯುತ್ತಿದ್ದರು ಆ ಸಮಯದಲ್ಲಿ ಲಕ್ಷಾವಧಿ ದೀಪಗಳು ಅರಮನೆಯನ್ನು ಬೆಳಗುತ್ತಾ ಕಿನ್ನರ ಲೋಕವನ್ನು ನೆನಪಿಗೆ ತರುತ್ತಿದ್ದವು. ನವರಾತ್ರಿಯ ಪ್ರತಿದಿನ ರಾಜರು ಸಿಂಹಾಸನಾರೋಹಣ ಮಾಡಿ ರಾಜಸಭೆ ನಡೆಸಿ ಪ್ರಜೆ ಗಳಿಂದ ಪ್ರೀತಿಯ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದರು. ಅದೇ ಸಮಯದಲ್ಲಿ ಸಾರ್ವಜನಿಕ ಪ್ರಮುಖರನ್ನು, ಕಲಾವಿದರನ್ನು, ಕಲೆ, ಸಂಗೀತ, ಕ್ರೀಡಾರಂಗ ಗಳನ್ನು ಪ್ರತಿಭಾ ವಂತರನ್ನು ಸನ್ಮಾನಿಸುತ್ತಿದ್ದರು. ಇಷ್ಟೇ ಸಾಲದೆಂದು ಅಲ್ಲಿ ಕೃಷ್ಣರಾಜಸಾಗರ ದಲ್ಲಿ, ಬೃಂದಾವನವು ತನ್ನದೇ ಆದ ಕಾಂತಿಯಿಂದ ಬೇರೆಯೇ ಸ್ವರ್ಗವನ್ನು ಸೃಷ್ಟಿಸುತ್ತಿತ್ತು. ಆದರೆ ಆ ಭವ್ಯ ವೈಭವದ ನೆನಪುಗಳನ್ನು ನಮ್ಮ ಮನಗಳಿಂದ ತೊಡೆದು ಹಾಕಲು ಈ ಕ್ರೂರ ಇತಿಹಾಸಕ್ಕೂ ಸಾಧ್ಯವಿಲ್ಲ, ಮನುಷ್ಯನಿಗೆ ನೆನಪು ಇರುವ ತನಕ ಮೈಸೂರಿನ ರಾಜ ಪರಂಪರೆಯನ್ನು ಅಮೋಘ ಅಧ್ಯಾಯ ಗಳನ್ನು ಅಳಿಸುವುದು ಕಷ್ಟ.

- (ವಿವಿಧ ಮೂಲಗಳಿಂದ)



# ವರ್ಣಿಸಲಳವಲ್ಲ ವೆಂಕಟಗಿರಿಯ ಸೃಷ್ಟಿ ಬಹು ಸಿರಿಯ

- ಶ್ರೀಮತಿ. ಪ್ರಿಯಾಪ್ರಾಣೇಶ್ ಹರಿದಾಸ
80504 36752

ಹರಪನಹಳ್ಳಿ ಭೀಮವ್ವ ಅವರು ಅಂಕಿತ "ಭೀಮೇಶಕೃಷ್ಣ" ನಾಮದಿಂದ ರಚಿಸಿದಂತಹ "ಎಷ್ಟು ಹೇಳಲಿ ವೆಂಕಟಗಿರಿಯ ಸೃಷ್ಟಿಗೆ ಬಹು ಸಿರಿಯಾ" ಎಂಬ ಐದು ನುಡಿವುಳ್ಳ ಸಾಹಿತ್ಯದಲ್ಲಿ ತಿರುಪತಿ ಮತ್ತು ತಿರುಪತಿ ವೆಕಂಪ್ಪನ ಸೊಬಗು ಮಹಿಮೆಯನ್ನು ವರ್ಣಿಸಿದ್ದಾರೆ.

ಈ ಸಾಹಿತ್ಯ ಅವಲೋಕಿಸಿದಾಗ ಶ್ರೀನಿವಾಸ ಕಲ್ಯಾಣ ಕಣ್ಮುಂದೆ ಬರುವಂತೆ ಅಷ್ಟು ಸುಂದರವಾದ ಪದ ಪುಂಜಗಳಿಂದ ವರ್ಣಿಸಿ ಅವ್ವನವರು ರಚಿಸಿದ್ದಾರೆ.

ಎಷ್ಟು ಹೇಳಲಿ ವೆಂಕಟಗಿರಿಯ
ದೃಷ್ಟಿಗೆ ಬಹು ಸಿರಿಯ
ಬೆಟ್ಟವನೆ ಮನಸಿಟ್ಟೇರಲು ಬೇಡಿದ
ಇಷ್ಟಾರ್ಥಗಳ ಈಡಾಡುವ ದೊರೆಯ / ಪ

ಭಗವಂತ ಲೋಕಪಾಲಕ, ಜಗನಾಥ, ಶ್ರೀ ವಿಷ್ಣು ಸಹಸ್ರನಾಮದಲ್ಲಿ ಹೇಳಿದಂತೆ ಭಗವಂತ

"ವಿಶ್ವಂ ವಿಷ್ಣು" ಎನ್ನುವಂತೆ ವಿಶ್ವನಾಥ.

ಅವನ ನಂಬಿ ನಡೆದರೆ ನಮ್ಮನ್ನು ಕೊಟ್ಟು ಉದ್ದರಿಸುವ ಎಂದಿದ್ದಾರೆ.
ಚಿತ್ರ ವಿಚಿತ್ರದ ಮಹಾದ್ವಾರ ಚಿನ್ನದ ಗೋಪುರ
ಸ್ವಚ್ಛವಾದ ಸ್ವಾಮಿ ಪುಷ್ಕರಣಿ ತೀರ ಸುತ್ತಲು ಪ್ರಾಕಾರ
ಹೆಚ್ಚಿನ ತೀವ್ರತವೆ ಮನೋಹರ ಮಾರುವ ವಿಸ್ತಾರ
ಚಿತ್ತಜನಯ್ಯನ ಶೈಲವೆ ದೂರದಿಂದ್ಹತ್ತಿ ಬರುವುದೀತನ ಪರಿಹಾರ

ಭಗವಂತ ಮಂದಿರ ಏಳು ಚಿತ್ರ ವಿಚಿತ್ರ ಬಾಗಿಲುಗಳಿಂದ ಕೂಡಿದೆ

ತಿರುಪತಿ ಸೃಷ್ಟಿಸಿದ ಬೆಟ್ಟವನ್ನು ಮತ್ತು ಬಂಗಾರದ ಗೋಪುರ ಮತ್ತು ಸ್ವಾಮಿ ಪುಷ್ಕರಣಿ ಬಗ್ಗೆ ಸೊಗಸಾಗಿ ವರ್ಣಿಸಿದ್ದಾರೆ.

ಹಾಗೇ ಮದುವೆ ನಿಶ್ಚಯವಾದರೆ ಈತನ ಪರಿವಾರ ಸಹ ಕುಟುಂಬದ ಜೊತೆ ಬಂದು ಭಾಗಿಯಾದ ವರ್ಣನೆಯನ್ನು ಮೊದಲ ನುಡಿಯಲ್ಲಿ ಬರೆದಿದ್ದಾರೆ.

ಕಟ್ಟಿದ ಉಡಿದಾರ ಉಟ್ಟಿದ್ದ ನಿರಿಜರ ಪೀತಾಂಬರ
ಕೌಸ್ತುಭ ಮಣಿಹಾರ ಗಟ್ಟಿ ಕರಕಂಕಣ ಕುಂಡಲಧರ
ಚತುರ್ಭಜದಲಂಕಾರ ವಕ್ಷಸ್ಥಳದಲ್ಲಿ ಹೊಂದಿದ ಶ್ರೀ ಮಹಾ
ಲಕ್ಷ್ಮೀ ದೇವಿಯರಿಂದೊಲಿವ ಶೃಂಗಾರ ॥ 2 ॥

ಇನ್ನು ಎರಡನೇ ನುಡಿಯಲ್ಲಿ ಭಗವಂತನ ಶೃಂಗಾರ ವರ್ಣಿಸುವುದರ ಜೊತೆ ವೃಕ್ಷಸ್ಥಳವಾಸಿಯಾದ ಲಕ್ಷ್ಮಿ ಇದ್ದಿರುವುದರಿಂದ ಇನ್ನಷ್ಟು ಹೆಚ್ಚಿನ ಶೃಂಗಾರಮಾಯವಾಗಿ ಕಾಣುವುದು ಹೆಚ್ಚಿನ ವಿಶೇಷ ಅಂತ ಹೇಳಿದ್ದಾರೆ.

ಆಕಾಶರಾಜನ ಕಿರೀಟ ಚಿತ್ರವು ಬಹುಮಾಟ
ಹಾಕಿದ್ದ ಹರಿ ಕಡೆಗಣ್ಣಿನ ನೋಟ
ಭಕ್ತರ ಪಡಿಪಾಟ ಬಿಡಿಸುವ ಯಮಕಾಟ
ಕೋಟಿ ಜನರ ಓಡ್ಯಾಟವೆ ನಮ್ಮ
ಕಿರೀಟಿಯ ಸಖ ಕೇಶವನ ಮಂದಿರದೊಳ್॥3॥

ಪದ್ಮಾವತಿಯ ತಂದೆ ಆಕಾಶರಾಜ ಕಿರೀಟ ಒಪ್ಪಿಸುತ್ತಾನೆ. ಅದೇ ಕಿರೀಟವನ್ನು ಪ್ರತಿ ಶುಕ್ರವಾರ ತೊಡಿಸುತ್ತಾರೆ. ಭಗವಂತ ಒಂದು ಕೃಪಾದೃಷ್ಟಿಗೆ ಇಡೀ ಜಗದ ಜನರು ತವಕದಿಂದ ಕಾಯುತ್ತಿರುತ್ತಾರೆ. ಇವನ ಅಣತಿಯಂತೆ ಹದಿನಾಲ್ಕು ಲೋಕಗಳ ಕಾರ್ಯ ನಡೆಯುವುದು ಮತ್ತು ತಿರುಪತಿ ಎಲ್ಲ ಜನರ ಆರಾಧ್ಯ ದೈವ ಎಂದು ಹೇಳಿದ್ದಾರೆ.

ತಪ್ಪುಗಾಣಿಕೆಯ ಬೇಡುವ ಸರ್ಪ
ಶೈಲದ ತಿಮ್ಮಪ್ಪ ಕಪ್ಪವ ಕಾಸು ಕವಡೆ ಮುಡುಪು
ಹಾಕದೆ ತಾನೊಪ್ಪ ಜಪ್ಪಿಸಿ ನೋಡುವ ಜನರ ತಪ್ಪ
ಹುಡಿಕ್ಯಾಡುತಲಿಪ್ಪ ಅಪ್ಪ ಮಹಿಮಾನಂತ ಮೂರುತಿ ತಾ -
ನೊಪ್ಪಿದರೊಲಿದು ಕೊಡುವ ಸಾರೂಪ್ಯ॥4॥

ಇನ್ನು ನಾಲ್ಕನೇ ನುಡಿಯಲ್ಲಿ ಶ್ರೀನಿವಾಸನು ತನ್ನ ಕಲ್ಯಾಣ ಕಾರ್ಯಕ್ಕೆ ಬೇಕಾಗುವ ಧನವನ್ನು ಕಲಿಯುಗದ ಜನರು ತಾವು ಮಾಡಿರುವ ತಪ್ಪು ಪಾಪಗಳ ಪ್ರಾಯಶ್ಚಿತವಾಗಿ ಮುಡುಪು ಹಾಕುತ್ತಾರೆ.



ಆ ರೀತಿಯಾಗಿ ನನ್ನಲ್ಲಿ ಭಕ್ತರು ಹಾಕುವ ಕೈಕಾಣಿಕೆಯಿಂದ ಹಣ ತೀರಿಸುವುದಾಗಿ ಹೇಳಿ ಹಣ ಪಡೆದಿರುತ್ತಾನೆ. ಹಾಗೇ ನಿಷ್ಕಾಮ ಭಕ್ತರಿಗೆ ಮೆಚ್ಚಿ ಮೋಕ್ಷದ ನಾಲ್ಕು ವಿಭಾಗಗಳಾದ ಸಾಲೋಕ್ಯ ಸಾಮೀಪ್ಯ.

ಸಾರೂಪ್ಯ ಸಾಯುಜ್ಯ ಇಂತಹ ಶ್ರೇಷ್ಠವಾದ ಸಾರೂಪ್ಯವನ್ನು ಕೊಡುವನು ಎಂದಿದ್ದಾರೆ.

ದೇಶದೇಶದೊಳು ಈತನ ವಾರುತೆಯು
ತುಂಬಿದ ಕೀರುತಿಯು ಆಸೆಯ ದೈವ ಈ ಮೂರುತಿಯು
ಫಲ್ಗುಣ ಸಾರಥಿಯು ಲೇಸಾಗಿ ಜನರ ನೋಡುವ ರತಿಯು
ಕರ್ಪುರದಾರತಿಯು ವಾಸವಾಗಿರುವ ಈ ಶೇಷಾದ್ರಿಯಲಿ ಭೀ
ಮೇಶ ಕೃಷ್ಣ ಶ್ರೀನಿವಾಸ ಕೃಪಾಳು॥ 5॥

ಇನ್ನು ಕೊನೆ ನುಡಿಯಲ್ಲಿ ಜಗದಗಲ ಮುಗಿಲಗಲ ಅನಂತಾನಂತ ಮಹಿಮಾತೀತನಾದ ಶ್ರೀನಿವಾಸ ಮಹಿಮೆ ಕೀರುತಿ ಬೆಳೆದು ವಿಶ್ವ ವ್ಯಾಪ್ತಿಯಾಗಿ ಇದ್ದಾನೆ.

ಹಾಗೇ ಭಕ್ತರ ಸೇವಕನಾಗಿ ಅಂದರೆ ಅರ್ಜುನ ಸಾರಥಿಯಾದಂತೆ ಅಂತ ನಿಸ್ಸೀಮ್ಮ ಕರುಣಾಳು ದೊರೆ ನಮ್ಮ ತಿರುಪತಿ ವೆಂಕಪ್ಪ ಎಂದು ವರ್ಣಿಸಿದ್ದಾರೆ.

ಒಟ್ಟಾರೆ ಈ ಸಾಹಿತ್ಯದಲ್ಲಿ ತಿರುಪತಿ ಮತ್ತು ವೆಂಕಟರಮಣನ ಬಗ್ಗೆ ವರ್ಣಿಸಿದ್ದಾರೆ.

ಈ ಸಾಹಿತ್ಯ ಅವಲೋಕಿಸಿದಾಗ ಎಲ್ಲ ಪಾತ್ರಗಳು ಕಣ್ಮುಂದೆ ಬರುವಂತೆ ಭೀಮ್ಮಪ್ಪನವರು ಮನಮೋಹಕವಾಗಿ ವರ್ಣಿಸಿದ್ದಾರೆ. ಅದಕ್ಕೆ ಉಪನಿಷತ್ತಿನಲ್ಲಿ ಹೇಳಿದಂತೆ:-

''ಅಣೋರಣಿಯಾನ್ ಮಹತೋಮಹಿಯಾನ'' ಅಂದರೆ ಭಗವಂತ ಅಣುವಿನಲ್ಲಿ ಮಹತ್ತು ಘನ ಪರಮಾಣು ಹೀಗೆ ಎಲ್ಲದರಲ್ಲೂ ವ್ಯಾಪಿಸಿ ಗುಣಿಯಾಗಿದ್ದಾನೆ.

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**
**ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**
**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**
**ಬೇರೆಯವರನ್ನು ಸಂಬೋಧನೆ ಮಾಡುವಾಗ "ಗೋವಿಂದಾ" ಎಂದು ಸಂಬೋಧನೆ ಮಾಡೋಣ.**
**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿ ಇರಬೇಕು.**

# ತಿರುಪತಿಯ ಹುಚ್ಚಾಚಾರ್ಯರು

ಡಾ॥ ಎನ್.ಜಿ. ವಿಜಯಲಕ್ಷ್ಮಿ ರಾಘವೇಂದ್ರಾ ಚಾರ್ಯ
90351 85102

ರುಕ್ಮಿಣಿ ಜನನೀಯಶ್ಚ ಶ್ರೀನಿವಾಸಸ್ತು ಯತ್ಪಿತ।
ಯೋ ಪಾಂಡುರಂಗೀ ವಂಶೀಯಃ ತಂ ವಂದೇ
ಸದ್ಗುರುಂ ಮಮ॥

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಭದ್ರಾಪುರ ಗ್ರಾಮದಲ್ಲಿ ಪಾಂಡುರಂಗಿ ಮನೆತನಕ್ಕೆ ಸೇರಿದ ಶ್ರೀನಿವಾಸಾಚಾರ್ಯರು ವಾಸವಾಗಿದ್ದರು. ಅವರ ಧರ್ಮಪತ್ನಿ ಅಲ್ಪಾಯುವಾಗಿ ಬಹು ಬೇಗ ಶ್ರೀ ಹರಿ ಪಾದ ಸೇರಿದರು. ನಂತರ ತಮ್ಮ ತಂಗಿಯ ಮಗಳು ರುಕ್ಮಿಣಿಯನ್ನು ಮದುವೆಯಾದರು. ಕಾಲ ಸರಿದಂತೆ ಅವರಿಗೆ ಚತುರ್ವಿಧ ಪುರುಷಾರ್ಥದಂತೆ ನಾಲ್ಕು ಮಕ್ಕಳು ಜನಿಸಿದರು. ಮೊದಲಿಗೆ ಎರಡು ಗಂಡು ಮಕ್ಕಳು. ನಂತರ ಒಂದು ಹೆಣ್ಣು. ಕೊನೆಯದಾಗಿ ಮತ್ತೆ ಗಂಡು. ಕೊನೆಯ ಮಗು ಗರ್ಭದಲ್ಲಿದ್ದಾಗ ತಾಯಿಯ ಬಯಕೆಗಳು ವಿಚಿತ್ರವಾಗಿದ್ದವು. ಸದಾ ಪುರಾಣ - ಪ್ರವಚನ ಕೇಳುವ ಬಯಕೆ. ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುವ ಹೆಬ್ಬಯಕೆ. ಹರಿ ಭಜನೆ, ಹರಿ ಚಿಂತನೆ. ರಾಕ್ಷಸ ನಾಮ ಸಂವತ್ಸರ ಫಾಲ್ಗುಣ ಬಹುಳ ಷಷ್ಠಿ ಗುರುವಾರ ಕ್ರಿ.ಶ. 1865 ರಲ್ಲಿ ಮುದ್ದಾದ ಒಂದು ಗಂಡು ಮಗು ಜನಿಸಿತು.ಶಿಕಾರಿಪುರದ ಊರ ದೈವ ಹುಚ್ಚರಾಯನ ಹೆಸರನ್ನು ಆ ಮಗುವಿಗೆ ಇಟ್ಟು 'ಹುಚ್ಚಾಚಾರ್ಯ' ನೆಂದು ನಾಮಕರಣ ಮಾಡಿದರು. ಮಗು ಬೆಳೆದಂತೆ ತಂದೆಯೇ ಮಂತ್ರ, ಸ್ತೋತ್ರ, ಅಮರ ಕೋಶ ಇತ್ಯಾದಿಗಳನ್ನು ಕಲಿಸಿದರು.ಪದ್ಧತಿಯಂತೆ ಎಂಟನೇ ವಯಸ್ಸಿನಲ್ಲಿ ಉಪನಯನ ಮಾಡಿದರು. ಕಾಲಕ್ಕೆ ತಕ್ಕಂತೆ ಲೌಕಿಕ ವಿದ್ಯೆ ಕಲಿಯಲು ಶಾಲೆಗೆ ಸೇರಿಸಿದರು.

ಶಾಲೆಯಲ್ಲಿ ಸಹಪಾಠಿಗಳು ಬಾಲಕ ಹುಚ್ಚಾಚಾರ್ಯನ ಜುಟ್ಟು, ಜನಿವಾರಗಳನ್ನು ಕಂಡು ಅವಹೇಳನ ಮಾಡಲಾರಂಭಿಸಿದರು. ಇದರಿಂದ ಆ ಬಾಲಕನಿಗೆ ಬಹಳ ದುಃಖವಾಯಿತು,ನೋವಾಯಿತು, ಅಪಮಾನ ಸಹಿಸಲಾರದೆ ಮನೆ ಬಿಟ್ಟು ಊರು ಬಿಟ್ಟು ಹೊರಟು ಹೋದನು. ಮನಸ್ಸಿನಲ್ಲಿ ತಮ್ಮ ಹಿರಿಯರಂತೆ ಮಹಾಲಕ್ಷ್ಮಿಯ ಅನುಗ್ರಹ ಪಡೆಯಬೇಕೆಂಬ ಛಲ ಹುಟ್ಟಿತು. ಕೊಲ್ಹಾಪುರಕ್ಕೆ ಹೊರಟನು. ಲಕ್ಷ್ಮೀದೇವಿಯನ್ನು ಕಣ್ಣು ತುಂಬಾ ಕಂಡನು. ಮನದುಂಬಿ ಹಾಡಿದನು. ದಿಕ್ಕು ದೆಸೆ ಇಲ್ಲದ ಸ್ಥಳ. ಮಹಾಲಕ್ಷ್ಮಿಯ ದರ್ಶನಕ್ಕೆ ಬಂದ ಭಕ್ತರು ಈ ಹುಡುಗನ ಹಾಡು ಕೇಳಿ ಮಂಡಕ್ಕಿ, ಬೆಂಡು, ಬತ್ತಾಸು ಇತ್ಯಾದಿಗಳನ್ನು ನೀಡುತ್ತಿದ್ದರು. ಅಲ್ಲಿನ ಹೆಸರಾಂತ ಶ್ರೀಮಂತ ಅಂತಾಜಿ ಪಂತ ದಂಪತಿಗಳು ಅಮ್ಮನವರ ದರ್ಶನಕ್ಕೆ ಬಂದಾಗ ಈ ಹುಡುಗನನ್ನು ಕಂಡರು. ಮಕ್ಕಳಿಲ್ಲದ ಅವರು ಈ ಹುಡುಗನನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸಿದರು. ವೇದ, ವೇದಾಂತ , ಶಾಸ್ತ್ರ ಇತ್ಯಾದಿಗಳ ಅಧ್ಯಯನ ಮಾಡಿಸಿದರು. ಮಗ ಕೊಲ್ಹಾಪುರದಲ್ಲಿರುವನೆಂಬ ವಿಷಯ ತಿಳಿದು ಹೆತ್ತ ತಂದೆ ತಾಯಿಯರು ಮಗನನ್ನು ಹುಡಿಕಿಕೊಂಡು ಬಂದರು. ಅಧ್ಯಯನ ಪೂರ್ಣವಾದ ನಂತರ ಬರುತ್ತೇನೆಂದು ಹೇಳಿ ತಂದೆ ತಾಯಿಯನ್ನು ಊರಿಗೆ ಕಳುಹಿಸಿಕೊಟ್ಟನು.

ಅಂದು ಹೇಳದೇ ಕೇಳದೇ ಮನೆ ಬಿಟ್ಟು ಹೋಗಿದ್ದ ಹತ್ತು ವರ್ಷದ ಬಾಲಕ ಇಂದು ಇಪ್ಪತ್ತು ವರ್ಷದ ತರುಣನಾಗಿ , ಪ್ರಕಾಂಡ ಪಂಡಿತನಾಗಿ ಹೆತ್ತ ತಂದೆ ತಾಯಿಯರ ಮುಂದೆ ಬಂದು ನಿಂತನು. ಎಲ್ಲರಿಗೂ ಬಹಳ ಸಂತೋಷವಾಯಿತು. ಎಲ್ಲರ ಅಪೇಕ್ಷೆಯಂತೆ ತನ್ನ ಅಕ್ಕನ ಮಗಳನ್ನು ಮದುವೆಯಾಗಿ ಗೃಹಸ್ಥನಾದನು. ಕಾಲ ಉರುಳಿದಂತೆ ಹೆತ್ತ ತಂದೆ ತಾಯಿಯರು ಹಾಗೂ ಸಾಕಿದ ತಂದೆ ತಾಯಿಯರು ಕಾಲವಶರಾದರು. ಹುಚ್ಚಾಚಾರ್ಯರು ಕೊಲ್ಹಾಪುರಕ್ಕೆ ಹೋಗಿ ತನ್ನ ಸಾಕು ತಂದೆ ತಾಯಿಯರ ಅಪರ ಕರ್ಮಗಳನ್ನು ಮಾಡಿ ಋಣಮುಕ್ತರಾದರು. ಅವರ ಆಸ್ತಿಗಳನ್ನೆಲ್ಲಾ ಬಡಬಗ್ಗರಿಗೆ ದಾನ ಮಾಡಿ ಬರಿಗೈಯಲ್ಲಿ ಹಿಂದಿರುಗಿದರು.

ಪ್ರವಚನ, ಪಾಠ, ಪೂಜೆ, ಅಧ್ಯಯನ ಇತ್ಯಾದಿಗಳು ಆಚಾರ್ಯರ ದಿನಚರಿಗಳಾದವು. ಶಾಂತಿ ಪಾಠ ಹಾಕಿಸಿಕೊಂಡು ಶ್ರೀಮಧ್ವಾಚಾರ್ಯರ ಮೂವತ್ತೇಳು ಗ್ರಂಥಗಳ ಅಧ್ಯಯನ ಮಾಡಿದರು. ಮಹಾಲಕ್ಷ್ಮಿಯ ಸ್ವಪ್ನ ಸೂಚನೆಯಂತೆ ಹುಬ್ಬಳ್ಳಿಗೆ ಹೊರಟರು. ಅಲ್ಲಿಯೇ ಹನ್ನೆರಡು ವರ್ಷ ಇದ್ದು, ಅಲ್ಲಿಯ ಭೂತ ಪ್ರೇತಗಳ ಕಾಟವನ್ನು ನಿವಾರಿಸಿ ಜನರಿಗೆ ಸನ್ಮಾರ್ಗ ತೋರಿಸಿದರು. ಮುಂದೆಯೂ ಸ್ವಪ್ನ ಸೂಚನೆಯಂತೆ ರಾಣೇಬೆನ್ನೂರಿಗೆ ಹೊರಟರು. ಅಲ್ಲಿಯೂ ಅನೇಕಾನೇಕ ಮಹಿಮೆ ಪವಾಡಗಳನ್ನು ತೋರಿಸಿದರು. ಮಹರ್ಷಿ ನಾರದರು ಕನಸಿನಲ್ಲಿ ಕಾಣಿಸಿಕೊಂಡು "ಇಂದಿರೇಶ" ಎಂಬ ಅಂಕಿತ ನೀಡಿದರು. ಅಂದಿನಿಂದ ಇಂದಿರೇಶ ಅಂಕಿತದಿಂದ ದೇವರ ನಾಮಗಳನ್ನು ಕನ್ನಡದಲ್ಲಿ ರಚಿಸಲಾರಂಭಿಸಿದರು.

ಮತ್ತೆ ಸ್ವಪ್ನ ಸೂಚನೆಯತೆ ತಿರುಪತಿಗೆ ಹೋಗಿ ಅಲ್ಲಿ ನೆಲೆಸಿದರು. ಛತ್ರದಂತಹ ವಿಶಾಲವಾದ ಮನೆ. ತಿರುಪತಿಗೆ ಬಂದು ಹೋಗುವವರಿಗೆಲ್ಲಾ ಆಶ್ರಯ ನೀಡಿದರು. ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿದರು. ಶ್ರೀನಿವಾಸ - ಪದ್ಮಾವತಿಯರ ಕಲ್ಯಾಣ, ಶ್ರೀಕೃಷ್ಣ - ರುಕ್ಮಿಣಿಯರ ಕಲ್ಯಾಣ ಇತ್ಯಾದಿ ಕಲ್ಯಾಣಗಳನ್ನು "ನ ಭೂತೋ ನ ಭವಿಷ್ಯತಿ" ಎನ್ನುವಂತೆ ಮಾಡುತ್ತಿದ್ದರು.ಸಾಮಾನ್ಯ ಜನರೂ ಈ ಉತ್ಸವಗಳಲ್ಲೀ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.ಸುಮಾರು ಮೂವತ್ತೈದು ವರ್ಷ ತಿರುಪತಿ ತಿಮ್ಮಪ್ಪನ ಸೇವೆ ಮಾಡಿ ತಿರುಪತಿ ಹುಚ್ಚಾಚಾರ್ಯರೆಂದೇ ಪ್ರಸಿದ್ಧರಾದರು. ಪುರಂದರದಾಸರೊಂದಿಗೆ ಭಗವಂತ ಅನೇಕ ಆಟಗಳನ್ನು ಆಡಿ ಲೀಲೆಗಳನ್ನು ತೋರಿದಂತೆ ಹುಚ್ಚಾಚಾರ್ಯರೊಂದಿಗೂ ಅನೇಕ ಆಟಗಳನ್ನು ಆಡಿ ಲೀಲೆಗಳನ್ನು ತೋರಿದನು ಎಂಬ ಐತಿಹ್ಯ ಉಂಟು. ಪ್ರಮಾಥಿ ನಾಮ ಸಂವತ್ಸರ ಕಾರ್ತೀಕ ಮಾಸ ಬಹುಳ ಪಂಚಮಿ, ಶುಕ್ರವಾರ ಅಭಿಜಿನ್ ಮುಹೂರ್ತದಲ್ಲಿ ಇಂದೀರೇಶದಾಸರು ಅಂದರೆ ತಿರುಪತಿ ಹುಚ್ಚಾಚಾರ್ಯರು ತಮ್ಮ ದೇಹ ತ್ಯಜಿಸಿದರು.

ಇಂದಿರೇಶದಾಸರು ಪ್ರತಿದಿನವೂ ಧ್ಯಾನ ಶ್ಲೋಕಗಳನ್ನು ರಚಿಸುತ್ತಿದ್ದರೆಂದು ಪ್ರತೀತಿ. ಸುಮಾರು ಮೂವತ್ತು ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಭಾಷೆಯಲ್ಲಿ ದಶಮಸ್ಕಂದ ಭಾಗವತ ಅಲ್ಲದೆ ಸುಮಾರು ನೂರಾ ಅರವತ್ತೈದು ಚಿಕ್ಕ ಪಟ್ಟ ದೇವರನಾಮಗಳನ್ನು ರಚಿಸಿದ್ದಾರೆ. ಪಾಪ ಪುರುಷನ ವಿಸರ್ಜನೆ, ಮಾನಸ ಪೂಜೆ, ಆವರಣ ಪೂಜೆ, ಭಗವದ್ರೂಪ ಚಿಂತನೆ , ಶ್ರೀಲಕ್ಷ್ಮೀ ಲೀಲಾಮೃತ ಇತ್ಯಾದಿ ದೀರ್ಘ ಕೃತಿಗಳು ದೊರಕಿವೆ. ಅವರ ಸಾಕಷ್ಟು ಹಾಡುಗಳು ಭಕ್ತರ ನಾಲಿಗೆ ಮೇಲೆ ನಲಿದಾಡುತ್ತಿವೆ.





# ಶ್ರೀ ಕೃಷ್ಣದೇವರಾಯನ ತಿರುಪತಿ ಯಾತ್ರೆಗಳು


ಡಾ॥ ಕೆ.ವಿ. ರಾಜೇಶ್ವರಿ
95356 41095


ತಿರುಪತಿ ಕ್ಷೇತ್ರ ದಕ್ಷಿಣಭಾರತದಲ್ಲಷ್ಟೇ ಅಲ್ಲ ಭಾರತದಲ್ಲೇ ಪ್ರಖ್ಯಾತವಾದ ಪುಣ್ಯಕ್ಷೇತ್ರ ಮತ್ತು ತೀರ್ಥಯಾತ್ರಾ ಕ್ಷೇತ್ರ. ಇನ್ನು ತಿರುಪತಿ ತಿಮ್ಮಪ್ಪನಂತೂ ಇಡೀ ಜಗತ್ತಿನಲ್ಲಿಯೇ ಪ್ರಖ್ಯಾತ ದೇವರು.ಭಾರತದ ಇತಿಹಾಸದಲ್ಲಿ ಅಶೋಕ , ಚಂದ್ರಗುಪ್ತ , ಅಕ್ಬರ್ ಜನಪ್ರಿಯತೆ ಗಳಿಸಿದಂತೆ ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದ ಇತಿ ಹಾಸದಲ್ಲಿ ಪ್ರಸಿದ್ಧನಾಗಿ ಧ್ರುವತಾರೆಯಂತೆ ಕಂಗೊಳಿಸಿದವನು ಕೃಷ್ಣದೇವರಾಯ. ವಿಜಯನಗರ ಸಾಮ್ರಾಜ್ಯದ ವಿಖ್ಯಾತ ಚಕ್ರವರ್ತಿ. ವಿಜಯನಗರದ ಹುಟ್ಟಿಗೆ ಹಕ್ಕ ಬುಕ್ಕರು ಮೂಲ ಕಾರಣರಾದರೂ ಆ ಸಾಮ್ರಾಜ್ಯದ ವೈಭವಕ್ಕೆ-ವಿಖ್ಯಾತಿಗೆ ಕೃಷ್ಣದೇವರಾಯ ಕಾರಣನಾದ.

ಇಡೀ ದಕ್ಷಿಣ ಭಾರತವನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡ ಕೀರ್ತಿ ಈತನದು.ಈತನ ಸಾಮ್ರಾಜ್ಯ ಎಷ್ಟಿತ್ತೆಂದರೆ ವಿಜಯನಗರದ ಬೀದಿಗಳಲ್ಲಿ, ಮುತ್ತು, ರತ್ನ, ವಜ್ರಗಳನ್ನು ರಾಶಿ ಹಾಕಿಕೊಂಡು ಬಳ್ಳಗಳಲ್ಲಿ ಅಳೆದು ಮಾರುತ್ತಿದ್ದರಂತೆ. ಈತ ಶೂರ, ಮಹಾವಿವೇಕಿ ರಾಜಕೀಯ ರಂಗದ ದೂರದೃಷ್ಟಿಯಿರುವವನು. ಸ್ವಯಂ ಕವಿ, ಕವಿ ಪೋಷಕ, ಸಂಗೀತ ಪ್ರಿಯ, ಸೌಂದರ್ಯಾರಾಧಕ ತಿರುಪತಿ ಕ್ಷೇತ್ರಕ್ಕೆ ಏನೆಲ್ಲಾ ಅನುಕೂಲಗಳು ಅಗತ್ಯವೋ ಅದನ್ನೆಲ್ಲಾ ಕೈಗೊಂಡ ದೈವಭಕ್ತ, ಪ್ರಜಾಹಿತ ಚಿಂತಕ,ತಿರುಪತಿಯ ದೇಗುಲದಲ್ಲಿ ಇಂದಿಗೂ ತನ್ನ ಪತ್ನಿಯರೊಂದಿಗೆ ಭಕ್ತ ವಿಗ್ರಹನಾಗಿ ನಿಂತಿದ್ದಾನೆ.

ತಿರುಪತಿ ವೆಂಕಟೇಶ್ವರನ ಪರಮಭಕ್ತ ಈತ. ತನ್ನ ಆಳ್ವಿಕೆಯ ಕಾಲದಲ್ಲಿ ಏಳು ಬಾರಿ ತಿರುಪತಿಗೆ ಭೇಟಿ ಕೊಟ್ಟು ದೇವರಿಗೆ ಅನೇಕ ಕಾಣಿಕೆಗಳನ್ನು ಅರ್ಪಿಸಿದ. ಅಷ್ಟೇ ಅಲ್ಲ, ಆತನ ರಾಣಿಯರೂ ಕೂಡಾ ತಮ್ಮ ತಮ್ಮ ಕಾಣಿಕೆಗಳನ್ನು ದೇವರಿಗೆ ಸಮರ್ಪಿಸಿದ್ದಾರೆ. ಪ್ರತಿಯೊಂದು ತಿರುಪತಿ ಯಾತ್ರೆಯಲ್ಲಿ ಕೃಷ್ಣದೇವರಾಯನಿಗೆ ಒಂದೊಂದು ಗುರಿ, ಉದ್ದೇಶ, ಭಕ್ತಿ ಇತ್ತು ಎಂದು ಹೇಳಿದರೂ ತಪ್ಪಾಗಲಾರದು.

### ಕೃಷ್ಣದೇವರಾಯನ ಮೊದಲ ಭೇಟಿ - ತಿರುಪತಿ ಕ್ಷೇತ್ರಕ್ಕೆ

ಈತನ ಮೊದಲ ತಿರುಪತಿ ಯಾತ್ರೆ ನಡೆದಿದ್ದು ಉಮ್ಮತ್ತೂರಿನ ಗಂಗರಾಜನ ಮೇಲೆ ಸಾಧಿಸಿದ ವಿಜಯಕ್ಕಾಗಿ. ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲ ದೇವಿಯರೊಂದಿಗೆ ತಿರುಪತಿಗೆ ಯಾತ್ರೆ ಹೊರಡುತ್ತಾನೆ. ಅದೂ ಅಲ್ಲದೆ ಆ ಹೊತ್ತಿಗೆ ಕೃಷ್ಣದೇವರಾಯ ಪಟ್ಟಕ್ಕೆ ಬಂದು ನಾಲ್ಕು ವರ್ಷಗಳಾಗಿದ್ದಿತು. ಆ ಸಂದರ್ಭದಲ್ಲಿ ಕೃಷ್ಣದೇವರಾಯನು ತಿರುಮಲೇಶನಿಗೆ ನವರತ್ನ ಖಚಿತವಾದ ಚಿನ್ನದ ಕಿರೀಟವನ್ನೂ ಕಾಣಿಕೆಯಾಗಿ ಕೊಟ್ಟನು. 25 ಬೆಳ್ಳಿಯ ಆರತಿ ತಟ್ಟೆಗಳನ್ನೂ ಕೊಟ್ಟನು. ಇಬ್ಬರು ರಾಣಿಯರು ದೇವರಿಗೆ ಬಂಗಾರದ ಹಾಲಿನ ಬಟ್ಟಲನ್ನು ಕಾಣಿಕೆಯಾಗಿ ಕೊಟ್ಟರು. ಈ ಬಗ್ಗೆ ಒಂದು ಶಾಸನವು ಇದೆ. ಅದು ಹೀಗಿದೆ ಶುಭಮಸ್ತು. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು 1434



ರಂದು ಮೇಲೆ ನಡೆದ ಅಂಗೀರಸ ಸಂವತ್ಸರದ ಫಾಲ್ಗುಣ, ಶ್ರೀಮನ್ ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀವೀರ ಪ್ರತಾಪ ಶ್ರೀವೀರ ಕೃಷ್ಣರಾಯ ಮಹಾಶಯರು ತಿರುವೇಂಗಳನಾಥ ದೇವರಿಗೆ ಸಮರ್ಪಿಸಿದ ನವರತ್ನ ಖಚಿತ ಕಿರೀಟ ಹಾಕಿ ಹೊಂಚ ನಮ ಚಿನ್ನದ ತೂಕ 1555 ಕುಂದಾಣ ತೂಕ 1976 ಕೆಂಪು, 2822 ಪಚ್ಚ, 160 ಅರತಿ, 108 ಹಳೆಯ ವಜ್ರ, 423 ಕಿಂಜಾರಿ 65 ಮಧ್ಯ ಮಾಣಿಕ್ಯ,ಸಹ ಮಾಣಿಕ್ಯ, 3 ನೀಲ, 10 ವೈಡೂರ್ಯ, 1339 ತೂಕ, 163 ಮುತ್ತು, ಕಟ್ಟು ವಸರಿಗೆಯ ಚಿನ್ನದ ತೂಕ 14 ಅಂತು, ತೂಕ 3308 ಕಿರೀಟ 1 ಮುತ್ತು 1320 ಮಾಣಿಕ್ಯ, 1 ನೀಲ,2 ಕುಚುರಿ, 2 ಅರಿಗೆ, 15 ಸಹಾ ತೂಕ 225, ತ್ರಿಸರ ಮುತ್ತು 65,560 ಪಚ್ಯ 1 ಮಾಣಿಕ್ಯ , 3 ಕೆಂಪು, 5 ಸಹಾ ತೂಕ 61, 1 ಪರಕ ಬೆಳ್ಳಿಯ ಆರತಿಗಳು 25ಯಿಷ್ಟನ್ನೂ ತಂದು ಸೇವೆ ಯಾಗಿ ಸಮರ್ಪಸಿ ಚಿತ್ತೈಸ್ತರು'' ಎಂದು ತಿರುಪತಿ ದೇವಾಲ ಯದ ಉತ್ಸವ ಗೋಡೆಯಲ್ಲಿರುವ ಶಾಸನದಲ್ಲಿ, ರಾಣಿ ಯರು ಚಿನ್ನದ ಬಟ್ಟಲನ್ನು ಸಮರ್ಪಿಸಿದ ಶಾಸನವಿದೆ.

### ತಿರುಪತಿಯ ಎರಡನೆ ಯಾತ್ರೆ

1513 ಮೇ 2 ರಂದು ಕೃಷ್ಣದೇವರಾಯ ಎರಡನೆಯ ಬಾರಿ ತಿರುಪತಿಯ ಯಾತ್ರೆಗೆ ಹೋಗಿದ್ದನು. ಈ ಸಾರಿ ಕೃಷ್ಣ ದೇವರಾಯನ ಜೊತೆಯಲ್ಲಿ ಆತನ ರಾಣಿಯರು ಹೋಗಿರಲಿಲ್ಲ. ಈ ಬಾರಿ ಕೃಷ್ಣದೇವರಾಯ ಶ್ರೀದೇವಿ-ಭೂದೇವಿಯರಿಗೆ 3 ಚಿಕ್ಕ ಕಿರೀಟ ಮೂರೆಳೆ ಮುತ್ತಿನಹಾರ, ಇಪ್ಪತ್ತೈದು ಬೆಳ್ಳಿಯ ತಟ್ಟೆಗಳು ಮುತ್ತಿನ ಪದಕ, ಕಿರೀಟದಲ್ಲಿ 1555 ತೂಕದ ಬಂಗಾರದ ಕಟ್ಟಡ 1076 ತೂಕದ ಕುಂದಣ ಬಂಗಾರ, 2822 ಕೆಂಪುಗಳು160 ಪಚ್ಚ 423 ಹಳೆಯ ವಜ್ರ ಮೂರು ಮಾಣಿಕ್ಯಗಳು 10 ನೀಲಗಳ,17 ವೈಢೂರ್ಯಗಳು ಗೋಮೇಧಿಕ ಎಲ್ಲವೂ ಸೇರಿ 2130 ತೂಕ , 163 ಶತ ಕೂಸುವ ಮುತ್ತುಗಳ ಕಟ್ಟಡ ಬಂಗಾರದ ಸರಿಗೆ, ಸರ ಕಿರೀಟದ ಒಟ್ಟು ತೂಕ 3308 ಮುತ್ತಿನ ಮೂರೆಳೆ ಪದಕದಲ್ಲಿ 1370 ಜರಿ ಮುತ್ತಗಳಿದ್ದವು. ಒಂದು ಮಾಣಿಕ್ಯ 2 ನೀಲಮಣಿ, 15 ಅತ್ರಿಗೆಗಳಿದ್ದವು. ಇದರ ಒಟ್ಟು ತೂಕ 225 ಸಟಕದಲ್ಲಿ ಆರು ಮುತ್ತುಗಳು, 60 ವಜ್ರಗಳು, 11 ಪಚ್ಚಗಳು, ಮೂರು ಮಾಣಿಕ್ಯಗಳು 3 ಕೆಂಪುಗಳು ಇದ್ದು ಅದರ ಒಟ್ಟು ತೂಕ 91 ರಷ್ಟು ಎಂದು ತಿಳಿದು ಬರುತ್ತದೆ.

### ತಿರುಪತಿಯ ಮೂರನೆಯ ಯಾತ್ರೆ:

1513 ರ ಜೂನ್ 13 ರಂದು ಯಾತ್ರೆ ಕೈಗೊಳ್ಳುತ್ತಾನೆ. ಒರಿಸ್ಸಾದ ಗಜಪತಿಯನ್ನು ಹಿಮ್ಮೆಟ್ಟಿಸಿದ ಸಂತಸಕ್ಕಾಗಿ ಆ ವರ್ಷಕ್ಕೆ ಈ ಯಾತ್ರೆ ಹಾಗೂ ದೇವರಿಗೆ ಕೃತಜ್ಞತೆ ಸಲ್ಲಿಸಲು. ಈ ಬಾರಿ ತನ್ನ ತಂದೆ ನರಸನಾಯಕ ಮತ್ತು ತಾಯಿ ನಾಗಲಾಂಬಿಕೆ ಹೆಸರಿನಲ್ಲಿ ಅವರಿಗೆ ಪುಣ್ಯವಾಗಲಿ ಎಂದು ಅವರ ಹೆಸರಿನಲ್ಲಿ ದಾನಧರ್ಮಗಳನ್ನು ನಡೆಸುವುದಾಗಿತ್ತು. ಇವರ ಹೆಸರಿನಲ್ಲಿ ಐದು ಹಳ್ಳಿಗಳನ್ನು ದಾನವಾಗಿ ಕೊಟ್ಟನು.ದೇವರಿಗೆ ನವರತ್ನ ಖಚಿತವಾದ ಆಭರಣಗಳನ್ನು, ತನ್ನ ತಂದೆ ತಾಯಿಯ ಹೆಸರಿನಲ್ಲಿ ತ್ರೈಮಾಸ, ಸಂವತ್ಸರೋತ್ಸವ ನಡೆಸುವಂತೆ ಏರ್ಪಾಟು ಮಾಡಿದನು. ಅದಕ್ಕಾಗಿ ಚಕ್ರಾವತಿ, ತುರೂರು ಮತ್ತು ಕಂಬೂರು ಎನ್ನುವ ಗ್ರಾಮಗಳನ್ನು ದಾನವಾಗಿ ಕೊಟ್ಟನು.

### ಕೃಷ್ಣದೇವರಾಯನ ತಿರುಪತಿಯ ನಾಲ್ಕನೇ ಯಾತ್ರೆ

1514 ರಂದು ಜುಲೈ 6 ರಂದು ಕೃಷ್ಣದೇವರಾಯನು ತನ್ನ ರಾಣಿಯರು ಚಿನ್ನಾದೇವಿ ಮತ್ತು ತಿರುಮಲೆ ದೇವಿಯರೊಂದಿಗೆ ತಿರುಪತಿ ವೆಂಕಟೇಶ್ವರನ ದರ್ಶನ ಮಾಡಿದ. ಉದಯಗಿರಿ ದುರ್ಗವನ್ನು ಜಯಿಸಿದ ಮೇಲೆ ರಾಜಧಾನಿಗೆ ವಾಪಸ್ಸಾಗುತ್ತಾ ದಾರಿಯಲ್ಲಿ ಬರುವಾಗ ತಿರುಪತಿಗೆ ಒಂದು ವೆಂಕಟೇಶ್ವರನನ್ನು ದರ್ಶನ ಮಾಡಿದರು. ಉದಯಗಿರಿಯಿಂದ ಒಂದು ಬಾಲಕೃಷ್ಣನ ಮೂರ್ತಿಯನ್ನು ತರಲಾಗಿತ್ತು. ಅದನ್ನು ಪ್ರತಿಷ್ಠಾಪಿಸಲು ಒಂದು ಮಂದಿರ ಕಟ್ಟಬೇಕಾಗಿತ್ತು. ಈ ಬಾರಿ ಕೃಷ್ಣದೇವರಾಯನು ದೇವರಿಗೆ 30000 ಚಿನ್ನದ ನಾಣ್ಯಗಳಿಂದ ಅಭಿಷೇಕ ಮಾಡಿಸಿದ. ಇನ್ನೂ ಅನೇಕ ಆಭರಣಗಳನ್ನು ದೇವರಿಗೆ ಕೊಟ್ಟರು .

### ತಿರುಪತಿಯ ಐದನೆಯ ಯಾತ್ರೆ

ತಿರುಪತಿಯ ಐದನೆಯ ಯಾತ್ರೆಯನ್ನು 1515 ರ ಜೂನ್‌ನಲ್ಲಿ ಮಾಡಿದ ಕೆಲವರು ಇದನ್ನು 1518 ಎಂದು ಹೇಳುತ್ತಾರೆ. ತಾನು ಕೈಗೊಂಡ ದಂಡಯಾತ್ರೆಯಲ್ಲಿ ಅನೇಕ ದೇಶಗಳನ್ನು ಗೆದ್ದಿದ್ದರ ಸಂಭ್ರಮಕ್ಕಾಗಿ ಈ ಯಾತ್ರೆಯನ್ನು ಮಾಡಿದನು.

1515 ಅಕ್ಟೋಬರ್ 25 ರಂದು ತಿರುವೇಂಗಳನಾಥನಿಗೆ ನವರತ್ನ ಪ್ರಭಾವಳಿಯನ್ನು ಸಮರ್ಪಿಸಿದ. ಇದರಲ್ಲಿ ಅನೇಕ ರೀತಿಯ ಸುಂದರ ಆಭರಣಗಳು ಇದ್ದುವಂತೆ.

### ತಿರುಪತಿಯ ಆರನೆಯ ಯಾತ್ರೆ

ಕೃಷ್ಣದೇವರಾಯನು ತನ್ನ ಪಟ್ಟ ಮಹಿಷಿ ತಿರುಮಲದೇವಿಯೊಂದಿಗೆ 1518 ರ ಅಕ್ಟೋಬರ್ 16 ರಂದು ತಿರುಪತಿಗೆ ಮತ್ತೆ ಯಾತ್ರೆಗೆ ಹೊರಟ ಇದಕ್ಕೆ ಕಾರಣ, ಪಟ್ಟಮಹಷಿ ತಿರುಮಲ ದೇವಿಯು ಗಂಡು ಮಗುವಿಗೆ ಜನ್ಮಕೊಟ್ಟ ಸಂತೋಷದ ಸಂದರ್ಭದಲ್ಲಿ, ತನ್ನ ಮನೆ ದೇವರ ಹೆಸರನ್ನೇ ತನ್ನ ಮಗನಿಗೆ "ತಿರುಮಲರಾಯ" ಎಂದು ಇಟ್ಟನು. ಈ ಬಾರಿ ತಿರುಮಲೆಯ ವೆಂಕಟೇಶ್ವರನ ದೇವಾಲಯದ ಗರ್ಭಗುಡಿಯ ಮೇಲ್ಭಾಗದಲ್ಲಿ ಗೋಪುರ ವನ್ನು ಕಟ್ಟಿಸಿ, ಅದಕ್ಕೆ ಚಿನ್ನದ ಲೇಪನವನ್ನು ಮಾಡಿಸಿದನು. ಅಷ್ಟೇ ಅಲ್ಲ, ತನ್ನ ಹಾಗೂ ತನ್ನ ಇಬ್ಬರು ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲ ದೇವಿಯವರ ಕಂಚಿನ ಪ್ರತಿಮೆಗಳನ್ನು ಮಾಡಿಸಿ ತಿರುಮಲೆ ದೇವಾಲಯದಲ್ಲಿ ಇರಿಸಿದನು, ತನ್ನ ಭಕ್ತಿಯ ದ್ಯೋತಕವಾಗಿ, ಈಗಲೂ ಅವರು ಮೂವರ ವಿಗ್ರಹಗಳನ್ನು ತಿರುಪತಿಯಲ್ಲಿ ನೋಡಬಹುದು.

### ತಿರುಪತಿಯ ಏಳನೇ ಭೇಟಿ

ತನ್ನ ಏಳನೆಯ ಭೇಟಿಯನ್ನು ತಿರುಪತಿಗೆ ಕೃಷ್ಣದೇವರಾಯನು 1521 ಫೆಬ್ರವರಿ 17 ರಂದು ಕೈಗೊಂಡನು. ತನ್ನ ಅಣ್ಣ ಹಾಗೂ ತನ್ನ ಹಿರಿಯರ ಹೆಬ್ಬಯಕೆಯಾಗಿದ್ದ ಕಳಿಂಗದ ದಂಡಯಾತ್ರೆಯಲ್ಲಿ ಆ ರಾಜನನ್ನು ಸೋಲಿಸಿ ವಿಜಯಿಯಾಗಿ ಹಿಂತಿರುಗಿದ ಸಂದರ್ಭವನ್ನು ಪುರಸ್ಕರಿಸಿಕೊಂಡು ಈ ತಿರುಪತಿಯ ಯಾತ್ರೆಯು ನಡೆಯಿತು.ದೇವರಿಗೆ ಅನೇಕ ರೀತಿಯ ಪೂಜೆ ಪುನಸ್ಕಾರಗಳನ್ನು ಮಾಡಿಸಿದನು. ದೇವರಿಗೆ ನವರತ್ನ ಖಚಿತವಾದ ಪೀತಾಂಬರವನ್ನು, ಮಾಣಿಕ್ಯವನ್ನು ಪಚ್ಚೆ ಕುಲ್ಲಾಯಿ, ಚಾತುರ ಇತ್ಯಾದಿ ವಸ್ತುಗಳನ್ನು ತಿರುಮಲಾಂಬೆಯೊಡಗೂಡಿ ದೇವರಿಗೆ ಸಮರ್ಪಿಸಿದನು.

ಅಷ್ಟರಲ್ಲಿ,ಈ ಬಾರಿ ಕೃಷ್ಣದೇವರಾಯ ಆದಿಲ್‌ಷಾನನನ್ನು ಸೋಲಿಸಿ ರಾಯಚೂರು, ಬಿಜಾಪುರ ಕೋಟೆಗಳನ್ನು ವಶಪಡಿಸಿಕೊಂಡ ಸಂತೋಷವು ಸೇರಿತ್ತು.ಈ ರೀತಿ ಕೃಷ್ಣ ದೇವ ರಾಯನು ತಿರುಪತಿಗೆ ತನ್ನ ಜೀವನದ ಅವಧಿಯಲ್ಲಿ ಏಳುಬಾರಿ ಯಾತ್ರೆ ಮಾಡಿದನು. ತಾನು ಎಲ್ಲ ಯುದ್ಧಗಳಲ್ಲಿ ಗೆಲ್ಲಲು ತಿರುಪತಿಯ ವೆಂಕಟೇಶ್ವರನೇ ಕಾರಣನೆಂದು ಕೃಷ್ಣದೇವರಾಯನ ನಂಬಿಕೆಯಾಗಿತ್ತು.ಈ ಬಗ್ಗೆ ಅನೇಕ ಶಾಸನಗಳು ತಿರುಮಲೆ ದೇವಾಲಯದಲ್ಲಿ ಎಲ್ಲ ಭೇಟಿಯ ಬಗೆಯೂ ಶಾಸನಗಳಿವೆ.

ತನ್ನ ಪತ್ನಿಯರಿಬ್ಬರ ಜೊತೆ ವೆಂಕಟೇಶ್ವರನಿಗೆ ಕೈ ಮುಗಿಯುತ್ತಿರುವಂತೆ ಪ್ರತಿಮೆ ಗಳನ್ನು ಮಾಡಿಸಿ ತಿರುಪತಿಯ ದೇವಸ್ಥಾನದಲ್ಲಿ ನಿಲ್ಲಿಸಿದ್ದಾನೆಂದರೆ ಆ ದೇವರಲ್ಲಿ ಎಷ್ಟೊಂದು ಗಾಢ ಭಕ್ತಿಯಿತ್ತೆಂಬುದನ್ನು ತಿಳಿಸುತ್ತದೆ.ಈತ ತಿರುಮಲ ಎಂಬ ಪಟ್ಟಣವನ್ನು ಕೂಡಾ ನಿರ್ಮಿ ಸಿದ. ಒಟ್ಟಿನಲ್ಲಿ ತಿರುಮಲೆ ದೇವಸ್ಥಾನಕ್ಕೆ ಅಪಾರಕಾಣಿಕೆಗಳನ್ನು, ಗ್ರಾಮ-ಭೂಮಿಗಳನ್ನು ದಾನ ಮಾಡಿ ಆ ದೇವರ ಬಗ್ಗೆ ತನಗಿರುವ ಅಪಾರ ಭಕ್ತಿ ಮತ್ತು ನಂಬಿಕೆಯನ್ನು ಪ್ರದರ್ಶಿಸಿ ದ್ದಾನೆ.

1529 ರ ವರೆಗೂ ವಿಜಯನಗರವನ್ನು ಆಳಿದ 1521 ರ ನಂತರ ತಿರುಪತಿಗೆ ಹೋಗಲಿಲ್ಲ ಅದಕ್ಕೆ ಕಾರಣವೇನೆಂದು ತಿಳಿದಿಲ್ಲ.



## ಗರುಡ ವಾಹನೋತ್ಸವ

ಗರುಡನು ಪರಮಾತ್ಮನ ವಾಹನ ದೇವರು ತಾನು ಎಲ್ಲಿಯೇ ಪ್ರಯಾಣ ಮಾಡಲಿ ಗರುಡನ ಮೇಲೆಯೇ ಹೋಗುತ್ತಾನೆ. ಗರುಡನ ದೃಷ್ಟಿ ತೀಕ್ಷ್ಣವಾಗಿರುತ್ತದೆ. ದೂರದಿಂದ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ, ಪರಮಾತ್ಮನ ಆಜ್ಞೆಯಂತೆ ಇರುವ ಗರುಡನು ಸ್ವಾಮಿನಿಷ್ಠೆ ಹಾಗೂ ದೂರ ದರ್ಶಕತ್ವ ಭಕ್ತರು ತಮ್ಮಲ್ಲಿ ಅಳವಡಿಸಿಕೊಳ್ಳಲಿ ಎಂಬುದು ಭಗವಂತನ ಇಚ್ಛೆ. ಇನ್ನೂ ಹೆಚ್ಚು ಹೇಳುವುದಾದರೆ ಗರುಡ ದೇವರು ಅತೀ ದೊಡ್ಡವರಾಗಿಯೂ, ಸಣ್ಣವರಾಗಿಯೂ ಆಗುವ ಮತ್ತು ಮಾಯವಾಗುವ ಜೊತೆಗೆ ಮಾನವ ರೂಪ ಧರಿಸುವವರಾಗಿದ್ದಾರೆ.ಅನೇಕ ಅದ್ಭುತ ಶಕ್ತಿ ಸಾಮರ್ಥ್ಯ ಇದ್ದರೂ ಕೂಡಾ ಭಗವಂತನ ತನ್ನ ಹೆಗಲ ಮೇಲೆ ಹೊತ್ತು ಗರುಡ ದೇವರು, ಪರಮಾತ್ಮ ಹತ್ತಾವತಾರ ಧರಿಸಿದರೂ ಎಲ್ಲ ಅವತಾರಗಳಲ್ಲೂ ಗರುಡವೇ ವಾಹನ ಆಗಿರುವುದು ವಿಶೇಷ.

ಇಂತಹಾ ತೀರ್ಥಯಾತ್ರೆಗಳನ್ನು ಕೈಗೊಳ್ಳುವಾಗ ತನ್ನ ರಾಣಿಯರನ್ನೆ ಅಲ್ಲದೆ ಮಂತ್ರಿ, ಸೈನ್ಯಾಧಿಕಾರಿಗಳು, ದಂಡ ನಾಯಕರು ಎಲ್ಲರನ್ನೂ ಕರೆದೊಯ್ಯುತ್ತಿದ್ದನಂತೆ ಒಟ್ಟಿನಲ್ಲಿ ತಿರುಮಲೆ ದೇವರಿಗೆ ಅಪಾರವಾದ ಕಾಣಿಕೆಗಳನ್ನು, ಗ್ರಾಮ ಗಳನ್ನು ದತ್ತಿಯಾಗಿ ಕೊಟ್ಟ ವೆಂಕಟೇಶ್ವರನ ಪರಮಭಕ್ತ ಕೃಷ್ಣ ದೇವರಾಯ, ನಮ್ಮ ಕನ್ನಡದ ಹೆಮ್ಮೆಯ ದೊರೆ.

# ಕರುನಾಡ ನವಶಕ್ತಿ ಮಾತೆಯ ಪೀಠಗಳು

ಡಾ॥ ಡಿ. ಮುರಳೀಧರ

91104 37735

ನಮ್ಮ ಕರ್ನಾಟಕವು ಇಂದಲ್ಲ ನೂರಾರು ವರ್ಷಗಳ ಹಿಂದೆಯೇ ಬಹಳ ಮಹಾತ್ಮವಾದ ಚರಿತ್ರೆಯನ್ನು ಹೊಂದಿರುವ ನಾಡಗಿದೆ. ಇಂತಹ ನಾಡಿನಲ್ಲಿ ಅನೇಕ ರೀತಿಯ ಪ್ರಾದೇಶಿಕ ಮಹಾತ್ಮವನ್ನು ಹೊಂದಿರುವ ಅನೇಕ ದೇವರುಗಳು ನಾವು ನೋಡಬಹುದು ಅದರಲ್ಲಿ ಸ್ತ್ರೀ ದೇವತೆಗಳಿಗೆ ವಿಶೇಷವಾದ ಹೆಸರುವಾಸಿಯಾದ, ಶಕ್ತಿ ದೇವತೆಗಳಾಗಿ ನಾವು ಅವರನ್ನು ಪೂಜಿಸುವ ಪ್ರತೀತಿಯನ್ನು ರೂಢಿಸಿಕೊಂಡು ಬಂದಿರುತ್ತೇವೆ. ಈ ದೇವತೆಗಳು ನಮ್ಮ ನಾಡನ್ನು, ಗ್ರಾಮವನ್ನು, ನಮ್ಮ ಊರುಗಳನ್ನು ರಕ್ಷಣೆ ಮಾಡುತ್ತೇವೆ ಎಂಬ ಬಲವಾದ ನಂಬಿಗೆ ಹಿಂದಿನಿಂದಲೂ ನಮ್ಮಲ್ಲಿ ರೂಢಿಸಿಕೊಂಡು ಬಂದಿರುತ್ತೇವೆ.

ಏಕೆಂದರೆ ದಕ್ಷಿಣ ಭಾರತದವರಾದ ನಾವು ಮೂಲತಃ ಮಾತೃ ಪ್ರಧಾನ ಕುಟುಂಬ ಹೆಚ್ಚಾಗಿ ನಂಬಿಕೆಯನ್ನು ಹೊಂದಿರುವಂತಹವರು ಇಲ್ಲಿ ನಾವು ತಾಯಿ, ತಂಗಿ, ಮಡದಿಗೆ, ಒಂದು ರೀತಿಯ ವಿಶೇಷ ಗೌರವ ನೀಡುತ್ತ ಅವರನ್ನು ದೇವತೆಯಾಗಿ ಕಾಣುತ್ತವೆ ಅದಕ್ಕೆ ನಮ್ಮಲ್ಲಿ ಗ್ರಾಮವನ್ನು ಕಾಪಾಡಲು ಗ್ರಾಮ ದೇವತೆಗಳನ್ನು ನಮ್ಮ ಕರ್ನಾಟಕದ ಪ್ರತಿಯೊಂದು ಊರಿನಲ್ಲೂ ನಾವು ಇಂದಿಗೂ ಸಹ ನೋಡಬಹುದು. ಇಂತಹ ಚರಿತ್ರೆಯ ನಾಡಿನಲ್ಲಿ ಪ್ರಸಿದ್ಧ ಮತ್ತು ಬಹಳ ಶಕ್ತಿಶಾಲಿಯಾದ ಮತ್ತು ತಪೋಶಕ್ತಿ ಹೊಂದಿದ ಮಹಾತ್ಮರು ಸ್ಥಾಪಿಸಿದ ಪ್ರಸಿದ್ಧ ಮತ್ತು ಹೆಸರು ವಾಸಿಯಾದ ಒಂಬತ್ತು ಶಕ್ತಿ ಪೀಠಗಳನ್ನು ನಾನಿಂದು ಈ ಕಿರು ಲೇಖನದಲ್ಲಿ ಪರಿಚಯ ಮಾಡುವ ಒಂದು ಸಣ್ಣ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಅವುಗಳಲ್ಲಿ ಮೊದಲನೆಯದಾಗಿ ಗಮನಿಸಬೇಕಾದ ಶಕ್ತಿ ಪೀಠದ ದೇವಿಯ ದೇವಾಲಯವೆಂದರೆ :-

### 1. ಶೃಂಗೇರಿ ಶಾರದ ದೇವಿ :

ಇಂದು ಚಿಕ್ಕಮಂಗಳೂರು ಜಿಲ್ಲೆಯಲ್ಲಿರುವ ಶೃಂಗೇರಿ ಪಟ್ಟಣದಲ್ಲಿರುವ ಶಾರದ ದೇವಿಯ ದೇವಸ್ಥಾನ. ಇದು ಕರ್ನಾಟಕದಲ್ಲಿಯೇ ಇರುವ ಪೀಠದಲ್ಲಿ ತುಂಬ ಹಳೆಯದು ಮತ್ತು ಪ್ರಮುಖವಾದುದು. ಇದು ಅದ್ವೈತ ತತ್ವ ಶಾಸ್ತ್ರದ ಸಂಸ್ಥಾಪಕರಾದ ಶ್ರೀಆದಿ ಗುರು ಶಂಕರಾಚಾರ್ಯರು ಸ್ಥಾಪಿಸಿದರೆಂದು ಪರಿಗಣಿಸಲಾಗಿದೆ.

ಈ ಪೀಠವನ್ನು ಇಲ್ಲಿಯೇ ಸ್ಥಾಪಿಸುವುದಕ್ಕೆ ಒಂದು ಪ್ರತೀತಿಯ ಕಥೆಯು ಸಹ ಇದೆ. ಒಮ್ಮೆ ಶಂಕರಾಚಾರ್ಯರು ತುಂಗಾನದಿಯ ದಡದಲ್ಲಿ ಸಂಚರಿಸುವಾಗ ಅಲ್ಲಿ ಒಂದು ಹಾವು ಬಿಸಿಲಿನಲ್ಲಿರುವ ಕಪ್ಪೆಗೆ ತನ್ನ ಎಡೆಯಿಂದ ನೆರಳನ್ನು ನೀಡುವುದನ್ನು ಗಮನಿಸಿ ಈ ಪ್ರದೇಶದಲ್ಲಿ ಯಾವುದೋ ಒಂದು ವಿಶೇಷ ಶಕ್ತಿ ಇದೆ, ಎಂದು ತಿಳಿದು ಅಲ್ಲಿ ಶಾರದಾದೇವಿಯನ್ನು ಪ್ರತಿಷ್ಠಾಪಿಸಿದರು ಎಂಬ ಒಂದು ಕಥೆಯನ್ನು ಹೇಳುತ್ತಾರೆ. ಅಷ್ಟೆ ಅಲ್ಲ ಇಂದು ಸಹ ಇಲ್ಲಿ ತಮ್ಮ ಮಕ್ಕಳಿಗೆ ಮೊದಲ ಅಕ್ಷರಾಭ್ಯಾಸ ಮಾಡಿಸಿದರೆ ಅವರು ಜೀವನದಲ್ಲಿ ಒಳ್ಳೆಯ ವಿದ್ಯಾವಂತರಾಗುತ್ತಾರೆ ಎಂಬ ನಂಬಿಕೆಯು ಸಹ ಇದೆ. ಅದಕ್ಕೆ ದೇಶದ



ಅನೇಕ ಕಡೆಗಳಿಂದ ತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲೂ ಬರುತ್ತಾರೆ.

### 2. ಕೊಲ್ಲೂರು ಮೂಕಾಂಬಿಕಾ ದೇವಿ:

ಈ ದೇವಸ್ಥಾನವು ಉಡುಪಿ ಜಿಲ್ಲೆಯ ಕೊಲ್ಲೂರು ಪಟ್ಟಣದಲ್ಲಿದೆ. ಇಲ್ಲಿಗೆ ಕರ್ನಾಟಕ ಮತ್ತು ಕೇರಳ ರಾಜ್ಯಗಳ ಜನರಿಗೆ ಸಂಬಂಧಿಸಿದಂತಿರುವ ಅತ್ಯಂತ ಪ್ರಸಿದ್ಧ ಪೂಜಾ ಸ್ಥಳಗಳ



ಪೈಕಿ ಒಂದೆನಿಸಿದೆ ಸೌಪರ್ಣಿಕಾ ನದಿಯ ದಂಡೆಯ ಮೇಲಿನ ಕೊಡಚಾದ್ರಿ ಬೆಟ್ಟದ ಮೇಲೆ ಹಿಂದೂ ಸಂತ ಆದಿ ಶಂಕರರೊಂದಿಗೆ ಸಂಬಂಧ ಹೊಂದಿರುವ ಈ ದೇವಸ್ಥಾನವನ್ನು ಸು. 1200 ವರ್ಷದ ಹಿಂದೆಯೇ ಈ ದೇವಿಯ ವಿಗ್ರಹವನ್ನು ಇಲ್ಲಿ ಸ್ಥಾಪಿಸಿದರು ಎಂಬ ನಂಬಿಕೆ ಇದೆ. ಮೂಕಾಂಬಿಕೆಯು ಸರಸ್ವತಿ, ಮತ್ತು ಮಹಾಲಕ್ಷ್ಮಿಯ ಅವತಾರ ಎಂಬುದಾಗಿ ಪರಿಗಣಿಸಲ್ಪಟ್ಟಿರುವುದರಿಂದ ಅನೇಕ ಜನರು ಅತೀತವಾದ ನಂಬಿಕೆಯನ್ನು ಹೊಂದಿದ್ದಾರೆ. ಒಂಬತ್ತು ಶಕ್ತಿ ಪೀಠದಲ್ಲಿ ಇದು ಸಹ ಒಂದು ಎನಿಸಿದೆ.



### 3. ಮೈಸೂರು ಚಾಮುಂಡೇಶ್ವರಿ ದೇವಿ :

ಈ ದೇವಿಯು ಮೈಸೂರಿನ ಬೆಟ್ಟದ ಮೇಲೆ ನೆಲಸಿದ್ದಾಳೆ.ಇವಳನ್ನು ನಾಡದೇವಿ ಎಂದು, ಮೈಸೂರು ಮಹಾರಾಜರ ಕುಲ ದೇವಿ ಯೆಂದು, ದಸರಾದಲ್ಲಿ ಈ ದೇವಿಗೆ ಅಂಬಾರಿ ಉತ್ಸವವನ್ನು ಮಾಡುತ್ತಾರೆ ಅಷ್ಟೇ ಅಲ್ಲದೆ ಈ ನಾಡ ದೇವಿಗೆ ಚಿನ್ನದಿಂದ ಉತ್ಸವ ಮೂರ್ತಿ ಯನ್ನು ಮಾಡಿರುವುದನ್ನು ನಾವು ಗಮನಿಸ ಬಹುದು. ಮಹಿಷಾಸುರ ಎಂಬ ರಾಕ್ಷಸನನ್ನು ಕೊಲ್ಲಲ್ಲೂ ಈ ದೇವಿ ಅವತರಿಸಿದಳು ಎಂಬ ನಂಬಿಕೆ ಇದೆ. ಆಷಾಢದಲ್ಲಿ ಈ ದೇವಿ ದರ್ಶನ ಪಡೆದರೆ ಅವರ ಬೇಡಿಕೆಗಳು ಈಡೇ ರಿತು ಎಂಬ ನಂಬಿಕೆ ಇದೆ. ಇದು ಸಹ ನಮ್ಮ ಕರು ನಾಡ ಶಕ್ತಿ ಪೀಠಗಳಲ್ಲಿ ಪ್ರಸಿದ್ಧವಾಗಿದೆ.

### 4. ಸವದತ್ತಿ ಎಲ್ಲಮ್ಮದೇವಿ :

ಬೆಳಗಾವಿ ಜಿಲ್ಲೆಯ ಸವದತ್ತಿ ಪಟ್ಟಣ ದಲ್ಲಿ ಇದೆ. ಈ ಪವಿತ್ರ ತಾಣದಲ್ಲಿ ಜಮದಗ್ನಿ ಮತ್ತು ಮಗ ಪರಶುರಾಮನ ದೇವಾಲಯ ವಿದೆ. ತಾಯಿ ರೇಣುಕಾದೇವಿಯು ಪ್ರತಿನಿತ್ಯ ಯಜ್ಞಕ್ಕೆ ನೀರು ತರಲು ಹೊಳೆಗೆ ಹೋಗುತ್ತಿದ್ದ ರೇಣುಕಾದೇವಿ ಮರಳಲ್ಲಿ ಮಡಿಕೆ ಮಾಡಿ ಹಾವನ್ನೇ ಸಿಂಬೆಯಾಗಿಟ್ಟುಕೊಂಡು ನೀರು ತರುತ್ತಿದ್ದಳಂತೆ, ಆದರೆ ಒಂದು ದಿನ ತಾನು ನೀರು ತರುವುದಕ್ಕೆ ಹೋಗಿದ್ದಾಗ ಆಕಾಶ ಮಾರ್ಗದಲ್ಲಿ ಯಕ್ಷರ ಸರಸಬಿಂಬ ನೀರಿನಲ್ಲಿ ಕಾಣಿಸಿತಂತೆ ಇದನ್ನು ಆಕೆ ಕಂಡು ಮೋಹ ಪರವಶಳಾದಳಂತೆ ಇದಕ್ಕೆ ಆ ಮಡಿಕೆ ನೀರಿಲ್ಲಿ ಕರಗಿ ಹೋಯಿತು. ಇದೆಲ್ಲವನ್ನು ತನ್ನ ದಿವ್ಯ ದೃಷ್ಟಿಯಿಂದ ನೋಡಿದ ಜಮದಗ್ನಿ ತನ್ನ ಪತ್ನಿಗೆ ಶಾಪ ನೀಡಿದ ಎಂಬ ಕಥೆ ಇದೆ. ಒಟ್ಟಿನಲ್ಲಿ ಇದು ಸಹ ಕರ್ನಾಟಕದ ಶಕ್ತಿ ಪೀಠದಲ್ಲಿ ಒಂದಾಗಿದೆ.

### 5. ಸಿಗಂಧೂರು ಚೌಡೇಶ್ವರಿ ದೇವಿ:

ಶಿವಮೊಗ್ಗದ ಸಿಗಂಧೂರು ಕಳಸವಳ್ಳಿ ಯಲ್ಲಿದೆ. ಸುಮಾರು 300 ವರ್ಷಗಳ ಹಿಂದೆ ಪವಿತ್ರ ಶರಾವತಿ ನದಿಯ ದಡದಲ್ಲಿ ದೇವಿಯ ವಿಗ್ರಹ ಕಂಡು ಬಂದಿದೆ ಎಂದು ಹೇಳಲಾಗು ತ್ತದೆ. ಈ ದೇವಿಯ ಇನ್ನೊಂದು ಕುತೂಹಲಕಾರಿ ಸಂಗತಿಯೆಂದರೆ 18 ನೇ ಶತಮಾನದಲ್ಲಿ ಮಡೆ ನೂರು ಎಂಬ ಗ್ರಾಮ, ಅದರಲ್ಲಿ ಈ ಶೇಷಪ್ಪ ನಾಯಕ ಕುಟುಂಬ ಸಹವಾಸವಿದ್ದರು. ಒಂದು ದಿನ ಶೇಷಪ್ಪ ಕಾಡಿಗೆ ಒಂಟಿಯಾಗಿ ಬೇಟೆ ಯಾಡಲು ಹೊರಟು ಹೋದನು. ಆಗ ಅವನು ಬಂದ ದಾರಿಯನ್ನು ಮರೆತು ಬಿಟ್ಟನು.ಆ ಸಂಜೆಯ ಸಮಯದಲ್ಲಿ ಇದಕ್ಕಿದ್ದಂತೆ ಕಂಡ ಪ್ರಖರವಾದ ಬೆಳಕನ್ನು ನೋಡಿ "ಕಾಪಾಡು ಚೌಡಮ್ಮ" ಎಂದು ಕೂಗಿದನಂತೆ ಆಗ ಒಂದು ಧ್ವನಿ ಪ್ರತಿಧ್ವನಿಸಿ "ಚಿಂತಿಸಬೇಡ ಮಗು ನಾನು ಜಗತ್ತನ್ನು ಅಶೀರ್ವದಿಸಲು ಇಲ್ಲಿಯೇ ಇರುತ್ತೇನೆ ನನಗೆ ಇಲ್ಲಿ ಗುಡಿಯನ್ನು ನಿರ್ಮಿಸಿ, ನನ್ನನ್ನು ಚೌಡಮ್ಮ "ಎಂದು ಪೂಜಿಸಬೇಕು ಎಂದು ಹೇಳಿದಳಂತೆ ಅಂದಿನಿಂದ ಇಲ್ಲಿಗೆ ಅನೇಕ ಜನರು ತಾಯಿ ಆಶೀರ್ವಾದ ಪಡೆಯಲು ಬರುತ್ತಾರೆ ಇದು ಸಹ ಕರುನಾಡ ಒಂದು ಪ್ರಮುಖ ಶಕ್ತಿ ಪೀಠವಾಗಿದೆ ಇಂದು.

### 6.ಹೊರನಾಡು ಅನ್ನಪೂರ್ಣೇಶ್ವರಿದೇವಿ :

ಚಿಕ್ಕಮಂಗಳೂರು ಜಿಲ್ಲೆಯ ಹೊರ ನಾಡಿನಲ್ಲಿದೆ. ಭದ್ರ ನದಿಯ ದಡದಲ್ಲಿರುವ ಆದಿಶಕ್ತಿಯಾಗಿ ಶ್ರೀ ಅನ್ನಪೂರ್ಣೇಶ್ವರಿ ದೇವಿ ದೇವಸ್ಥಾನ 8 ನೇ ಶತಮಾನದಲ್ಲಿ ಅಗಸ್ತ್ಯ ಋಷಿ ಸ್ಥಾಪಿಸಿದರು ಎನ್ನುವ ನಂಬಿಕೆಯಿದೆ. ಈ ದೇವಿಗೆ ಸಂಬಂಧಿಸಿದ ದಂತ ಕಥೆಯನ್ನು ನೋಡುವು



ದಾದರೆ ಒಮ್ಮೆ ಶಿವ ಮತ್ತು ಪಾರ್ವತಿಯರು ವಾದ ವಿವಾದಕ್ಕೆ ತಿರುಗಿ ಶಿವನು ಜಗತ್ತಿನಲ್ಲಿ ರುವ ಎಲ್ಲವೂ ಭ್ರಮೆ ಎಂದು ಘೋಷಿಸುತ್ತಾನೆ. ಆಗ ಅವನ ಮಾತುಗಳನ್ನು ಅಲ್ಲಗಳೆಯಲು ಪಾರ್ವತಿಯು ಕಣ್ಮರೆಯಾಗುತ್ತಾಳೆ ಮತ್ತು ಪ್ರಕೃತಿಯನ್ನು ನಿಶ್ಚಲಗೊಳಿಸುತ್ತಾಳೆ. ಈ ಕಾರಣ ದಿಂದ ಬರವು ಪ್ರಪಂಚವನ್ನು ಆವರಿಸುತ್ತದೆ ಮತ್ತು ಸುತ್ತಲ ಜನ ಜೀವನವು ಅಸ್ತವ್ಯಸ್ತಗೊ ಳುತ್ತದೆ. ನಂತರ ಋಷಿಗಳು ದೇವಿ ಯನ್ನು ಕರು ಣೆಗಾಗಿ ಪ್ರಾರ್ಥಿಸಿದಾಗ ಶಿವನು ಪಾರ್ವತಿಯ ಹತ್ತಿರ ತನ್ನ ತಪ್ಪು ತಿಳಿಯಿತು ಎಂದು ಹೇಳಿ ಆಕೆಯ ಮನವೊಲಿಸಿದ ಬಳಿಕ ಪಾರ್ವತಿ ದೇವಿ





ಬಂದು ಎಲ್ಲರಿಗೂ ಆಹಾರವನ್ನು ನೀಡಿದಳು. ಅಂದಿನಿಂದ ಈ ದೇವಿಯನ್ನು ಶ್ರೀಅನ್ನಪೂರ್ಣೇಶ್ವರಿ ಎಂದು ಪೂಜಿಸಲಾಗುತ್ತದೆ. ಇದು ಸಹ ನಮ್ಮ ನಾಡಿನ ಶಕ್ತಿ ಪೀಠದಲ್ಲಿ ಒಂದಾಗಿದೆ.

### 7.ಕಟೀಲು ದುರ್ಗಾಪರಮೇಶ್ವರಿದೇವಿ :

ದಕ್ಷಿಣ ಕನ್ನಡ ಜಿಲ್ಲೆಯ ನಂದಿನಿ ನದಿಯ ತಟದಲ್ಲಿರುವ ಕಟೀಲು ಶ್ರೀ ದುರ್ಗಾ ಪರಮೇಶ್ವರೀದೇವಿ ದೇವಾಲಯವು ಇದೆ. ಈ ದೇವಿಗೆ ಕುರಿತ ಒಂದು ಪೌರಾಣಿಕ ಕಥೆಯೇ ಇದೆ. ಶಂಭ ಮತ್ತು ನಿಶುಂಭರೆಂಬ ಇಬ್ಬರು ರಾಕ್ಷಸರನ್ನು ದುರ್ಗಾದೇವಿ ಸಂಹರಿಸಿದ ನಂತರ ಅವರ ಮಂತ್ರಿಗಳಲ್ಲಿ ಒಬ್ಬನಾದ ಅರುಣಾಸುರನು,ಯುದ್ಧ ಭೂಮಿಯಿಂದ ಓಡಿ ಹೋಗಿ ನಂತರ ಅವನೇ ರಾಕ್ಷಸರಿಗೆ ನಾಯಕನಾಗಿ ಋಷಿಮುನಿಗಳಿಗೆ ತಪಸ್ಸಿಗೆ ತೊಂದರೆ ನೀಡುತ್ತಾನೆ. ಆಗ ಮುನಿಗಳ ತಪಸ್ಸು ಮಾಡಿ ದೇವತೆಯನ್ನು ಬೇಡಿಕೊಂಡಾಗ ಮಳೆಯನ್ನು ಭೂಮಿಗೆ ಭಾರದಂತೆ ತಡೆದಳೆಂದು ಇದರಿಂದ ಭೀಕರ ಬರಗಾಲ ಬಂದು ಎಲ್ಲರಿಗೂ ಕಷ್ಟವಾಯಿತು. ಆಗ ಜಾಬಾಲಿ ಮಹರ್ಷಿ ಒಂದು ಯಜ್ಞವನ್ನು ಮಾಡಿದಾಗ ಇಂದ್ರನು ಕಾಮಧೇನುವನ್ನು ಕಳಿಸಿದನು. ಆಗ ಅದರ ಜೊತೆ ನಂದಿನಿಯನ್ನು ಇಂದ್ರ ಕಳಿಸಿದ. ಅವಳು ಭೂಲೋಕಕ್ಕೆ ಬರಲು ಒಪ್ಪುವುದಿಲ್ಲ. ಕೋಪಿತನಾದ ಜಾಬಾಲಿ ಮಹರ್ಷಿ ನದಿಯಾಗಿ ಹರಿಯುವಂತೆ ಶಾಪ ನೀಡಿದನಂತೆ. ಈ ಶಾಪ ವಿಮೋಚನೆಗೆ ನಂದಿನಿ ಆದಿ ಶಕ್ತಿಯನ್ನು ಪ್ರಾರ್ಥಿಸಿದಾಗ ದುರ್ಗಾದೇವಿ ಪ್ರತ್ಯಕ್ಷಳಾಗಿ ನೀನು ನದಿಯಾಗಿ ಹರಿ ಎಂದು ಅದರ ಮಧ್ಯದಲ್ಲಿ ಲಿಂಗ ರೂಪದಲ್ಲಿ ದುರ್ಗಾಪರಮೇಶ್ವರಿ ಜನಿಸಿ ನಂದಿನಿಗೆ ಶಾಪ ವಿಮೋಚನೆ ನೀಡಿದಳೆಂದು ನಂದಿನಿ ನದಿಯ ಕಟಿ (ನಡು) ಭಾಗದಲ್ಲಿ ಜನಿಸಿದ್ದರಿಂದ ಈ ಕ್ಷೇತ್ರಕ್ಕೆ ಕಟೀಲು ದುರ್ಗಾಪರಮೇಶ್ವರಿ ಎಂಬ ಹೆಸರು ಬಂದಿದೆ ಎಂಬ ಕಥೆ ಇದೆ. ಇದು ಸಹ ನಾಡಿನ ಒಂದು ಶಕ್ತಿ ಪೀಠವಾಗಿದೆ.



### 8. ಬಾದಾಮಿ ಬನಶಂಕರಿ ದೇವಿ :

ಇದು ಬಾಗಲಕೋಟೆಯ ಹತ್ತಿರದ ಬಾದಾಮಿ ಗ್ರಾಮದಲ್ಲಿ ಇದೆ. ಇದು ಮಲಪ್ರಭಾ ನದಿ ದಡದಲ್ಲಿರುವ ಚೋಳಗುಡ್ಡ ಎಂಬ ಸಣ್ಣ ಹಳ್ಳಿಯಲ್ಲಿ ಇದೆ. ಈ ದೇವಿಯು ಚಾಲುಕ್ಯರ ಮನೆ ದೇವತೆಯು ಸಹ ಹೌದು. ಬನಶಂಕರಿ ದೇವಿಯು ಪಾರ್ವತಿ ದೇವಿಯ ಅವತಾರವೆಂದು ಈ ದೇವಿಯನ್ನು ಶಾಕಾಂಭರಿ ಅಥವಾ ವನಶಂಕರಿ ಎಂದು ಸಹ ಕರೆಯುತ್ತಾರೆ. ಈ ದೇವ



ಸ್ಥಾನವು ನಾಡಿನ ಪ್ರಸಿದ್ಧ ಹಿಂದೂ ಗುಡಿಯಲ್ಲಿ ಒಂದಾಗಿದೆ. ಈ ಶಾಕಾಂಭರಿಶಕ್ತಿ ಪೀಠವು ಕೇರಳದ ಗುಡಿಗಳನ್ನು ನೆನಪಿಸುತ್ತದೆ. ಒಟ್ಟಿನಲ್ಲಿ ಇದು ಸಹ ನಮ್ಮ ಕರ್ನಾಟಕದ ಶಕ್ತಿ ಪೀಠದಲ್ಲಿ ಒಂದಾಗಿದೆ.



### 9. ಶಿರಸಿ ಮಾರಿಕಾಂಭಾದೇವಿ:

ಇದು ಉತ್ತರ ಕರ್ನಾಟಕ ಜಿಲ್ಲೆಯ ಸಿರ್ಸಿ ಪಟ್ಟಣದಲ್ಲಿ ಇದೆ. ಈ ಮಾರಿಕಾಂಭ ದೇವಸ್ಥಾನವು ಬೆಟ್ಟ, ಕಾಡಿನಿಂದ ಮತ್ತು ಜಲಪಾತಗಳಿಂದ ಸುತ್ತುವರೆದ ಸುಂದರ ಸ್ಥಳದಲ್ಲಿ ಇದೆ. ಈ ದೇವಾಲಯಕ್ಕೆ ಒಂದು ಇತಿಹಾಸವು ಸಹ ಇರುವುದನ್ನು ನಾವು ನೋಡಬಹುದು. ಹಾನಗಲ್ಲಿನಲ್ಲಿ ಜಾತ್ರೆ ಮುಗಿದ ನಂತರ ಆಭರಣಗಳ ಸಮೇತರಾಗಿ ದೇವಿಯನ್ನು ಒಂದು ಪೆಟ್ಟಿಗೆ ಯಲ್ಲಿ ಹಾಕಿ ಇಟ್ಟಿದರು. ಅದನ್ನು ಕೆಲವು ಕಳ್ಳರು ಅಪಹರಿಸಿ ಸಿರ್ಸಿಗೆ ತಂದು ಒಡವೆಗಳನ್ನು ಹಂಚಿಕೊಂಡು ವಿಗ್ರಹವನ್ನು ಪೆಟ್ಟಿಗೆಯಲ್ಲಿ ಇಟ್ಟು ಕೆರೆಗೆ ಎಸೆದರು.ಆ ಕೆರೆಯನ್ನು "ದೇವಿಕೆರೆ" ಎಂದು ಕರೆಯುತ್ತಾರೆ.

ಸ್ವಲ್ಪ ದಿನಗಳ ನಂತರ ಭಕ್ತನೊಬ್ಬ ಪ್ರತಿ ವರ್ಷ ಚಂದ್ರಗುತ್ತಿಯ ಜಾತ್ರೆಗೆ ಹೋಗುತ್ತಿದ್ದ ಅದರೆ ಒಂದು ಬಾರಿ ಜನರು ಅವನನ್ನು ಹೋಗದಂತೆ ತಡೆದರು ಅದರಿಂದ ಬೇಸರಗೊಂಡ ಭಕ್ತ ಮುಂದಿನ ವರ್ಷ ಜಾತ್ರೆಗೆ ಹೋಗದೆ ಸಿರ್ಸಿಯಲ್ಲಿ ದೇವಿಯ ಪೂಜೆ ಮಾಡುವಾಗ ಆ ರಾತ್ರಿ ದೇವಿ ಅವನಿಗೆ ಕಾಣಿಸಿಕೊಂಡು ನಾನು ದ್ಯಾಮವ್ವ ನಾನು ಊರಿನ ಕೆರೆಯಲ್ಲಿದ್ದೇನೆ. ನನ್ನನ್ನು ಮೇಲೆತ್ತು ಎಂದು ಹೇಳಿದಂತೆ ಕನಸು ಬಿತ್ತು. ಅವನು ಆ ಊರಿನ ಪ್ರಮುಖರಿಗೆ ತಿಳಿಸಿ ಅದರಂತೆ ಕೆರೆಯಿಂದ ವಿಗ್ರಹವಿರುವ ಪೆಟ್ಟಿಗೆ ತೆಗೆದು ಅಲ್ಲಿಯ ರಾಜನಾದ ಸೋಂದಾ ಸಂಸ್ಥಾನದ ರಾಜರ ಅನುಮತಿ ಪಡೆದು ಕ್ರಿ.ಶ. 1689 ರಲ್ಲಿ ಈ ಮಾರಿಕಾಂಬಾ ದೇವಿಯ ಗುಡಿಯನ್ನು ಪ್ರತಿಷ್ಠಾಪಿಸಿ ನಿರ್ಮಿಸಲಾಗಿತ್ತು. ಇದು ಸಹ ಕರ್ನಾಟಕದ 9 ಶಕ್ತಿ ಪೀಠದಲ್ಲಿ ಒಂದಾಗಿದೆ ಇಂದು.

ನಾನು ಗಮನಿಸಿದಂತೆ ಇವು 9 ಪ್ರಸಿದ್ಧ ಕರ್ನಾಟಕದ ನವಶಕ್ತಿ ಪೀಠಗಳು. ನೀವು ಎಂದಾದರೂ ಅಧ್ಯಾತ್ಮಿಕ ಅನುಭವವನ್ನು ಹೊಂದಲು ಈ ಶಕ್ತಿ ಪೀಠಗಳಿಗೆ ಭೇಟಿ ನೀಡಿ ಅಲ್ಲಿಯ ನಂಬಿಕೆ, ನಾಡಿನ ಸೌಂದರ್ಯ, ಪರಿಸರದ ಆನಂದದ ಅನುಭವವನ್ನು ಪಡೆಯಬಹುದು.

# ನವರಾತ್ರಿಯಲ್ಲಿ ಶ್ರೀನಿವಾಸನ ದರ್ಶನ

- ಡಾ|| ಸುಮನ ಬದರೀನಾಥ್
94820 94855

ದ್ವೈತ ಸಿದ್ಧಾಂತದ ಸುವರ್ಣ ನಾಣ್ಯಕ್ಕೆ ಎರಡು ಮುಖಗಳು. ವ್ಯಾಸ ಸಾಹಿತ್ಯ ಹಾಗೂ ದಾಸಸಾಹಿತ್ಯ. ಎರಡೂ ಬದಿಗಳಲ್ಲೂ ಬೆಳಗುತ್ತಿರುವ ದಿವ್ಯರೂಪ ಶ್ರೀಮನ್ನಾರಾಯಣನದೇ.ಶ್ರೀಹರಿಯು ಅನಂತ ರೂಪಗಳುಳ್ಳವನೂ, ಅನಂತಗುಣ ಪರಿಪೂರ್ಣನೂ, ಅನಂತಾನಂತ ಮಹಿಮೆಯುಳ್ಳವನಾದರೂ ಅವನ ರಾಮಕೃಷ್ಣಾದಿ ದಶಾವತಾರಗಳ ಹಾಗೂ ಶ್ರೀನಿವಾಸರೂಪದ ವರ್ಣನೆ ದಾಸ ಸಾಹಿತ್ಯದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಕೋಟ್ಯಾಂತರ ಭಕ್ತರ ಕುಲದೈವ, ಕಲಿಯುಗದ ಹೆದ್ದೈವ, ಹರಿ ದಾಸರ ಅಚ್ಚುಮೆಚ್ಚಿನ, ಅಭಿಮಾನದ ಆರಾಧ್ಯದೈವ ತಿರುಮಲೆಯ ಶ್ರೀನಿವಾಸ. ಹರಿದಾಸರಿಗೆ ಅವನ ದಿವ್ಯ ಮಂಗಳ ವಿಗ್ರಹವನ್ನು ಕಂಡು ಕಣ್ಣು ತಣಿಯದು. ಅವನ ಮಹಿಮೆಯನ್ನು ಅವನು ನೆಲಸಿದ ವೆಂಕಟಾದ್ರಿಯ ಮಹಾತ್ಮೆಯನ್ನು ಹೊಗಳಿ ಹಾಡಿ ಹೃದಯ ತಣಿಯದು. ಆನಂದ ಮಯನಾದ, ಆನಂದಾ ಎನಿಸಿದ ಲಕ್ಷ್ಮೀದೇವಿಗೆ ಒಡೆಯನಾದ ಸಕಲ ದೇವತೆಗಳ ಆನಂದಕ್ಕೆ ಆಶ್ರಯನಾದ, ಭಕ್ತರನ್ನು ಆನಂದಮಯರನ್ನಾಗಿ ಮಾಡುವ, ಶ್ರೀನಿವಾಸ ತಿರುಮಲೆಯಲ್ಲಿ 'ಆನಂದನಿಲಯ'ವೆಂಬ ಹೊನ್ನ ಮಂದಿರದಲ್ಲಿ ನೆಲಸಿದ್ದಾನೆ. ''ಕಲೌವೆಂಕಟನಾಯಕಃ'' ಎಂದು ಪ್ರಸಿದ್ಧವಾಗಿರುವಂತೆ ಕಲಿಯುಗದಲ್ಲಿ ಶ್ರೀಮನ್ನಾರಾಯಣನ ವಿಭೂತಿ ರೂಪವು ಸಾಕ್ಷಾತ್ ಭೂವೈಕುಂಠವೆನಿಸಿದ ವೆಂಕಟಾಚಲಕ್ಕೆ ಒಡೆಯನಾದ ಶ್ರೀನಿವಾಸನ ರೂಪವೆಂದು ಶಾಸ್ತ್ರಪ್ರಖ್ಯಾತವಾಗಿದೆ.



ಶ್ರೀನಿವಾಸನನ್ನು ಸ್ತುತಿಸಿದ ಹರಿದಾಸರೇ ಇಲ್ಲವೆನ್ನಬಹುದು. ಕೃಷ್ಣ ರೂಪದ ನಂತರ ಇದರದೇ ಎರಡನೆಯ ಸ್ಥಾನ. ವಾದಿರಾಜರು, ಪುರಂದರ ದಾಸರು, ವಿಜಯದಾಸರು, ಪ್ರಸನ್ನವೆಂಕಟದಾಸರೇ ಮೊದಲಾಗಿ ಹರಿದಾಸರೆಲ್ಲರೂ ಭಕ್ತಿ ಪರಿಮಳಿತವಾದ ಸುವರ್ಣರಂಜಿತವಾದ, ಸೌಂದರ್ಯಮಾಧುರ್ಯ ಮಧುಭರಿತವಾದ ಕೃತಿ ಕುಸುಮಗಳಿಂದ ಶ್ರೀನಿವಾಸನ ಅಡಿದಾವರೆಗಳಲ್ಲಿ ಲಕ್ಷಾರ್ಚನೆಗೈದಿದ್ದಾರೆ.

ದಾಸರೆಂದರೆ ಪುರಂದರದಾಸರಯ್ಯಾ ಎಂದು ಪ್ರಖ್ಯಾತಿ. ''ಪುರಂದರ ಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ'' ಎಂದು ಎಲ್ಲರ ನಮನಗಳನ್ನು ಕೈಗೊಳ್ಳುವ ಪುರಂದರದಾಸರು ಹರಿದಾಸ ಸಂಸ್ಕೃತಿಯ ಮಹೋನ್ನತ ಪ್ರತಿನಿಧಿ. ಶ್ರೀಹರಿಯ ಚರಣಕಮಲಗಳಲ್ಲಿ ತಮ್ಮ ಸರ್ವಸ್ವವನ್ನೂ ಅರ್ಪಿಸಿದ ಮಹಾಭಕ್ತರು.ಶ್ರೀಹರಿಯ ಮೂಲ ರೂಪದಂತೆ ಅವನ ಅವತಾರ ರೂಪಗಳೂ ಅವರಿಗೆ ಅಚ್ಚುಮೆಚ್ಚು ಹಾಗೆಯೇ ಶ್ರೀಮನ್ನಾರಾಯಣ ಭಿನ್ನ ಶ್ರೀನಿವಾಸನನ್ನು ದಿವ್ಯ ಪ್ರೇಮಾನುರಾಗ ರಂಜಿತವಾದ, ಸುನಾದ ಮಧುರವಾದ ಕೃತಿ ಸ್ತುತಿಗಳಿಂದ ಹಾಡಿ ಪೂಜಿಸಿದ್ದಾರೆ.

ಪುರಂದರದಾಸರು ತಮ್ಮ ದಾಸಜೀವನದಲ್ಲಿ ಅಡಿಗಡಿಗೆ ತಿರುಪತಿಗೆ ಯಾತ್ರೆ ಹೋಗುತ್ತಿದ್ದರು. ಅಲ್ಲಿ ನಡೆಯುವ ವಿವಿಧ ಸೇವೆಗಳನ್ನು, ಉತ್ಸವಗಳನ್ನು ಕಂಡು ಪಡಿಮಾಡಿಸಿದ್ದಾರೆ. ಅವುಗಳಲ್ಲಿ ಒಂದೆರಡರ ಕಿರುಕಾಣ್ಕೆ ಈ ಕಿರು ಲೇಖನದಲ್ಲಿದೆ.

ತಿರುಪತಿಯಲ್ಲಿ ಶ್ರೀನಿವಾಸನಿಗೆ ಸಮರ್ಪಿತಗೊಳ್ಳುವ ಉದಯಾಸ್ತಮಾನ ಪರ್ಯಾಂತ ಸೇವೆಗಳಲ್ಲಿ ಸುಪ್ರಭಾತ ಸೇವೆಯೇ ಮೊದಲನೆಯದೂ, ಬಹು ಅರ್ಥಪೂರ್ಣವು ಪ್ರಮುಖವೂ ಆದುದು. ಆಗಿದ್ದು. ಸುಪ್ರ



ಭಾತ ಹಾಡುವಿಕೆ ಪರಮಾತ್ಮನ ಪ್ರಸಾದವನ್ನು ಪಡೆಯಲು ಕೂಡಿದವನೂ, ವೆಂಕಟಗಿರಿಗೊಡೆಯನೂ ಆದ ಶ್ರೀನಿವಾಸನನ್ನೂ ಸ್ವಾಮಿಭಿಮುಖನೂ, ಸುಪ್ರಸನ್ನನೂ ಆಗಿ ಮಾಡಿಕೊಳ್ಳಲು ಪುರಂದರದಾಸರು ಮಂಗಳಕರವಾದ ಉದಯರಾಗಗಳಿಂದ ಮಂಗಳಕರವಾದ ನುಡಿಗಳಿಂದ ಹೀಗೆ ಹಾಡಿ ಸ್ತುತಿಸಿದ್ದಾರೆ.

ಏಳು ನಾರಾಯಣನೆ ಏಳು ಲಕ್ಷ್ಮೀರಮಣ
ಏಳು ಶ್ರೀಗಿರಿಯೊಡೆಯ ವೆಂಕಟೇಶ ಏಳಯ್ಯ ಬೆಳಗಾಯಿತು

ಪುರಂದರದಾಸರು ಗರ್ಭಗುಡಿಯೆದುರು ನಿಂತು ಹೊರಗಣಗಳಿಂದ ಶ್ರೀನಿವಾಸನ ದಿವ್ಯ ಮಂಗಳ ಸುಂದರ ವಿಗ್ರಹವನ್ನು ನೋಡುತ್ತಿರುವಂತೆಯೇ ಒಳಗಣ್ಣುಗಳಿಂದ ಅವನ ಅಪ್ರಾಕೃತ ಚಿನ್ಮಯ ಸ್ವರೂಪವನ್ನು ಕಾಣುತ್ತಾ ಸುಪ್ರಭಾತ ಸೇವೆಯ ಮಂಗಳಗೀತೆಯನ್ನು ಹಾಡಿದ್ದಾರೆ. ನಿನ್ನ ಅನುಗ್ರಹದಿಂದ ಇಂದಿನ ಬೆಳಗು ಒಳಿತಾದ ಬೆಳಕಾಗಲಿ ಇಂದಿನ ದಿನ ಸುದಿನವಾಗಲಿ,ದಿನದಿನವೂ,ಅನು ದಿನವೂ ಸುಪ್ರಭಾತವಾಗಲಿ.ಈ ಬೆಳಗು ಈ ದಿವ್ಯ ದರ್ಶನ ನಿರಂತರವಾಗಿರಲಿ, ಬಾಳಿಗೆ ಬೆಳಕು ನೀಡುವಂತಾಗಲಿ, ಎಂದೆಲ್ಲಾ ಅರ್ಥಗಳನ್ನು ನೀಡುವ ಸುಂದರ ಸುಪ್ರಭಾತ ಗೀತೆಯನ್ನು ಹಾಡಿದ್ದಾರೆ.

ಸ್ವಾಮಿ, ದಾಸರೆಲ್ಲರು ಬಂದು ನಿನ್ನ ಪಾದಧೂಳಿಯಿಂದ ಪವಿತ್ರರಾಗುತ್ತಾ ಧೂಳಿದರ್ಶನಗೊಂಡು, ನಿನ್ನಲ್ಲಿ ತಮ್ಮ ದಾಸತ್ವದ ಪ್ರತೀಕವಾದ ತಾಳದಂಡಿಗೆಯನ್ನು ನುಡಿದು ನಿನ್ನ ಸಿರಿನಾಮಗಳನ್ನು ಸ್ಮರಿಸುತ್ತಾ, ಮಂಗಳಕರವಾದ ಉದಯರಾಗಗಳನ್ನು ಹಾಡುತ್ತಿದ್ದಾರೆ. ಅರಳು ಮಲ್ಲಿಗೆ, ಜಾಜಿ ಮುಂತಾದ ಪರಿಮಳದ ಪುಷ್ಪಗಳನ್ನು ಸುರರು ತಂದು ನಿನ್ನಡಿಗಳಲ್ಲಿ ಅರ್ಪಿಸಲೆಂದು ಕಾದು ನಿಂತಿದ್ದಾರೆ. ಏಕಾಂತ ಸೇವೆಯನ್ನು ಸಲ್ಲಿಸಲು ನಿನ್ನ ರಸಿ ಲಕುಮಿಯು ಶ್ರೀದೇವಿ, ಭೂದೇವಿ,ಸತ್ಯಭಾಮೆ,ಜಾಂಬವತಿ, ತುಳಸೀ ಮುಂತಾದ ಅನೇಕ ರೂಪಗಳನ್ನು ತಾಳಿ ನೀನು ಎಚ್ಚರಗೊಳ್ಳುವುದನ್ನೇ ನಿರೀಕ್ಷಿಸುತ್ತಾ ನಿಂತಿದ್ದಾಳೆ. ದೇವರ್ಷಿನಾರದನು ಶ್ರೇಷ್ಠವಾದ ತಪತಿಗಳಿರುವ ಮಧುರವಾದ ಧ್ವನಿ ಮಾಡುವ ಮಹತೀ ಎಂಬ ತನ್ನ ವೀಣೆಯನ್ನು ನುಡಿಸುತ್ತಾ ನಿನ್ನ ಮಂಗಳ ಚರಿತ್ರೆಯನ್ನು ಮಧುರತಮನಾಗಿ ಹಾಡುತ್ತಿದ್ದಾನೆ. ನಿನ್ನ ದಾಸರೆಲ್ಲರೂ ಮಂಗಳ ಶಾಸನಗೈಯುತ್ತಾ ನಿನ್ನ ಸೇವಾಕಾಂಕ್ಷಿಗಳಾಗಿ ವೈಕುಂಠದ್ವಾರದಲ್ಲಿಯೇ ಎಂಬಂತೆ ಈ ತಿರುಮಲೆಯಲ್ಲಿನ ಆನಂದ ನಿಲಯದ ಸುವರ್ಣ ದ್ವಾರದಲ್ಲಿ ನಿನ್ನ ದರ್ಶನವನ್ನು ನಿರೀಕ್ಷಿಸುತ್ತಾ ಮೈಯೆಲ್ಲಾ ಕಣ್ಣಾಗಿ ನಿಂತಿದ್ದಾರೆ. ನಿನ್ನ ದರ್ಶನದಿಂದ ಎಲ್ಲೆಲ್ಲೂ ನವಚೈತನ್ಯ ಮೂಡಲಿದೆ. ಅಜ್ಞಾನದ ಕತ್ತಲು ಕಳೆದು ಸುಜ್ಞಾನದ ಬೆಳಕಾಗಲಿದೆ. ಕಾವೇರಿ, ಕೃಷ್ಣ, ಗಂಗೆ ಯಮುನೆ, ತುಂಗೆ ಮೊದಲಾದ ನದಿಗಳ ಅಭಿಮಾನಿ ದೇವಿಯರು ತಮ್ಮ ಜಲದಿಂದ ನಿನ್ನ ಪಾದ ತೊಳೆದು ಪೂಜಿಸಿ ಪಾವನೆಯಾಗಬೇಕೆಂದು ಬಯಸಿ ಬಂದಿದ್ದಾರೆ. ಬಿಸಿಲು ಮೈದೋರುತ್ತಿದೆ. ಪರಿ ಪರಿಯ ಕೆಲಸಗಳ (ನಿನ್ನ ಅನಂತಾನಂತ ಮಹಿಮೋಪೇತವಾದ ಲೀಲಾ ವಿಲಾಸಗಳನ್ನು) ಮಾಡಲುದ್ಯುಗೋಸಿದೇ ಮರೆತು ನಿದ್ರೆಯಗೈವರೆ, ತಳವು ಮಾಡದಿರಯ್ಯ ಸ್ವಾಮಿ ತಿರುಮಲೆರಾಯ ಸೆಳೆಮಂಚದಿಂದಲೇಳು ಎಂದು ಸುಪ್ರಭಾತವನ್ನು ಗಾನ ಮಾಡುತ್ತಾ ಪ್ರಾರ್ಥಿಸಿದ್ದಾರೆ.

ಒಮ್ಮೆ ಪುರಂದರದಾಸರು ತಿರುಮಲೆಯಲ್ಲಿ ದೇವರ ದರ್ಶನಕ್ಕೆಂದು ಬರುತ್ತಿರುವಾಗ ಎದುರಿಗೆ ಪಲ್ಲಕ್ಕಿಯಲ್ಲಿ ಅರೂಢನಾಗಿ ಬರುತ್ತಿರುವ ಶ್ರೀನಿವಾಸನ ದರ್ಶನವಾಯಿತು. ಲೌಕಿಕ ಈ ದರ್ಶನ ಪುರಂದರದಾಸರ ಅಲೌಕಿಕ ಪ್ರಜ್ಞೆಯನ್ನು ಎಚ್ಚರಿಸಿ ಆ ದೃಶ್ಯ ಅವರಿಗೆ ದೈವಿಕವಾಗಿ ಕಂಡುಬಂದು ಅವರು ಅದನ್ನು ಹೀಗೆ ಅಮೋಘವಾಗಿ ವರ್ಣಿಸಿದ್ದಾರೆ.

ಧ್ವಜದ ತಿಮ್ಮಪ್ಪ ಪಲ್ಲಕ್ಕಿಯೇರಿ ತನ್ನಯ
ನಿಜಗಿರಿಯಾತ್ರೆಯ ಗೈದಿದ ಹರುಷವ ಕೇಳಿ ॥

ದಿವ್ಯ ಸುಂದರವಾಗಿ ಅಲಂಕೃತವಾದ ಪಲ್ಲಕ್ಕಿಯಲ್ಲಿ ಶ್ರೀನಿವಾಸ ತನ್ನರಸಿಯರೊಡನೆ ವಿರಾಜಮಾನನಾಗಿದ್ದಾನೆ. ಎಡಬಲದಲ್ಲಿ ಬ್ರಹ್ಮರುದ್ರಾದಿಗಳು ಕೈವಾರಿಸುತ್ತಾ ನಡೆದು ಬರುತ್ತಿದ್ದಾರೆ. ಹಿಂದೆ ಋಷಿಗಳ ಸಮೂಹ ವೇದೋಪನಿಷತ್ತುಗಳನ್ನು ಉದ್ಘೋಷಿಸುತ್ತಿದೆ. ಶಚೀದೇವಿ ಛತ್ರವನ್ನು, ಇಂದ್ರ ಚಾಮರವನ್ನು, ಮನ್ಮಥವ್ಯಜನವನ್ನು ಬೀಸುತ್ತಿದ್ದಾರೆ. ಹನುಮಂತನು ಹೊಳೆವೆಲೆಗಳ ಹಡಪವನ್ನು ಹೊತ್ತಿದ್ದಾನೆ.ಚಂದ್ರನು ಕಾಳಂಜಿಯನ್ನು ಹಿಡಿದಿದ್ದಾನೆ. ವರುಣನು ಸ್ವಾದುಜಲವ ತರುತ್ತಿದ್ದಾನೆ. ಎಲ್ಲ ದೇವತೆಗಳೂ ಅವರವರ ಆಯುಧಗಳನ್ನು ಹಿಡಿದು ಸುತ್ತ ನಡೆದಿದ್ದಾರೆ. ಮಂದರ, ಮಧ್ಯಮ, ತಾರಕದಿಂದ ಗಂಧರ್ವರು ಗಾನ ಮಾಡುತ್ತಿದ್ದಾರೆ. ನಾರದ ಹಾಡುತ್ತಿರಲು ಅಪ್ಸರ ಸ್ತ್ರೀಯರು ನರ್ತಿಸುತ್ತಿದ್ದಾರೆ.ಈ ಮಹಾ ವೈಭವದಿಂದ ಲೋಕನಾಯಕ, ಲೋಕೈಕರಕ್ಷಾಮಣಿ, ಸಾಕಾರರೂಪ, ಸುದ್ಗುಣ ಭರಿತ ವೆಂಕಟೇಶ ಪುರಂದರವಿಠಲ ಗರುಡಧ್ವಜದ ತಿಮ್ಮಪ್ಪನ ಪಲ್ಲಕ್ಕಿ ಉತ್ಸವ ಮೆರೆಯುತ್ತಾ ಬರುತ್ತಿದೆ ಎಂದು ವರ್ಣಿಸಿದ್ದಾರೆ.

ಇಂತಿದೆ ಪುರಂದಾರದಾಸರು ಕಣ್ಣಾರೆ, ಮನಸಾರೆ ಕಂಡ ತಿರುಮಲೆಯ ಶ್ರೀನಿವಾಸನ ಸೇವೆಗಳ ಉತ್ಸವಗಳ ಅದ್ಭುತಕಾಣ್ಕೆ ಅದನ್ನು ನುಡಿಗಳಲ್ಲಿ ಮೂಡಿಸಿರುವ ಮಹಾ ವೈಭವ. ತಿರುಮಲೆಯೊಡೆಯ ಶ್ರೀನಿವಾಸನಿಗೆ ನಮೋ ನಮಃ॥



# ಮಂಗಳಾಶಾಸನ

01) ಶ್ರಿಯಃ ಕಾಂತಾಯ ಕಲ್ಯಾಣನಿಧಯೇಽ ನಿಧಯೇಽರ್ಥಿನಾಮ್।
ಶ್ರೀ ವೇಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್॥

02) ಲಕ್ಷ್ಮೀ ಸವಿಭ್ರಮಾಲೋಕ ಸುಭ್ರೂವಿಭ್ರಮ ಚಕ್ಷುಷೇ।
ಚಕ್ಷುಷೇ ಸರ್ವಲೋಕಾನಾಂ ವೇಂಕಟೇಶಾಯ ಮಂಗಳಮ್॥

03) ಶ್ರೀ ವೇಂಕಟಾದ್ರಿ ಶೃಂಗಾಗ್ರಮಂಗಳಾಭರಣಾಂಘ್ರಯೇ।
ಮಂಗಳಾನಾಂ ನಿವಾಸಾಯ ಶ್ರೀನಿವಾಸಾಯ ಮಂಗಳಮ್॥

04) ಸರ್ವಾವಯವಸೌಂದರ್ಯ ಸಂಪದಾ ಸರ್ವಚೇತಸಾಮ್।
ಸದಾ ಸಮ್ಮೋಹನಾಯಾಸ್ತು ವೇಂಕಟೇಶಾಯ ಮಂಗಳಮ್॥

05) ನಿತ್ಯಾಯ ನಿರವದ್ಯಾಯ ಸತ್ಯಾನಂದಚಿದಾತ್ಮನೇ।
ಸರ್ವಾಂತರಾತ್ಮನೇ ಶ್ರೀಮದ್ವೇಂಕಟೇಶಾಯ ಮಂಗಳಮ್॥

06) ಸ್ವತಸ್ಸರ್ವವಿದೇ ಸರ್ವಶಕ್ತಯೇ ಸರ್ವಶೇಷಿಣೇ।
ಸುಲಭಾಯ ಸುಶೀಲಾಯ ವೇಂಕಟೇಶಾಯ ಮಂಗಳಮ್॥

07) ಪರಸ್ಮೈಬ್ರಹ್ಮಣೇ ಪೂರ್ಣಕಾಮಾಯ ಪರಮಾತ್ಮನೇ।
ಪ್ರಯುಂಜೇ ಪರತತ್ತ್ವಾಯ ವೇಂಕಟೇಶಾಯ ಮಂಗಳಮ್॥

08) ಆಕಾಲತತ್ತ್ವ ಮಶ್ರಾಂತಮಾತ್ಮನಾಮನು ಪಶ್ಯತಾಮ್।
ಅತೃಪ್ತ್ಯಮೃತರೂಪಾಯ ವೇಂಕಟೇಶಾಯ ಮಂಗಳಮ್॥

09) ಪ್ರಾಯಸ್ಸ್ವಚರಣೌ ಪುಂಸಾಂ ಶರಣ್ಯತ್ವೇನ ಪಾಣಿನಾ।
ಕೃಪಯಾಽಽದಿಶತೇ ಶ್ರೀಮದ್ವೇಂಕಟೇಶಾಯ ಮಂಗಳಮ್॥

10) ದಯಾಽಮೃತತರಂಗಿಣ್ಯಾಸ್ತರಂಗೈರಿವ ಶೀತಲೈಃ।
ಅಪಾಂಗೈಸ್ಸಿಂಚತೇ ವಿಶ್ವಂ ವೇಂಕಟೇಶಾಯ ಮಂಗಳಮ್॥

11) ಸ್ರಗ್ಭೂಷಾಂಬರಹೇತೀನಾಂ ಸುಷಮಾವಹಮೂರ್ತಯೇ।
ಸರ್ವಾರ್ತಿಶಮನಾಯಾಸ್ತು ವೇಂಕಟೇಶಾಯ ಮಂಗಳಮ್॥

12) ಶ್ರೀವೈಕುಂಠವಿರಕ್ತಾಯ ಸ್ವಾಮಿಪುಷ್ಕರಿಣೀತಟೇ।
ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಮ್॥

13) ಶ್ರೀ ಮತ್ಸುಂದರಜಾಮಾತೃಮುನಿಮಾನಸವಾಸಿನೇ।
ಸರ್ವಲೋಕನಿವಾಸಾಯ ಶ್ರೀನಿವಾಸಾಯ ಮಂಗಳಮ್॥

14) ಮಂಗಳಾಶಾಸನಪರೈರ್ಮದಾಚಾರ್ಯಪುರೋಗಮೈಃ।
ಸರ್ವೈಶ್ಚಪೂರ್ವೈರಾಚಾರ್ಯೈಃ ಸತ್ಕೃತಾಯಾಸ್ತು ಮಂಗಳಮ್॥

**ಇಂತು ಶ್ರೀ ವೇಂಕಟೇಶ ಮಂಗಳಾಶಾಸನವು ಮುಗಿದುದು.**



**ಆಂಧ್ರಪ್ರದೇಶದ ಸರ್ಕಾರದ ವತಿಯಿಂದ 2023 ಆಗಸ್ಟ್ ತಿಂಗಳಲ್ಲಿ ತಿ.ತಿ.ದೇವಸ್ಥಾನದ ಆಡಳಿತ ಮಂಡಳಿಯ ನೂತನ ಅಧ್ಯಕ್ಷರು ಮತ್ತು ಸದಸ್ಯರು ಪ್ರಮಾಣ ಸ್ವೀಕಾರ ಮಾಡಿದರು ಅವರ ವಿವರಗಳು ಈ ಕೆಳಗಿನಂತಿವೆ.**



ಶ್ರೀ ಭೂಮನ ಕರುಣಾಕರ ರೆಡ್ಡಿ
ತಿರುಪತಿ ಶಾಸಕರು ಮತ್ತು ತಿ.ತಿ.ದೇ.,
ಆಡಳಿತ ಮಂಡಳಿಯ ಅಧ್ಯಕ್ಷರು



ಶ್ರೀ ಪೊನ್ನಾಡ ವೆಂಕಟ
ಸತೀಶ್‌ಕುಮಾರ್
ಶಾಸಕರು ಮತ್ತು ಸದಸ್ಯರು



ಶ್ರೀ ಉದಯಭಾನು ಸಾಮಿನೇನಿ
ಶಾಸಕರು ಮತ್ತು ಸದಸ್ಯರು



ಶ್ರೀ ಎಂ. ತಿಪ್ಪೆಸ್ವಾಮಿ
ಶಾಸಕರು ಮತ್ತು ಸದಸ್ಯರು



ಶ್ರೀ ಸಿದ್ಧವಟ್ಟಂ ಯಾನಾದಯ್ಯ
ಸದಸ್ಯರು



ಶ್ರೀ ಚಂಡೇ ಅಶ್ವಾರ್ಥ ನಾಯಕ್
ಸದಸ್ಯರು



ಶ್ರೀ ಮೇಕಾ ಶೇಷುಬಾಬು
ಸದಸ್ಯರು



ಶ್ರೀ ಆರ್.ವೆಂಕಟ ಸುಬ್ಬಾರೆಡ್ಡಿ
ಸದಸ್ಯರು



ಶ್ರೀ ಎಲ್ಲಾರೆಡ್ಡಿ ಗಾರಿ
ಸೀತಾರಾಮಿರೆಡ್ಡಿ
ಸದಸ್ಯರು



ಶ್ರೀ ಗಾದಿರಾಜು ವೆಂಕಟಸುಬ್ಬರಾಜು
ಸದಸ್ಯರು



ಶ್ರೀ ಪಿನಕಾ ಶರತ್‌ಚಂದ್ರಾರೆಡ್ಡಿ
ಸದಸ್ಯರು



ಶ್ರೀ ರಾಂರೆಡ್ಡಿ ಸಾಮುಲ
ಸದಸ್ಯರು



ಶ್ರೀ ಬಾಲಸುಬ್ರಮಣಿಯನ್
ಪಳನಿಸ್ವಾಮಿ
ಸದಸ್ಯರು

# ತಿ.ತಿ.ದೇ.,ಆಡಳಿತ ಮಂಡಳಿಯ ನೂತನ ಸದಸ್ಯರು



ಶ್ರೀ ಎಸ್. ಆರ್. ವಿಶ್ವನಾಥರೆಡ್ಡಿ
ಸದಸ್ಯರು



ಶ್ರೀಮತಿ ಗಡ್ಡಂ ಸೀತಾರೆಡ್ಡಿ
ಸದಸ್ಯರು



ಶ್ರೀ ಕೃಷ್ಣಮೂರ್ತಿ ವೈತ್ಯನಾಥನ್
ಸದಸ್ಯರು



ಶ್ರೀ ಸಿದ್ಧವೀರ ವೆಂಕಟ
ಸುಧೀರ್ ಕುಮಾರ್
ಸದಸ್ಯರು



ಶ್ರೀ ಸುದರ್ಶನ್ ವೇಣು
ಸದಸ್ಯರು



ಶ್ರೀ ನೆರುಸು ನಾಗಸತ್ಯಂ
ಸದಸ್ಯರು



ಶ್ರೀ ಆರ್.ವಿ. ದೇಶಪಾಂಡೆ
ಸದಸ್ಯರು



ಶ್ರೀ ಅಮೋಲ್ ಕಾಳೆ
ಸದಸ್ಯರು



ಡಾ॥ ಎಸ್. ಶಂಕರ್
ಸದಸ್ಯರು



ಶ್ರೀ ಮಿಳಿಂದ್ ಕೇಶವ ನರ್ವೇಕರ್
ಸದಸ್ಯರು



ಡಾ॥ ಕೇತನ್ ದೇಶಾಯಿ
ಸದಸ್ಯರು



ಶ್ರೀ ಬೋರಾ ಸೌರಭ್
ಸದಸ್ಯರು



ಶ್ರೀ ಆರ್. ಕರಿಕಾಲವಳವನ್ ಐ.ಎ.ಎಸ್.,
ಸರ್ಕಾರದ ವಿಶೇಷ ಕಾರ್ಯದರ್ಶಿ,
ಕಂದಾಯ (ದತ್ತಿ) ಇಲಾಖೆ
ಎಕ್ಸ್ - ಅಫಿಷಿಯಾ ಸದಸ್ಯರು



ಶ್ರೀ ಸತ್ಯನಾರಾಯಣ ಐ.ಎ.ಎಸ್.,
ಆಯುಕ್ತರು, ದತ್ತಿ ಇಲಾಖೆ,(ಆ.ಪ್ರ)
ಎಕ್ಸ್ - ಅಫಿಷಿಯಾ ಸದಸ್ಯರು



ಶ್ರೀ ಚೆವಿರೆಡ್ಡಿ ಮೋಹಿತ್ ರೆಡ್ಡಿ
T.U.D.A. ಅಧ್ಯಕ್ಷರು,
ಎಕ್ಸ್ - ಅಫಿಷಿಯಾ ಸದಸ್ಯರು



ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್.
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,
ಎಕ್ಸ್ - ಅಫಿಷಿಯಾ ಸದಸ್ಯರು

# ತಿರುಮಲೆ ತಿರುಪತಿ ದೇವಸ್ಥಾನಗಳು





**2023, ಆಗಸ್ಟ್ 27 ರಿಂದ 29 ರ ವರೆಗೆ ನಡೆದ ತಿರುಮಲೆ ಸ್ವಾಮಿಯವರ ಪವಿತ್ರೋತ್ಸವ ದೃಶ್ಯಗಳು ಈ ಕಾರ್ಯಕ್ರಮದಲ್ಲಿ ತಿರುಮಲೆ ಶ್ರೀ ಶ್ರೀ ಶ್ರೀ ಪೆದ್ದಜೀಯರ್ ಸ್ವಾಮಿ, ಶ್ರೀ ಶ್ರೀ ಶ್ರೀ ಚಿನ್ನಜೀಯರ್ ಸ್ವಾಮಿ, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್. ದಂಪತಿಗಳು ಪಾಲ್ಗೊಂಡರು.**



ತಿ.ತಿ.ದೇ., ಆಡಳಿತಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ ಯವರು ಇತ್ತೀಚೆಗೆ ತಿರುಮಲೆ ವೈಕುಂಠಂ ಕ್ಯೂ ಕಾಂಪ್ಲೆಕ್ಸ್ - 2 ರಲ್ಲಿ ಸಾಮಾನ್ಯ ಭಕ್ತರಂತೆ ಹೋಗಿ ಸರ್ವದರ್ಶನದಲ್ಲಿರುವ ಸೌಕರ್ಯಗಳನ್ನು ಪರಿಶೀಲಿಸುತ್ತಿರುವ ದೃಶ್ಯ.



ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ ಯವರು ತಿರುಪತಿಯಲ್ಲಿರುವ ಸ್ಥಾನಿಕ ಆಲಯಗಳನ್ನು ಸಂದರ್ಶಿಸುತ್ತಿರುವ ದೃಶ್ಯ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು ಪಾಲ್ಗೊಂಡರು.




ಶ್ರೀ ವೆಂಕಟೇಶ್ವರ ಸಂಪ್ರದಾಯ ಶಿಲ್ಪಕಲಾ ಶಾಲೆ, ತಿ.ತಿ.ದೇ., ಯಲ್ಲಿ 2023 ಸೆಪ್ಟೆಂಬರ್ 04 ರಿಂದ 06 ರ ವರೆಗೆ ನಡೆದ ಮೂರು ದಿನಗಳ ವರ್ಕ್‌ಶಾಪ್ ದೃಶ್ಯ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.




ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ರವರು ಇತ್ತೀಚೆಗೆ ಕೋಟಿ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞಂ ರಥಯಾತ್ರೆಯನ್ನು ಪ್ರಾರಂಭಿಸಿದ ದೃಶ್ಯ.



# ಪ್ರತಿ ಕ್ಷಣವು ಭಕ್ತರ ಸೇವೆಯಲ್ಲಿ ತಿ.ತಿ.ದೇ., 24 X 7

-ಮೂಲ : ಡಾ|| ಕೆ. ರವಿಚಂದ್ರನ್
ಅನುವಾದ : ಶ್ರೀಮತಿ. ಎನ್. ಪಾರ್ವತಿ

ಕಲಿಯುಗದ ಪ್ರತ್ಯಕ್ಷ ದೈವನಾದ ಶ್ರೀವೆಂಕಟೇಶ್ವರನಿಗೆ ಅನಂತ ನಾಮಗಳಿವೆ. ಅದಕ್ಕಾಗಿ ಅಕ್ಷರಸ್ಥರು ಶ್ರೀವೆಂಕಟೇಶ್ವರ ಸ್ವಾಮಿ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸುತ್ತಾರೆ. ತಾಳ್ಮೆ ಇರುವವರು ಶ್ರೀ ವೆಂಕಟೇಶ್ವರ ಸಹಸ್ರನಾಮಾವಳಿಯನ್ನು ಮನನ ಮಾಡುತ್ತಾರೆ. ಇದೇನನ್ನೂ ಮಾಡದವರು ಅಚ್ಚ ಕನ್ನಡದಲ್ಲಿ "ಸಪ್ತಗಿರಿವಾಸ!" ಎಂದು ಕೈಯೆತ್ತಿ ಸ್ವಾಮಿಯನ್ನು ಆರಾಧಿಸುತ್ತಾರೆ.

ಭಾರತೀಯರು, ಅದರಲ್ಲೂ ಹಿಂದೂಗಳು ಸ್ವಾಮಿ ಎಲ್ಲಾ ಕಡೆ ಇರುತ್ತಾನೆ ಎಂಬ ಭಾವನೆಯನ್ನು ಸಾಮಾನ್ಯರಲ್ಲೂ ಕೂಡ ಬರುವಂತೆ ಮಾಡಲು ಬೆಟ್ಟದಲ್ಲಿ, ಕಾಡಿನಲ್ಲಿ ನದಿಗಳಲ್ಲಿ ಸಮುದ್ರತೀರದಲ್ಲಿ, ಅರಣ್ಯ ಪ್ರದೇಶಗಳಲ್ಲದೆ, ಜಲ ಪ್ರವಾಹಗಳ ಮಧ್ಯೆಯೂ ಸಹ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅಷ್ಟೇ ಅಲ್ಲದೆ, ಸ್ವಾಮಿಯು ಸ್ವಯಂಭುವಾಗಿ ಆಯಾ ಪ್ರದೇಶದಲ್ಲಿ ಅವತಾರ ಎತ್ತಿದ್ದಾನೆ ಎಂಬ ವಿಶ್ವಾಸವನ್ನು ಹೊಂದಿದ್ದಾರೆ. ವಿವಿಧ ಸ್ಥಳಗಳಲ್ಲಿರುವ ದೇವಸ್ಥಾನಗಳನ್ನು ದರ್ಶಿಸಲು ಕಷ್ಟನಷ್ಟ ಪ್ರಯಾಸಗಳನ್ನು ಬದಿಗೊತ್ತಿ, ಸ್ನೇಹಿತರೊಂದಿಗೆ, ಕುಟುಂಬದೊಂದಿಗೆ, ಆಬಾಲ ಗೋಪಾಲರೊಂದಿಗೆ ಪ್ರಯಾಣ ಬೆಳೆಸುತ್ತಾರೆ.ಹಾಗೆ ತೆರಳುವ ಯಾತ್ರಿಕರಿಗೆ ಮಾರ್ಗ ಮಧ್ಯದಲ್ಲಿ ಆಯಾಸವನ್ನು ತೀರಿಸಲು ಪುಣ್ಯಾತ್ಮರು ಛತ್ರಗಳನ್ನು, ಮಠಗಳನ್ನು ಸ್ಥಾಪಿಸಿದ್ದಾರೆ. ಕೆಲವೆಡೆ ಯಾತ್ರಿಕರಿಗೆ ಉಚಿತ ಭೋಜನ ವ್ಯವಸ್ಥೆಯನ್ನು ಕಲ್ಪಿಸಿ ಪರಮಾನಂದವನ್ನು ಹೊಂದುತ್ತಾರೆ, ಮತ್ತೆ ಕೆಲವರು ತಾವು ಹೋಗದಿದ್ದರೂ ಯಾತ್ರಿಕರು ತಮ್ಮ ಕೈಯಲ್ಲಿ ಹಿಡಿದುಕೊಂಡು ಬರುವ ಹಳದಿ ಬಟ್ಟೆಯಲ್ಲಿ ಸುತ್ತಿದ ತಂಬಿಗೆಯಲ್ಲಿ ಕಾಣಿಕೆಗಳನ್ನು ಸಮರ್ಪಿಸಿ ಧನ್ಯರಾಗುತ್ತಾರೆ. ದೇವಸ್ಥಾನದ ಪ್ರದೇಶದಲ್ಲಿ ದಾನ,ಧರ್ಮ ಮಾಡುವಂತಹ ಪುಣ್ಯವಂತರು ಭೋಜನಾದಿ ವ್ಯವಸ್ಥೆ ಮಾಡಿ ಆನಂದಾನುಭೂತಿಯನ್ನು ಹೊಂದುತ್ತಾರೆ.

ಇದೆಲ್ಲಾ ಸರಿ. ಆದರೆ ದಿನನಿತ್ಯವೂ ಸಾವಿರ ಲಕ್ಷ ಸಂಖ್ಯೆಯಲ್ಲಿ ಬರುವ ಯಾತ್ರಿಕರಿಗೆ ಆಯಾ ದೇವಾಲಯದಲ್ಲಿನ ಯಜಮಾನರು ಏನು ಮಾಡುತ್ತಿರುತ್ತಾರೆ ಎನ್ನುವುದು ಕುತೂಹಲ ಮೂಡಿಸುವ ವಿಷಯವಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಪಂಚದಲ್ಲಿ ಅಗ್ರಗಾಮಿಯಾಗಿ ನಿಲ್ಲುವ ಅತಿ ದೊಡ್ಡ ಧಾರ್ಮಿಕ ಸಂಸ್ಥೆಯಾದ ತಿರುಮಲೆ ತಿರುಪತಿ ಅ ದೇವಸ್ಥಾನವು ತಂಡೋಪತಂಡವಾಗಿ ಬರುತ್ತಿರುವ ಭಕ್ತ ಕೋಟಿಗೆ ಸಾಕಷ್ಟು ಸೌಕರ್ಯಗಳನ್ನು ಕಲ್ಪಿಸುತ್ತಾ ಅವರಿಗೆ ಸ್ವಲ್ಪವೂ ತೊಂದರೆ ಆಗದಂತೆ, ಕಣ್ಣಿನ ರೆಪ್ಪೆಯಂತೆ ನೋಡಿಕೊಳ್ಳುತ್ತಿದ್ದಾರೆ.

ತಿ.ತಿ.ದೇ. ಭಕ್ತರಿಗೆ ಮಾಡಿರುವ, ಮಾಡುತ್ತಿರುವ ಸೌಕರ್ಯಗಳ ಕುರಿತಾದ ವಿಹಂಗಮ ನೋಟವೇ ಈ ಲೇಖನ .

### ಬೇಸಿಗೆಯಿಂದ ಉಪಶಮನ

ಭಾರತೀಯರ ಕಾಲಗಮನವು ತುಂಬಾ ಪ್ರಾಚೀನವಾದದ್ದು. ಗಳಿಗೆಗಳು,ನಿಮಿಷಗಳು,ಉದಯ ಅಸ್ತಮಾನ ಕಾಲಗಳು,ಅಹೋರಾತ್ರಿಗಳು ಹಾಗೆಯೇ ವಾರಗಳು,ತಿಂಗಳುಗಳು,ಋತುಗಳು ಸಂವತ್ಸರಗಳು,ಯುಗಗಳ ಗಣನೆ ನೋಡಿ ಪಾಶ್ಚಾತ್ಯರು ಆಶ್ಚರ್ಯಪಟ್ಟಿದ್ದಾರೆ. ತೆಲುಗಿನವರಿಗೆ ಚಾಂದ್ರಮಾನ ಯುಗಾದಿಯಿಂದ ಹೊಸ ಸಂವತ್ಸರ ಪ್ರಾರಂಭವಾಗುತ್ತದೆ. ಮೊದಲ ಋತು ವಸಂತ ಋತುವಾಗಿದೆ, ಎರಡನೆಯದು ಗ್ರೀಷ್ಮ ಋತು. ಮನುಷ್ಯರಲ್ಲಿ ಪ್ರಕೃತಿ ಸಂರಕ್ಷಣಾ ಭಾವನೆಯ ಕೊರತೆಯಿಂದ ಇಂದಿನ ಕಾಲದಲ್ಲಿ ಋತುಗಳ ಸಹಜ ಧರ್ಮಗಳು ಬದಲಾಗುತ್ತಿವೆ. ವಸಂತದಲ್ಲಿ ಹಸಿರು ಸೀರೆಯನ್ನುಟ್ಟು ಪ್ರಕೃತಿ ಲಕ್ಷ್ಮಿ ಕೆಲವು ಕಡೆಯಲ್ಲಿ ಮಾತ್ರ ದರ್ಶನ ನೀಡುತ್ತಾಳೆ. ವಸಂತದಲ್ಲಿಯೇ ಗ್ರೀಷ್ಮವು ಒಂದು ಸಣ್ಣ ರಾಜ್ಯವನ್ನು ಆಕ್ರಮಿಸಲು ದೊಡ್ಡ ರಾಜ್ಯದಂತೆ ತನ್ನ ಅಧಿಪತ್ಯವನ್ನು ಪ್ರದರ್ಶಿಸುತ್ತಿದೆ.

ಬೇಸಿಗೆಯಲ್ಲಿ ವಿವಾಹಗಳು, ದೂರ ಪ್ರಯಾಣಗಳು, ಗೃಹ ಪ್ರವೇಶಗಳು ಹೆಚ್ಚಾಗಿರುತ್ತವೆ. ಪ್ರಸುತ್ತವಾಗಿ ಪ್ರಯಾಣ ಸೌಕರ್ಯಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ, ಮಕ್ಕಳಿಗೆ ಬೇಸಿಗೆಯಲ್ಲಿ ರಜೆ ಇರುವುದರಿಂದ ಬಹಳ ಮಂದಿ ಯಾತ್ರೆಗಳಿಗೆ ತೆರಳುತ್ತಾರೆ. ಅದಲ್ಲದೆ ಸುಮಾರು ಎರಡು ವರ್ಷಗಳ ಕಾಲ ಎಲ್ಲರನ್ನು ಭಯ ಭ್ರಾಂತಗೊಳಿಸಿದ ಕರೋನ ಕಡಿಮೆ






ಆಗಿದ್ದರ ಹಿನ್ನೆಲೆಯಲ್ಲಿ ಜನರು ತೀರ್ಥಯಾತ್ರೆಗಳನ್ನು ಹೆಚ್ಚು ಮಾಡುತ್ತಿದ್ದಾರೆ. ತಮ್ಮ ತಮ್ಮ ನಂಬಿಕೆಗೆ ಅನುಗುಣವಾಗಿ ಹರಕೆಗಳನ್ನು ತೀರಿಸಲು ಸಾವಿರಾರು ಮಂದಿ ತಿರುಪತಿ ಯಾತ್ರೆಗೆ ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ತಿರುಮಲೆ ತಿರುಪತಿ ದೇವಸ್ಥಾನದವರು ಬೇಸಿಗೆಯಲ್ಲಿ ಬರುವ ಭಕ್ತರಿಗೆ ಕಲ್ಪಿಸಿರುವ ಸೇವೆಗಳನ್ನು ಪ್ರಶಂಸಿಸಲೇ ಬೇಕು.

ಬೆಟ್ಟಕ್ಕೆ ನಡೆದು ಬರುವ ಯಾತ್ರಿಕರು ಎದುರಿಸುವ ಸಮಸ್ಯೆಗಳು ಅನೇಕ. ಮೊದಲಿನದು ಲಗೇಜ್ ಸಮಸ್ಯೆ. ಈ ಸಮಸ್ಯೆಯನ್ನು ಪರಿಹರಿಸಲು ತಿರುಮಲೆ ತಿರುಪತಿ ದೇವಸ್ಥಾನದವರು ಉಚಿತವಾಗಿ ಭಕ್ತರ ಲಗೇಜ್‌ಗಳನ್ನು ತಿರುಮಲೆಗೆ ಕಳುಹಿಸಲು ಅಲಿಪಿರಿ ಹತ್ತಿರ ಒಂದು ಉತ್ತಮವಾದ ವ್ಯವಸ್ಥೆಯನ್ನು ಮಾಡಿರುತ್ತಾರೆ,ಎರಡನೆಯದೆಂದರೆ ಬಿಸಿಲು-ಮಳೆ ಇಂದ ರಕ್ಷಿಸಿಕೊಳ್ಳುವುದು. ಅದಕ್ಕಾಗಿ ನಡೆದುಹೋಗುವ ಮಾರ್ಗದಲ್ಲಿ ಮೇಲ್ಚಾವಣಿಯನ್ನು ಅಳವಡಿಸಿ ಬಿಸಿಲು ಮಳೆಯಿಂದ ಆಗುವ ಬಾಧೆಯನ್ನು ಕಡಿಮೆ ಮಾಡಿದ್ದಾರೆ, ಮೂರನೆಯದೆಂದರೆ ದಾರಿ ಮಧ್ಯದಲ್ಲಿ ಕುಡಿಯುವ ನೀರಿನ ಸೌಕರ್ಯ, ನಾಲ್ಕನೆಯದೆಂದರೆ ಅಲ್ಲಲ್ಲಿ ವಿಶ್ರಾಂತಿ ತಾಣಗಳನ್ನು ನಿರ್ಮಿಸಿರುವುದು. ಆಹ್ಲಾದದೊಂದಿಗೆ ಆಧ್ಯಾತ್ಮಿಕ ಚಿಂತನೆಯನ್ನು ಹೆಚ್ಚಿಸಲು ಆಳ್ವಾರರ ವಿಗ್ರಹಗಳು,ಹರಿದಾಸರ ವಿಗ್ರಹಗಳು, ಹನುಮದಾದಿ ದೇವತೆಗಳ ವಿಗ್ರಹಗಳನ್ನು ಸ್ಥಾಪಿಸಿದೆ. ಇಂತಹ ಸೌಕರ್ಯಗಳು ಭಾರತದ ದೇಶದಲ್ಲಿಯೇ ಎಲ್ಲಿಯೂ ಕಾಣಸಿಗುವುದಿಲ್ಲ.ಹಾಗಾಗಿ ತಿರುಮಲೆಯಲ್ಲಿ ಯಾತ್ರಿಕರಿಗೆ ಲಭಿಸುವ ಸೌಕರ್ಯಗಳು ಅನಂತ. ಉಚಿತ ಕೋಣೆಗಳು, ಉಚಿತ ಭೋಜನ, ತಿರುಮಲೆಯಲ್ಲಿ ದರ್ಶನೀಯ ಸ್ಥಳಗಳನ್ನು ದರ್ಶಿಸಲು ಉಚಿತ ಬಸ್ಸು ಸೌಕರ್ಯಗಳಂತವು ಇನ್ನು ಎಷ್ಟೋ .

ತಿರುಮಲೆಯು ಸಾಲಿಗ್ರಾಮ ರೂಪವಾಗಿದೆ. ಅದಕ್ಕಾಗಿಯೇ ಅಲ್ಲಿ ಚಪ್ಪಲಿಗಳನ್ನು ಹಾಕಿ ನಡೆಯಬಾರದೆಂಬ ನಿಯಮವಿದೆ. ಶ್ರೀರಾಮಾನುಜರು, ಶ್ರೀವ್ಯಾಸರಾಯರಂಥಹವರು ಮೊಣಕಾಲು ಊರಿ ತಿರುಮಲೆ ಬೆಟ್ಟವನ್ನು ಹತ್ತಿದ್ದಾರೆ ಎನ್ನುವುದು ಜನಶ್ರುತಿ, ಅನ್ನಮಯ್ಯನವರು ಚಪ್ಪಲಿ ಹಾಕಿಕೊಂಡು ಹತ್ತಿದ್ದಾಗ, ಅಮ್ಮ ಅಲಮೇಲುಮಂಗಮ್ಮ ಎಚ್ಚರಿಸಿದ್ದರು ಎನ್ನುವುದು ಚರಿತ್ರೆ. ಸಾಮಾನ್ಯವಾಗಿ ಭಕ್ತರೂ ಕೂಡ ತಿರುಪತಿ ಬೀದಿಗಳಲ್ಲಿ ಪಾದರಕ್ಷೆಗಳನ್ನು ಬಳಸುವುದಿಲ್ಲ,ಬರಿಗಾಲಿನಲ್ಲಿ ಓಡಾಡುತ್ತಾರೆ. ಭಕ್ತರಿಗೆ ಅತಿಯಾದ ಬಿಸಿಲಿನಿಂದ ಕಾಲು ಬೊಬ್ಬೆ ಬರದಂತೆ ದಿನಕರನ ಪ್ರತಾಪದಿಂದ ಭಕ್ತರಿಗೆ ಉಪಶಮನ ಒದಗಿಸಲು ತಿರುಮಲೆ ತಿರುಪತಿ ದೇವಸ್ಥಾನ ಅಧಿಕಾರಿಗಳು ಸಿಮೆಂಟ್ ರೋಡಿನ ಮೇಲೆ ಬಳಿ ಬಣ್ಣದ ಪೇಂಟ್ ಹಾಕಿದ್ದಾರೆ. ಮ್ಯಾಟ್‌ಗಳನ್ನು ಏರ್ಪಾಟು ಮಾಡಿ, ನೀರು ಹಾಕುತ್ತಿರುತ್ತಾರೆ. ಇದರಿಂದ ಸ್ವಾಮಿಯವರ ದರ್ಶನದ ನಂತರ ಹೊರಬರುವ ಭಕ್ತರು ಬಿಸಿಲಿನಿಂದ ಉಪಶಮನ ಹೊಂದುತ್ತಾರೆ.

**ಜಲಪ್ರಸಾದ ಕೇಂದ್ರಗಳು :**

ನೀರೇ ಪ್ರಾಣಾಧಾರ, ಇದರ ಸ್ಥಾನವನ್ನು ತುಪ್ಪ, ಹಾಲು, ಫಲಗಳಿಂದ ತುಂಬಲಾಗುವುದಿಲ್ಲ. ನೀರಿನಿಂದ ಮಾತ್ರ ದಾಹ ತೀರುತ್ತದೆ. ಇದ






ರಿಂದ ಬಿಸಿಲಿನ ತೀವ್ರತೆಯು ತಗ್ಗುತ್ತದೆ. ಆರೋಗ್ಯ ಸೂತ್ರಗಳಲ್ಲಿ ಮೊದಲಿನದೆಂದರೆ ನೀರನ್ನು ಕುಡಿಯುವುದು. ಹಸಿವೆಯನ್ನು ಸಹಿಸಬಹುದಾಗಲಿ, ದಾಹವನ್ನು ಸಹಿಸಲಾಗುವುದಿಲ್ಲ. ಅದಕ್ಕಾಗಿಯೇ ತಿರುಮಲೆ ಬೆಟ್ಟದ ಮೇಲೆ ತಿರುಮಲೆ ತಿರುಪತಿ ದೇವಸ್ಥಾನದವರು ಸಾಕಷ್ಟು ಜಲ ಪ್ರಸಾದ ಕೇಂದ್ರಗಳನ್ನು ತೆರೆದು 24 ಗಂಟೆಗಳ ಕಾಲ ಸ್ವಚ್ಛ ಜಲವನ್ನು ಒದಗಿಸುತ್ತಿದ್ದಾರೆ.

**ಎರಡು ವರ್ಷಗಳ ನಂತರ....**

ಕರೋನಾದ ಎರಡು ವರ್ಷಗಳ ನಂತರ,ವೃದ್ಧರು, ದಿವ್ಯಾಂಗರು, ದೀರ್ಘ ಕಾಲಿಕ ವ್ಯಾಧಿಗ್ರಸ್ಥರಿಗೆ ದರ್ಶನವನ್ನು ತಿರುಮಲೆ ತಿರುಪತಿ ದೇವಸ್ಥಾನದವರು ಸರಳಗೊಳಿಸಿದ್ದಾರೆ. ಕರೋನ ಕಡಿಮೆಯಾಗುತ್ತಿದ್ದಂತೆ 8.4.2022 ರಿಂದ ತಿ.ತಿ.ದೇ.,ಆನ್‌ಲೈನ್‌ನಲ್ಲಿ ಪ್ರತ್ಯೇಕ ದರ್ಶನ ಟಿಕೆಟ್‌ಗಳನ್ನು ಬಿಡುಗಡೆ ಮಾಡಿದೆ. 9.4.2022 ರಿಂದ ಸ್ವಾಮಿಯವರ ದರ್ಶನಕ್ಕೆ ಅನುಮತಿಸಿದೆ. ಸ್ವಾಮಿಯವರ ದರ್ಶನಕ್ಕೆ ಯಾವುದೇ ತೊಂದರೆ ಆಗದಂತೆ ಸ್ವಾಮಿಯವರ ಆಲಯದ ಪಕ್ಕದಲ್ಲಿರುವ ತಿರುಮಲೆನಂಬಿ ಆಲಯದಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಇದೇ ರೀತಿಯಲ್ಲಿ ದಿವ್ಯಾಂಗರು, ವೃದ್ದರ ಹಸಿವು ನೀರಡಿಕೆಯನ್ನು ತೀರಿಸಲು ತಿ.ತಿ.ದೇ., ದೇವಸ್ಥಾನವು ಸಂಕಲ್ಪಿಸಿದೆ. ಉಪ್ಪಿಟ್ಟು ಮಹಾ ಪ್ರಸಾದವನ್ನು ಹಂಚಲಾಗುತ್ತಿದೆ. ಅದರೊಂದಿಗೆ ಜಲಪ್ರಸಾದವನ್ನು ಕೊಡಲಾಗುತ್ತಿದೆ.

ದಿವ್ಯಾಂಗರು, ವೃದ್ಧರಿಗಾಗಿ ತಿ.ತಿ.ದೇ., ದೇವಸ್ಥಾನವು ನಾಲ್ಕು ಬ್ಯಾಟರಿ ವಾಹನದೊಂದಿಗೆ, ಚಕ್ರಗಳುಳ್ಳ ಕುರ್ಚಿಗಳನ್ನು ಏರ್ಪಾಟು



ಮಾಡಿದೆ. ರಾಮ್‌ಭಗೀಚಾದಿಂದ ಸ್ವಾಮಿಯವರ ದೇವಸ್ಥಾನದವರೆಗೂ ಏರ್ಪಾಟು ಮಾಡಿರುವ ಪ್ರತ್ಯೇಕ ಕ್ಯೂ ವರೆಗೂ ಭಕ್ತರನ್ನು ತಲುಪಿಸುತ್ತದೆ. ದಿವ್ಯಾಂಗರು ಮತ್ತು ವೃದ್ಧರಿಗಾಗಿ ತಿ.ತಿ.ದೇ., ದೇವಸ್ಥಾನದವರು ಪ್ರತ್ಯೇಕವಾಗಿ ಶ್ರೀವಾರಿ ಸೇವಕರನ್ನು ಏರ್ಪಾಟು ಮಾಡಿದೆ. ಎರಡು ವರ್ಷಗಳ ನಂತರ ಸ್ವಾಮಿಯವರನ್ನು ದರ್ಶಿಸಿದ ಭಕ್ತರು ಪುಲಕಗೊಳ್ಳುತ್ತಿದ್ದಾರೆ.




**ನಳ ನಳಿಸುವ ಉದ್ಯಾನವನಗಳು :**

ಬೇಸಿಗೆಯಲ್ಲಿ ಮಾತ್ರ ಅಲ್ಲದೇ ಇತ್ತೀಚೆಗೆ ತಿರುಮಲೆಗೆ ಬರುತ್ತಿರುವ ಭಕ್ತರ ಸಂಖ್ಯೆ ಹೆಚ್ಚಾಗಿದೆ.ಇವರೆಲ್ಲರ ಪ್ರಯಾಸ ತೀರಿಸುವ, ವಿರಮಿಸುವ ಸಲುವಾಗಿ ತಿ.ತಿ.ದೇ.ಉದ್ಯಾನವನಗಳನ್ನು ನಿರ್ಮಿಸುತ್ತಿದೆ. ಸ್ವಾಮಿಯವರ ಪೂಜೆಗಾಗಿ ನಿರ್ಮಿಸಿರುವ ಹೂಗಳ ಉದ್ಯಾನವನಗಳು ಯಾತ್ರಿಕರನ್ನು ಮೈಮರೆಸುತ್ತಿವೆ. ವಾಸ್ತವವಾಗಿ ತಿರುಮಲೆಯನ್ನು ಹೂ ಮಂಟಪ ಎಂದು ಕರೆಯುತ್ತಾರೆ. ಅದಕ್ಕಾಗಿಯೇ ತಿರುಮಲೆಯಲ್ಲಿ ಹೂವನ್ನು ಮುಡಿಯಬಾರದು ಎಂಬ ನಿಯಮವಿದೆ. ಬೇರೆ ಸ್ಥಳಗಳಿಗಿಂತಲೂ ತಿರುಮಲೆಯಲ್ಲಿ ನಡೆಯುವ "ಪುಷ್ಪಯಾಗವು" ಕಮನೀಯ! ರಮಣೀಯವಾಗಿರುತ್ತದೆ.

ತಿರುಮಲೆ ಪುಣ್ಯ ಕ್ಷೇತ್ರವನ್ನು ಪುಷ್ಪವನದಂತೆ ಮಾರ್ಪಡಿಸಲು ತಿ.ತಿ.ದೇ.,ಶ್ರೀಕಾರ ಹಾಕಿದೆ. ಜಿ.ಎನ್.ಸಿ. ಟೋಲ್‌ಗೇಟ್ ಅನ್ನು ಒಳಗೊಂಡಂತೆ ತಿರುಮಲೆಯಲ್ಲಿರುವ ಎಲ್ಲಾ ಉದ್ಯಾನವನಗಳನ್ನು ಸುಂದರವಾಗಿ ಮಾರ್ಪಡಿಸಲು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ



ಶ್ರೀಎ.ವಿ.ಧರ್ಮಾರೆಡ್ಡಿಯವರು ವಿಶೇಷವಾಗಿ ಶ್ರಮಿಸುತ್ತಿದ್ದಾರೆ. ಕೆಲವು ಉದ್ಯಾನವನಗಳಲ್ಲಿ ಸುವಾಸನೆಭರಿತವಾದ, ಬಣ್ಣ ಬಣ್ಣದ ಸಂಪ್ರದಾಯದ ಪುಷ್ಪಗಳು ಭಕ್ತರನ್ನು ಆಕರ್ಷಿಸುತ್ತದೆ. ತಿರುಮಲೆಯಲ್ಲಿರುವ ದೊಡ್ಡ ಉದ್ಯಾನವನಗಳ ಜೊತೆಗೆ ಡಿವೈಡರ್, ಕಾಟೇಜುಗಳನ್ನು, ಅತಿಥಿಗೃಹಗಳ ಪಕ್ಕ ಸುಮಾರು 43 ಉದ್ಯಾನವನಗಳು ಇವೆ. ಇವುಗಳಲ್ಲಿ ಸುಮಾರು 28 ಉದ್ಯಾನವನಗಳನ್ನು ತಿ.ತಿ.ದೇ. ಉದ್ಯಾನವನ ವಿಭಾಗವೇ ಅಭಿವೃದ್ಧಿ ಮಾಡಿದೆ. ಈ ಉದ್ಯಾನವನಗಳಲ್ಲಿ ಪ್ರಧಾನವಾಗಿ ಚೆಂಡು ಹೂವು,ಸಲ್ವಿಯಾ, ಪೆಟಾನಿಯಾ, ಜೀನಿಯಾ ಎನ್ನುವ ಜಾತಿ ಹೂ ಗಿಡಗಳನ್ನು ಬೆಳೆಯಲು ಏರ್ಪಾಟು ಮಾಡುತ್ತಿದ್ದಾರೆ. ತಿರುಮಲೆಯಲ್ಲಿರುವ ಗಂಗಮ್ಮದೇವಾಲಯದ ಸಮೀಪದಲ್ಲಿ ಒಂದು ದೊಡ್ಡ ಉದ್ಯಾನವನವನ್ನು ಕೂಡ ಸ್ಥಾಪಿಸುತ್ತಿರುವುದು ನಮಗೆಲ್ಲ ತಿಳಿದ ವಿಷಯವೇ ಇದರಲ್ಲಿ ಸೇವಂತಿಗೆ ಕಣಗಲೆ, ಗುಲಾಬಿ, ಸಂಪಿಗೆ, ಮಲ್ಲಿಗೆ, ತುಳಸಿ,ಪನ್ನಿರು ಹೂ, ಕನಕಾಂಬರ ಮತ್ತು ಸಂಪಿಗೆ ಗಿಡಗಳನ್ನು ಬೆಳೆಸುತ್ತಿದ್ದಾರೆ. ಅದಲ್ಲದೆ ಈ ಉದ್ಯಾನವನದಿಂದ ಬರುವ ಹೂಗಳನ್ನು ಮತ್ತು ಎಲೆಗಳನ್ನು ಸ್ವಾಮಿಯವರ ಸೇವೆಗೆ ವಿನಿಯೋಗಿಸುವುದೇ ಒಂದು ಗಮನಾರ್ಹ ಸಂಗತಿಯಾಗಿದೆ. ವಿಶೇಷ ವೆಂದರೆ ಸ್ವಾಮಿಯವರ ಶಂಖ-ಚಕ್ರಗಳು, ಓಂಕಾರ, ಸ್ವಸ್ತಿಕ್‌ಗಳಂತಹ ವಿವಿಧ ಆಕೃತಿ ಗಳಲ್ಲಿ ಬೆಳೆದಿರುವ ಹೂಗಳ ಗಿಡಗಳು ಭಕ್ತರನ್ನು ಬಹಳ ಆಕರ್ಷಿಸುತ್ತವೆ.

ಸೇವೆಯೆಂಬುದು ಕೇವಲ ಎರಡು ಅಕ್ಷರಗಳ ಮಾತು. ಆದರೂ ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುತ್ತದೆ. ತಾನು ನಂಬಿದ ದೇವರ, ಗುರುಗಳ ಸೇವೆ ಮಾಡಿ ಇತಿಹಾಸ ಪ್ರಸಿದ್ಧರಾದವರು ಎಷ್ಟೋ ಜನ. ಹನುಮನು ರಾಮ ಪಾದವನ್ನು ಸೇವಿಸಿ ಭಕ್ತಿಯ ಪರಾಕಾಷ್ಠೆಯಾಗಿ ನಿಂತಿದ್ದಾನೆ. 14ವರ್ಷ ಕಣ್ಣಿನ ರೆಪ್ಪೆ ಮುಚ್ಚದೆ ಅಣ್ಣನ ಬೆನ್ನ ಹಿಂದೆಯೇ ನಿಂತ ಲಕ್ಷ್ಮಣನು ತಮ್ಮನೆಂದರೆ ಹೀಗಿರಬೇಕು ಎಂಬ ಘನತೆಯನ್ನು ಹೊಂದಿದನು. ಸಾವಿರಕ್ಕೂ ಹೆಚ್ಚು ಪದಗಳನ್ನು ರಚಿಸುವ ಮೂಲಕ ತಿರುಮಲೆ ಸಾರ್ವಭೌಮನಾದ ಶ್ರೀವೆಂಕಟೇಶ್ವರನನ್ನು ಸೇವಿಸಿದ ಅನ್ನಮಯ್ಯನು ಪದ ಕವಿತಾ ಪಿತಾಮಹನೆಂದು ಚಿರಕೀರ್ತಿಯನ್ನು ಹೊಂದಿದನು. ಇನ್ನು ಎಷ್ಟೋ ಮಹಾನುಭಾವರು ಪರಿಪೂರ್ಣವಾದ ಸೇವಾ ಭಾವನೆಯಿಂದ ಪರಮ ಪದವನ್ನು ಪಡೆದಿದ್ದಾರೆ. ಇವರೆಲ್ಲರ ಸ್ಪೂರ್ತಿಯಿಂದ ಅನುಕ್ಷಣವೂ ಭಗವಂತನ ಸೇವೆಯಲ್ಲಿ ನಿರತವಾಗಿದೆ ತಿರುಮಲೆ ತಿರುಪತಿ ದೇವಸ್ಥಾನ, ಭಕ್ತರ ಹೃದಯಗಳೇ ಭಗವಂತನ ನಿಜವಾದ ನಿವಾಸ ಸ್ಥಾನವಾಗಿದೆ. ವೇದಗಳು, ಉಪನಿಷತ್ತು ಗಳು, ಶಾಸ್ತ್ರಗಳು ಸಹ ವಿಷಯವನ್ನು ಮುಕ್ತ ಕಂಠದಿಂದ ಅಂಗೀರಿಸುತ್ತವೆ. ಈ ಎಲ್ಲಾ ಆಧಾರಗಳನ್ನು ಮಾರ್ಗದರ್ಶಿಯಾಗಿಸಿಕೊಂಡು ಭಕ್ತರ ಸೇವೆಗಾಗಿ ನಿರಂತರ ಶ್ರಮಿಸುತ್ತಿದೆ. ತಿ.ತಿ.ದೇ.,ಸೇವೆ ಮಾಡುವುದು ಎಂದರೆ ಕೇವಲ ನಮಸ್ಕರಿಸುವ ವ್ಯವಹಾರ ಅಲ್ಲ. ತ್ರಿಕರಣಶುದ್ಧಿಯಿಂದ ಪರಿಪೂರ್ಣವಾದ ಸಮರ್ಪಣಾ ಭಾವನೆಯನ್ನು ಪ್ರಕಟಿಸುವುದು. ಲೌಕಿಕವಾದ ಭಾವನೆಗಳನ್ನು ಬದಿಗೊತ್ತಿ, ನಿರ್ಮಲವಾದ ಮನಸ್ಸಿನಿಂದ ತನ್ನನ್ನು ತಾನು ಪರಲೋಕದ ವ್ಯಕ್ತಿಗೆ ಸಮರ್ಪಿಸಿಕೊಳ್ಳುವುದೇ ನಿಜವಾದ ಸೇವೆ ಅನಿಸಿಕೊಳ್ಳುತ್ತದೆ. ಇಂತಹ ಪರಿಪೂರ್ಣವಾದ ಸೇವಾ ಭಾವಕ್ಕೆ ಆಚರಣಾತ್ಮಕವಾದ ಅರ್ಥವನ್ನು ನೀಡುತ್ತದೆ ತಿರುಮಲೆ ತಿರುಪತಿ ದೇವಸ್ಥಾನ.

1) ಮಮ ಮದ್ಭಕ್ತ ಭಕ್ತೇಷು ಪ್ರೀತಿರಭ್ಯಧಿಕಾ ಭವೇತ್।
ತಸ್ಮಾತ್ ಮದ್ಭಕ್ತ ಭಕ್ತಾಶ್ಚ, ಪೂಜನೀಯಾಃ ವಿಶೇಷತಃ॥
2)ಸಿದ್ಧಿ ರ್ಭವತಿ ವಾನೇತಿ। ಸಂಶಯ್ಯೋ-ಚ್ಯುತ ಸೇವಿನಾಮ್।
ನ ಸಂಶಯ್ಯೋ-ಸ್ತಿ ತದ್ಭಕ್ತ ಪರಿಚರ್ಯ ರತಾತ್ಮನಾಮ್॥

ಮೇಲಿನ ಆಚರಣೆಗಳನ್ನು ತಪ್ಪದೆ ಅನುಸರಿಸುತ್ತ "ಭಕ್ತರ ಸೇವೆಯೇ ಭಗವಂತನ ಸೇವೆ"ಎಂದು ಭಾವಿಸಿ ಅವರ ಸೇವೆಯೇ ಪರಮಾರ್ಥವೆಂದು ಮಾಡುತ್ತಿದೆ. ಸ್ವಾಮಿಯು ತಮ್ಮನ್ನು ಕಣ್ತೆರೆದು ನೋಡುತ್ತಾನೆ ಎಂಬ ನಂಬಿಕೆಯಿಂದ ಎಷ್ಟೇ ಕಷ್ಟಗಳಿದ್ದರೂ ಬದಿಗೊತ್ತಿ ಬೆಟ್ಟಕ್ಕೆ ಬರುವ ಭಕ್ತರಿಗಿಂತ ಮಿಗಿಲಾದ ಭಕ್ತರು ಮತ್ತೊಬ್ಬರಿರುವುದಿಲ್ಲ. ಈ ಸತ್ಯವನ್ನು ತಿ.ತಿ. ದೇವಸ್ಥಾನವು ಎಂದೋ ಗ್ರಹಿಸಿದೆ. ತಿರುಪತಿಗೆ ಕಾಲಿಟ್ಟ ಕೂಡಲೇ ಮೊದಲು ಬೆಟ್ಟಕ್ಕೆ ಬಂದು ಸ್ವಾಮಿ ದರ್ಶನವನ್ನು ಮಾಡಿಕೊಂಡು ಇತರ ಕ್ಷೇತ್ರಗಳನ್ನು ದರ್ಶಿಸಿ,ಸ್ವಸ್ಥಾನಕ್ಕೆ ಪ್ರಯಾಣ ಮಾಡುವವರೆಗೂ ಅನುಕ್ಷಣ ಸೇವೆಯನ್ನು ನೀಡಲು ಪರಿಪೂರ್ಣವಾದ ಕಾರ್ಯ ಸೂಚಿಯನ್ನು ಸಿದ್ಧ ಪಡಿಸಿಕೊಂಡು ಕಾರ್ಯಗತಗೊಳಿಸುತ್ತಿದೆ.

# ಬನ್ನೇರುಘಟ್ಟದ ಚಂಪಕಧಾಮ ಸ್ವಾಮಿ ದೇವಾಲಯ

-ಕೆಂಗೇರಿ ಚಕ್ರಪಾಣಿ
94483 86886



ಬನ್ನೇರುಘಟ್ಟವು ಬೆಂಗಳೂರು ನಗರಕ್ಕೆ 19 ಕಿ.ಮೀ. ದೂರದಲ್ಲಿದ್ದು. ಆನೇಕಲ್ ತಾಲ್ಲೂಕಿಗೆ ಸೇರುವ ಒಂದು ಗ್ರಾಮ. ಇಲ್ಲಿ ದೊರೆತಿರುವ ಶಾಸನಗಳಿಂದ ಪ್ರಸ್ತುತ ಗ್ರಾಮಕ್ಕೆ ವನ್ನಿಯರಗಟ್ಟ, ವರದರಾಜಪುರ, ಬನ್ನೂರು ಎಂಬ ಹೆಸರುಗಳಿದ್ದುದು ತಿಳಿದು ಬರುವುದು. ಇಲ್ಲಿ ಬನ್ನಿ ವೃಕ್ಷವು ಅಧಿಕವಾಗಿದ್ದರಿಂದ ಮತ್ತು ಘಟ್ಟ ಪ್ರದೇಶದಲ್ಲಿರುವುದರಿಂದ ಬನ್ನೇರುಘಟ್ಟವಾಯಿತು ಎಂಬ ಅಭಿಪ್ರಾಯವಿದೆ.

## ಶ್ರೀ ಚಂಪಕಧಾಮಸ್ವಾಮಿ ದೇವಾಲಯ

ಬನ್ನೇರುಘಟ್ಟ ಹೊರ ವಲಯದಲ್ಲಿ ಒಂದು ಸಣ್ಣ ಗುಡ್ಡದ ಮೇಲೆ ಬಹಳ ಪ್ರಸಿದ್ಧವಾದ ಚಂಪಕಧಾಮಸ್ವಾಮಿ ದೇವಾಲಯವಿದೆ. ಹೊಯ್ಸಳರ ಶಾಸನಗಳಲ್ಲಿ ದಾಮೋದರ ಎಂದು ಕರೆದಿರುವ ಚಂಪಕಧಾಮ ಸ್ವಾಮಿಯು ಚಂಪಕ ಅಥವಾ ಸಂಪಿಗೆ ಹೂಗಳಿಂದ ಅರ್ಚಿತವಾಗಿದ್ದರಿಂದ ಈ ಹೆಸರು ಬಂದಿದೆ.ದೇವಾಲಯವನ್ನು ಪ್ರವೇಶಿಸಲು ಮೆಟ್ಟಿಲುಗಳಿವೆ ಹಾಗೂ ಅಂದವಾದ ಪ್ರವೇಶ ಗೋಪುರವಿದೆ. ಗೋಪುರದ ಭಿತ್ತಿಯ ಭಾಗವು ವಿಜಯನಗರ ಕಾಲದ್ದಾಗಿದ್ದು, ಗೋಪುರದ ತುದಿಯಲ್ಲಿ ನವ ಕಳಶಗಳಿವೆ.

ದೇವಾಲಯವು ಮುಖಮಂಟಪ, ನವರಂಗ, ಅಂತರಾಳ ಹಾಗೂ ಗರ್ಭಗೃಹಗಳನ್ನು ಹೊಂದಿವೆ. ಈ ದೇವಾಲಯದ ಬದಿಯಲ್ಲಿ ಲಕ್ಷ್ಮೀ ದೇವಿಯ ಗುಡಿಯಿದೆ. ಬನ್ನೇರುಘಟ್ಟದ ಚಂಪಕಧಾಮ ದೇವಾಲಯವು ನಮ್ಮ ನಾಡಿನ ಪ್ರಸಿದ್ಧ ಮೂರು ಘಟ್ಟಗಳಲ್ಲಿ ಒಂದು ಉಳಿದವು. ಆನೇಕಲ್ ತಾಲ್ಲೂಕಿನ ನಾರಾಯಣಘಟ್ಟ ಮತ್ತು ಕೆ.ಆರ್. ನಗರ ತಾಲ್ಲೂಕಿನ ಚುಂಚನಘಟ್ಟ. ಇಲ್ಲಿರುವ ಹೊಯ್ಸಳರ ದೊರೆ ರಾಮನಾಥನ ಶಾಸನವನ್ನು ಗಮನಿಸಿದರೆ ದೇವಾಲಯವು ಮೂಲತಃ ಹೊಯ್ಸಳರ ಕಾಲಕ್ಕೆ ಸೇರಿದ ಕಣಶಿಲೆಯ ಕಟ್ಟಡವಾಗಿದ್ದು. ವಿಜಯನಗರದರಸರ ಕಾಲದಲ್ಲಿ ಬದಲಾವಣೆಯನ್ನು ಕಂಡಿದೆ. ಇದಕ್ಕೆ ಪೂರಕವಾಗಿ ವಿಜಯನಗರ ಕಾಲದ ಶಾಸನಗಳು ಇಲ್ಲಿ ಹೇರಳವಾಗಿ ದೊರೆತಿವೆ. ಇಲ್ಲಿರುವ ಧ್ವಜಸ್ತಂಭವನ್ನು ವಿಜಯನಗರ ಕಾಲದಲ್ಲಿ ಮಹಾಮಂಡಳೇಶ್ವರ ತಿಮ್ಮಯ್ಯ ದೇವನು ಮಾಡಿಸಿರುವನು.ವಿಜಯನಗರದ ಅರಸು ವೀರಹರಿರಾಯನ ಕುಮಾರನು "ಬನ್ನೂರಘಟ್ಟದ ದಾಮೋದರ" ದೇವರ ಪೂಜಾ ಕಾರ್ಯಕ್ಕೆ ಹಲವಾರು ಹಳ್ಳಿಗಳ ದಾನ ಬಿಟ್ಟಿರುವ ದಾಖಲೆ ಇಲ್ಲಿನ ಶಾಸನದಲ್ಲಿ ದೊರೆಯುತ್ತದೆ. ಸಾಂದಾರ ಶೈಲಿಯ ಪ್ರದಕ್ಷಿಣಾಪಥವನ್ನು ಹೊಂದಿರುವ ದೇವಾಲಯದ ಗರ್ಭಗುಡಿಯಲ್ಲಿ ಶ್ರೀ ಭೂನೀಳಾ ಸಹಿತನಾದ ಚಂಪಕಧಾಮ ಸ್ವಾಮಿಯ ಅಂದವಾದ ಮೂರ್ತಿಯಿದೆ. ಈ ದೇವಾಲಯದ ಪ್ರವೇಶ ದ್ವಾರದ ಬದಿಯಲ್ಲಿ ಲಕ್ಷ್ಮೀ ದೇವಿಗಾಗಿ ಪ್ರತ್ಯೇಕ ಗುಡಿಯಿದೆ.

ಬನ್ನೇರುಘಟ್ಟದ ಚಂಪಕಧಾಮ ಸ್ವಾಮಿಯ ಬ್ರಹ್ಮರಥೋತ್ಸವವು ಫಾಲ್ಗುಣ ಮಾಸದ ಷಷ್ಠಿಯಲ್ಲಿ ಬರುವ ಅನುರಾಧಾ ನಕ್ಷತ್ರದಲ್ಲಿ ಬಹಳ ವಿಜೃಂಭಣೆಯಿಂದ ನಡೆಯುವುದು. ಉತ್ಸವಕ್ಕೆ ಸುತ್ತಮುತ್ತಲ್ಲಿನ ಪ್ರದೇಶ ಭಕ್ತರಲ್ಲದೆ. ನೆರೆಯ ರಾಜ್ಯ ತಮಿಳುನಾಡಿನಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವರು.

ಈ ದೇವಾಲಯದ ಹಿಂಬದಿಯಲ್ಲಿರುವ ಗುಡ್ಡದಲ್ಲಿ ಲಕ್ಷ್ಮೀನರಸಿಂಹನ ಸುಂದರ ಆಲಯವಿದೆ. ಬಹಳ ಚಿಕ್ಕದಿದ್ದ ದೇವಾಲಯವನ್ನು ಮೂಲ ಮೂರ್ತಿಯನ್ನು ಉಳಿಸಿಕೊಂಡು ನೂತನ ಶಿಲಾ ದೇವಾಲಯವನ್ನು ಭಕ್ತರು ನಿರ್ಮಿಸಿರುವರು. ಇಲ್ಲಿರುವ ಸ್ಥಳಪುರಾಣದ ಪ್ರಕಾರ ಬನ್ನೇರುಘಟ್ಟದಲ್ಲಿರುವ ಕಲ್ಯಾಣಿಯಲ್ಲಿ ಎರಡು ಲಕ್ಷ್ಮೀ ನರಸಿಂಹನ ವಿಗ್ರಹವು ದೊರೆತಿತಂತೆ. ಅವುಗಳಲ್ಲಿ ಒಂದನ್ನು ಬನ್ನೇರುಘಟ್ಟದಲ್ಲೂ ಮತ್ತೊಂದು ಮೂರ್ತಿಯನ್ನು ಬೆಂಗಳೂರಿನ ಬಳೇ ಪೇಟೆಯಲ್ಲಿ ಪ್ರತಿಷ್ಠಾಪಿಸಲಾಯಿತು. ಈಗಲೂ ಬಳೇಪೇಟೆಯಲ್ಲಿ ಸುಪ್ರಸಿದ್ಧ ನರಸಿಂಹ ದೇವಾಲಯವಿದ್ದು, ಬನ್ನೇರುಘಟ್ಟದ ಲಕ್ಷ್ಮಿನರಸಿಂಹಸ್ವಾಮಿಯಮೂರ್ತಿಯಂತೆಯೇ ಇದೆ.

## ಶ್ರೀ ಮಾರುತಿ ದೇವಾಲಯ

ಬನ್ನೇರುಘಟ್ಟದ ರಥಬೀದಿಯಲ್ಲಿ ಚಂಪಕಧಾಮಸ್ವಾಮಿ ದೇವಾಲಯದಿಂದ 200 ಮೀಟರ್ ದೂರದಲ್ಲಿ ಮಾರುತಿ ಮಂದಿರವಿದೆ. ಈ ಮಂದಿರದ ಎದುರಿಗಿರುವ ಅರಳಿಮರದ ಕೆಳಗೆ ಗಂಗರ ಕಾಲದ ಸುಮಾರು ಒಂಬತ್ತನೆಯ ಶತಮಾನಕ್ಕೆ ಸೇರುವ ಆತ್ಮಬಲಿದಾನದ ಆರು ಸ್ಮಾರಕಗಳಿವೆ.

**ಹೀಗೆ ಬನ್ನಿ :** ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟವು, ಬೆಂಗಳೂರು - ಆನೇಕಲ್ ರಸ್ತೆಯಲ್ಲಿ ಬೆಂಗಳೂರಿನಿಂದ 19 ಕಿ.ಮೀ. ದೂರದಲ್ಲಿದೆ.



# ಶ್ರೀಮನ್ ಮಾಧವತೀರ್ಥರು

- ಡಾ॥ ವಾದಿರಾಜ ವಿ. ಅಗ್ನಿಹೋತ್ರಿ
98867 52287

ಆಚಾರ್ಯ ಮಧ್ವರು ದ್ವೈತ ವೇದಾಂತವನ್ನು ಜಗತ್ತಿನೆಲ್ಲೆಡೆ ಪ್ರಸರಿಸಿ ಜ್ಞಾನದ ಬೆಳಕನ್ನು ನೀಡಿ ಸಜ್ಜನರಿಗೆ ಸನ್ಮಾರ್ಗ ತೋರಿದವರು. ಅವರ ಅನೇಕ ಶಿಷ್ಯ ಪ್ರಶಿಷ್ಯರೂ ಸಹ ಅದೇ ಮಾರ್ಗವನ್ನು ಅನುಸರಿಸಿ ಈ ಭೂಮಂಡಲವನ್ನು ಅಲಂಕರಿಸಿದರೆಂದು ಶ್ರೀಸುಮಧ್ವವಿಜಯದ ಹದಿನೈದನೆಯ ಸರ್ಗದಲ್ಲಿ;

ಮಧ್ವಪ್ರಶಿಷ್ಯಾಬಹವಃ ಶಿಷ್ಯಾಯೇಷಾಂ ಮುಹುಸ್ತಥಾ।
ಅಲಂಚಕ್ರುರಲಂ ಪೃಥ್ವೀಂ ಸರ್ವೇಸದ್ಗುಣಭೂಷಣಾಃ॥

ಎಂಬ ಶ್ಲೋಕದಲ್ಲಿ ಹೇಳಿದ್ದಾರೆ. ಆ ಶಿಷ್ಯರಲ್ಲಿ ಒಬ್ಬರು ಶ್ರೀಮನ್ ಮಾಧವ ತೀರ್ಥರು . ಇವರು ಪೀಠವನ್ನಾಳಿದ ಅವಧಿ ಕ್ರಿ.ಶ. 1333 ರಿಂದ 1350 ರ ವರೆಗಿನ ಹದಿನೇಳು ವರ್ಷಗಳು. ಇವರು ಪೂರ್ವಾಶ್ರಮದಲ್ಲಿ ವಿಷ್ಣು ಶಾಸ್ತ್ರಿಗಳೆಂದು ಪ್ರಸಿದ್ಧರಾಗಿದ್ದರು.(ಗುರುಚರ್ಯಾ ಎಂಬ ಗ್ರಂಥದಲ್ಲಿ

ತತಃ ಕರ್ಣಾಟಕಮಿತಿ ಶಬ್ದಿತಂ ಕೃಷ್ಣ ಶಾಸ್ತ್ರಿಣಂ।
ಸನ್ನ್ಯಸ್ಯ ಸೌಖ್ಯತೀರ್ಥಸ್ತು ಬ್ರಹ್ಮಚರ್ಯಸ್ಥಿತಂ ತದಾ।

ಶ್ರೀಮನ್ ಮಾಧವತೀರ್ಥೇತಿ.....॥ ಎಂಬ ಶ್ಲೋಕದಲ್ಲಿ ಕೃಷ್ಣ ಶಾಸ್ತ್ರಿಗಳೆಂದು ಇವರ ಹೆಸರನ್ನು ಉಲ್ಲೇಖಿಸಿದ್ದಾರೆ.) ಅವರಿಗೆ ಶ್ರೀನರಹರಿ ತೀರ್ಥರ ನಂತರ ಆಚಾರ್ಯಮಧ್ವರೇ ಸನ್ಯಾಸ ದೀಕ್ಷೆಯಿತ್ತು ಶ್ರೀ ಮಾಧವ ತೀರ್ಥರೆಂದು ನಾಮಕರಣ ಮಾಡಿದರು.ಇವರು ಉತ್ತರ ಕರ್ನಾಟಕ ಪ್ರಾಂತ್ಯಕ್ಕೆ ಸೇರಿದವರಾಗಿದ್ದರು. ಅತ್ಯುತ್ತಮ ವಿದ್ವಾಂಸರಾಗಿದ್ದ ಇವರು ಆಚಾರ್ಯಮಧ್ವರ ಮುಖದಿಂದಲೇ ಋಗ್ಭಾಷ್ಯಾದಿ ಗ್ರಂಥಗಳ ಅಧ್ಯಯನ ಮಾಡಿದರು. ಮಾಧವತೀರ್ಥರು ಪೀಠಾಧಿಪತಿಗಳಾಗಿದ್ದ ಅವಧಿಯಲ್ಲಿಯೇ ವಿಜಯನಗರ ಸಾಮ್ರಾಜ್ಯದಲ್ಲಿ ರಾಜಗುರುಗಳಾಗಿದ್ದ ವಿದ್ಯಾರಣ್ಯರು ಅನೇಕ ವಿದ್ವಾಂಸರ ಸಹಾಯದಿಂದ ನಾಲ್ಕು ವೇದಗಳಿಗೂ ಭಾಷ್ಯವನ್ನು ಬರೆಸುವ ಕಾರ್ಯವನ್ನು ಕೈಗೆತ್ತಿಕೊಂಡಿದ್ದರು. ಆದರೆ ಯಾವ ಫಲಾಪೇಕ್ಷೆ ಅಥವಾ ರಾಜಸಹಾಯವೂ ಇಲ್ಲದೇ ಮಾಧವತೀರ್ಥರೊಬ್ಬರೇ ಆಚಾರ್ಯಮಧ್ವರ ಋಗ್ಭಾಷ್ಯದ ಬೆಳಕಿನಲ್ಲಿ ನಾಲ್ಕು ವೇದಗಳಿಗೂ ಭಾಷ್ಯ ರಚಿಸಿ, ಅದರ ಪ್ರತಿ ಕೃತಿಯೊಂದನ್ನು ವಿದ್ಯಾರಣ್ಯರಿಗೆ ಕಳುಹಿಸಿಕೊಟ್ಟರಂತೆ.ಆದರೆ ಮಧ್ಯಸ್ಥರು ಆ ಕೃತಿಯನ್ನು ಅವಲೋಕಿಸಿ ಆ ಪಾಂಡಿತ್ಯಕ್ಕೆ ತಲೆದೂಗಿದರೂ ಸಹ ಮಾತ್ಸರ್ಯಕ್ಕೆ ಸಿಕ್ಕು ಆ ಕೃತಿಯನ್ನು ನಾಶ ಪಡಿಸಿದ್ದಲ್ಲದೇ ತಮ್ಮ ಕುಟಿಲೋಪಾಯ ಪ್ರಯೋಗಿಸಿ ಅವರನ್ನು ವಿಜಯನಗರದಿಂದ ದೂರವಿರುವಂತೆ ನೋಡಿಕೊಂಡರೆಂಬುದಾಗಿ ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ.ಅವರು ಯಾವುದೇ ರಾಜರ ಆಶ್ರಯವನ್ನು ಬಯಸದೇ ತೀರ್ಥಕ್ಷೇತ್ರ ಸಂಚಾರ ಮಾಡುತ್ತಾ ಅನೇಕ ದಿಗ್ದಂತಿ ಪಂಡಿತರನ್ನು ಪರಾಭವಗೊಳಿಸಿ ಮಧ್ವಸಿದ್ಧಾಂತದ ಪತಾಕೆಯನ್ನು ದಿಗಂತ ವಿಶ್ರಾಂತ ಗೊಳಿಸಿದರು. ಸಂಚಾರ ಕ್ರಮೇಣ ವಿದ್ವನ್ಮಣಿಗಳ ಗ್ರಾಮವೆನಿಸಿದ್ದ ಭೀಮಾ ನದೀ ತೀರದ "ಮಣೂರು" ಗ್ರಾಮಕ್ಕೆ ಬಂದರು. ಆ ಗ್ರಾಮದಲ್ಲಿಯೇ ಶ್ರೀಧ್ರುವ ರಾಜರಿಂದ ಪ್ರತಿಷ್ಠಿತನಾದ ಚೆನ್ನಕೇಶವನ ದರ್ಶನ ಮಾಡಿದರು. ಆ ಕಾಲದಲ್ಲಿ ಆ ಗ್ರಾಮದಲ್ಲಿ ಪದ್ಮರಾಜ ಪಂಡಿತರೆಂಬ ಜೈನವಿದ್ವಾಂಸರೊಬ್ಬರು ವಿಶ್ವವಿದ್ಯಾಲಯವನ್ನು ನಡೆಸುತ್ತಾ ಕುಲಪತಿಗಳಾಗಿದ್ದರು. ಅವರು ಮಾಧವತೀರ್ಥರ ವಾದವೈಖರಿ ಮತ್ತು ಪಾಂಡಿತ್ಯಕ್ಕೆ ಮನಸೋತಿದ್ದರು. ಒಮ್ಮೆ ಕಾರ್ಯನಿಮಿತ್ತ ವಿಜಯನಗರಕ್ಕೆ ಹೋಗಬೇಕಾಗಿ ಬಂದಾಗ ವಿಶ್ವವಿದ್ಯಾಲಯದ ಕಾರ್ಯ ಭಾರವನ್ನು ಅವರು ಮಾಧವತೀರ್ಥರಿಗೆ ನಿರ್ವಹಿಸಲು ಪ್ರಾರ್ಥಿಸಿದರೆಂದು ಇತಿಹಾಸ ಹೇಳುತ್ತದೆ.

ತಮ್ಮ ಉಪಾಸ್ಯ ಮೂರ್ತಿಯಾಗಿದ್ದ ವೀರರಾಮನಲ್ಲಿನ ವಿಶೇಷ ಸನ್ನಿಧಾನವಿದ್ದಿತು ಎಂಬುದು ಆ ಪ್ರತೀಕ ಪೆಟ್ಟಿಗೆಯಿಂದ ಹೊರಬರಲು ಯತ್ನಿಸಿದ್ದರಿಂದ ಜನರಿಗೆ ತಿಳಿದು ಬಂದಿತು. ಅಂತಹ ಆಪ್ರತೀಕವನ್ನು ತಮ್ಮಿಂದ ಸನ್ಯಾಸ ಸ್ವೀಕರಿಸಿದ್ದ ಮಧುಹರಿತೀರ್ಥರಿಗಿತ್ತು ಅನುಗ್ರಹಿಸಿದರು. ಅವರು ಇಂದಿನ ಕೋಲಾರದ ಸಮೀಪದ ಪಾಲಾರ್ ನದೀ ತೀರದಲ್ಲಿರುವ ಮಜ್ಜಿಗೆ ಹಳ್ಳಿ (ತಂಬೀಹಳ್ಳಿ) ಯಲ್ಲಿ ಮಠವನ್ನು ಪ್ರಾರಂಭಿಸಿದರು. ಆ ಪರಂಪರೆ ಇಂದಿಗೂ ಮುಂದುವರೆದಿದೆ.

ಇವರಿಂದ ರಚಿತವಾದ ವೇದಭಾಷ್ಯದ ಪ್ರತಿಯೊಂದು ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದಲ್ಲಿದೆ ಎಂಬುದಾಗಿ ಹಿಂದಿನ ಮಾಧವತೀರ್ಥ ಮಠದ ಪೀಠಾಧಿಪತಿಗಳಾಗಿದ್ದ ಶ್ರೀಶ್ರೀಪ್ರಸನ್ನಶೂರಮಾಧವತೀರ್ಥರು ಹೇಳುತ್ತಿದ್ದರು. ಅದರ ಪ್ರತಿಕೃತಿ ತರಿಸುವ ಪ್ರಯತ್ನವನ್ನೂ ಮಾಡುವುದಾಗಿ ಅನೇಕ ಸಭೆಗಳಲ್ಲಿ ಅವರು ಹೇಳುತ್ತಿದ್ದರು.

ಮಾಧವತೀರ್ಥರು ಆಚಾರ್ಯಮಧ್ವರಿಂದ ಪರಂಪರಾ ಪ್ರಾಪ್ತವಾದ ಪ್ರತಿಮಾದಿಗಳನ್ನು ಅಕ್ಷೋಭ್ಯತೀರ್ಥರಿಗೂ,ವೀರರಾಮ ಪ್ರತೀಕವನ್ನು ಮಧುಹರಿತೀರ್ಥರಿಗೂ ನೀಡಿ 1350 ನೇ ಇಸವಿ, ವಿಕೃತಿ ಸಂವತ್ಸರದ ಭಾದ್ರಪದ ಕೃಷ್ಣ ಅಮಾವಾಸ್ಯೆಯಂದು (ಮಹಾಲಯ ಅಮಾವಾಸ್ಯೆ) ಮಣೂರು ಗ್ರಾಮದ ಭೀಮಾನದೀ ತೀರದಲ್ಲಿ ವೃಂದಾವನಸ್ಥರಾದರು. ಅವರನ್ನು ಜನರು ಇಂದಿಗೂ ;

ಸಾಧಿತಾಖಿಲಸತ್ತತ್ವಂ ಬಾಧಿತಾಖಿಲದುರ್ಮತಂ।
ಬೋಧಿತಾಖಿಲಸನ್ಮಾರ್ಗಂ ಮಾಧವಾಖ್ಯ ಯತಿಂಭಜೇ॥

ಎಂದು ಸ್ತುತಿಸುತ್ತಾರೆ.

(ಈ ಲೇಖನಕ್ಕಾಗಿ ದಿ. ಕೊರಟಿ ಶ್ರೀನಿವಾಸರಾಯರು ಬರೆದ 'ಶ್ರೀಜಯತೀರ್ಥರು' ಎಂಬ ಕೃತಿಯನ್ನು ಆಧಾರವಾಗಿ ಬಳಸಿಕೊಳ್ಳಲಾಗಿದೆ.)

## ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರಿ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಭಕ್ತವತ್ಸಲ ಗೋವಿಂದಾ
ಭಾಗವತಪ್ರಿಯ ಗೋವಿಂದಾ
ನಿತ್ಯನಿರ್ಮಲ ಗೋವಿಂದಾ
ನೀಲಮೇಘಶ್ಯಾಮ ಗೋವಿಂದಾ
ಪುರಾಣಪುರುಷ ಗೋವಿಂದಾ
ಪುಂಡರೀಕಾಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ನಂದನಂದನ ಗೋವಿಂದಾ
ನವನೀತಚೋರ ಗೋವಿಂದಾ
ಪಶುಪಾಲಕ ಶ್ರೀ ಗೋವಿಂದಾ
ಪಾಪವಿಮೋಚನ ಗೋವಿಂದಾ
ದುಷ್ಟಸಂಹಾರ ಗೋವಿಂದಾ
ದುರಿತನಿವಾರಣ ಗೋವಿಂದಾ
ಶಿಷ್ಟಪರಿಪಾಲಕ ಗೋವಿಂದಾ
ಕಷ್ಟನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಜ್ರಮಕುಟಧರ ಗೋವಿಂದಾ
ವರಾಹಮೂರ್ತಿ ಗೋವಿಂದಾ
ಗೋಪೀಜನಲೋಲ ಗೋವಿಂದಾ
ಗೋವರ್ಧನೋದ್ಧಾರ ಗೋವಿಂದಾ
ದಶರಥನಂದನ ಗೋವಿಂದಾ
ದಶಮುಖಮರ್ದನ ಗೋವಿಂದಾ
ಪಕ್ಷಿವಾಹನ ಗೋವಿಂದಾ
ಪಾಂಡವಪ್ರಿಯ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಮತ್ಸ್ಯಕೂರ್ಮ ಗೋವಿಂದಾ
ಮಧುಸೂದನ ಹರಿ ಗೋವಿಂದಾ
ವರಾಹ ನರಸಿಂಹ ಗೋವಿಂದಾ
ವಾಮನ ಭೃಗುರಾಮ ಗೋವಿಂದಾ
ಬಲರಾಮಾನುಜ ಗೋವಿಂದಾ
ಬೌದ್ಧಕಲ್ಕಿಧರ ಗೋವಿಂದಾ
ವೇಣುಗಾನಪ್ರಿಯ ಗೋವಿಂದಾ
ವೆಂಕಟರಮಣ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸೀತಾನಾಯಕ ಗೋವಿಂದಾ
ಶ್ರಿತಪರಿಪಾಲಕ ಗೋವಿಂದಾ
ದರಿದ್ರಜನಪೋಷಕ ಗೋವಿಂದಾ
ಧರ್ಮಸಂಸ್ಥಾಪಕ ಗೋವಿಂದಾ
ಅನಾಥರಕ್ಷಕ ಗೋವಿಂದಾ
ಆಪತ್‌ಬಾಂಧವ ಗೋವಿಂದಾ

ಶರಣಾಗತವತ್ಸಲ ಗೋವಿಂದಾ
ಕರುಣಾಸಾಗರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಕಮಲದಳಾಕ್ಷ ಗೋವಿಂದಾ
ಕಾಮಿತಫಲದಾತ ಗೋವಿಂದಾ
ಪಾಪವಿನಾಶಕ ಗೋವಿಂದಾ
ಪಾಹಿಮುರಾರೆ ಗೋವಿಂದಾ
ಶ್ರೀಮುದ್ರಾಂಕಿತ ಗೋವಿಂದಾ
ಶ್ರೀವತ್ಸಾಂಕಿತ ಗೋವಿಂದಾ
ಧರಣೀನಾಯಕ ಗೋವಿಂದಾ
ದಿನಕರತೇಜ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಪದ್ಮಾವತಿಪ್ರಿಯ ಗೋವಿಂದಾ
ಪ್ರಸನ್ನಮೂರ್ತಿ ಗೋವಿಂದಾ
ಅಭಯಹಸ್ತಪ್ರದರ್ಶನ ಗೋವಿಂದಾ
ಮತ್ಸ್ಯಾವತಾರ ಗೋವಿಂದಾ
ಶಂಖಚಕ್ರಧರ ಗೋವಿಂದಾ
ಶಾರ್ಙ್ಗಗದಾಧರ ಗೋವಿಂದಾ
ವಿರಾಜಾತೀರ್ಥ ಗೋವಿಂದಾ
ವಿರೋಧಿಮರ್ದನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸಾಲಗ್ರಾಮಧರ ಗೋವಿಂದಾ
ಸಹಸ್ರನಾಮ ಗೋವಿಂದಾ
ಲಕ್ಷ್ಮೀವಲ್ಲಭ ಗೋವಿಂದಾ
ಲಕ್ಷ್ಮಣಾಗ್ರಜ ಗೋವಿಂದಾ
ಕಸ್ತೂರಿ ತಿಲಕ ಗೋವಿಂದಾ
ಕಾಂಚನಾಂಬರಧರ ಗೋವಿಂದಾ
ಗರುಡವಾಹನ ಗೋವಿಂದಾ
ಗಜರಾಜರಕ್ಷಕ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಾನರಸೇವಿತ ಗೋವಿಂದಾ
ವಾರಧಿಬಂಧನ ಗೋವಿಂದಾ
ಎಳುಬೆಟ್ಟದ ಒಡೆಯ ಗೋವಿಂದಾ
ಏಕಾಸ್ವರೂಪ ಗೋವಿಂದಾ
ಶ್ರೀರಾಮಕೃಷ್ಣ ಗೋವಿಂದಾ
ರಘುಕುಲನಂದನ ಗೋವಿಂದಾ
ಪ್ರತ್ಯಕ್ಷದೇವ ಗೋವಿಂದಾ
ಪರಮದಯಾಕರ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ವಜ್ರಕವಚಧರ ಗೋವಿಂದಾ
ವೈಜಯಂತಿಮಾಲ ಗೋವಿಂದಾ

ಬಡ್ಡಿಯಕಾಸಿನ ಗೋವಿಂದಾ
ವಸುದೇವತನಯ ಗೋವಿಂದಾ
ಬಿಲ್ವಪತ್ರಾರ್ಚಿತ ಗೋವಿಂದಾ
ಭಿಕ್ಷುಕ ಸಂಸ್ತುತ ಗೋವಿಂದಾ
ಸ್ತ್ರೀಪುಂರೂಪ ಗೋವಿಂದಾ
ಶಿವಕೇಶವಮೂರ್ತಿ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಬ್ರಹ್ಮಾಂಡರೂಪ ಗೋವಿಂದಾ
ಭಕ್ತ ರಕ್ಷಕ ಗೋವಿಂದಾ
ನಿತ್ಯಕಲ್ಯಾಣ ಗೋವಿಂದಾ
ನೀರಜನಾಭ ಗೋವಿಂದಾ
ಹಾಥೀರಾಮಪ್ರಿಯ ಗೋವಿಂದಾ
ಹರಿಸರ್ವೋತ್ತಮ ಗೋವಿಂದಾ
ಜನಾರ್ದನಮೂರ್ತಿ ಗೋವಿಂದಾ
ಜಗತ್ಸಾಕ್ಷಿರೂಪ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಅಭಿಷೇಕಪ್ರಿಯ ಗೋವಿಂದಾ
ಆಪನ್ನಿವಾರಣ ಗೋವಿಂದಾ
ರತ್ನಕಿರೀಟ ಗೋವಿಂದಾ
ರಾಮಾನುಜನುತ ಗೋವಿಂದಾ
ಸ್ವಯಂಪ್ರಕಾಶ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ
ನಿತ್ಯಶುಭಪ್ರದ ಗೋವಿಂದಾ
ನಿಖಿಲಲೋಕೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಆನಂದರೂಪ ಗೋವಿಂದಾ
ಆದ್ಯಂತರಹಿತ ಗೋವಿಂದಾ
ಇಹಪರದಾಯಕ ಗೋವಿಂದಾ
ಇಭರಾಜರಕ್ಷಕ ಗೋವಿಂದಾ
ಪರಮದಯಾಳೋ ಗೋವಿಂದಾ
ಪದ್ಮನಾಭ ಹರಿ ಗೋವಿಂದಾ
ತಿರುಮಲೆವಾಸ ಗೋವಿಂದಾ
ತುಲಸೀವನಮಾಲ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಶೇಷಾದ್ರಿನಿಲಯ ಗೋವಿಂದಾ
ಶೇಷಶಾಯಿಯೆ ಗೋವಿಂದಾ
ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸರ್ವೇ ಜನಾ ಸುಖಿನೋಭವಂತು

# ಚಾರು-ಭಾಷಿಣಿ ಶಬರಿ

- ಡಾ॥ ವಾಣಿಶ್ರೀ ಬಿ.ಎಂ.
94803 22475

ಶ್ರೀರಾಮಾಯಣ, ಮಹಾಭಾರತ ಕಾವ್ಯಗಳು ಭಾರತೀಯರ ಬದುಕಿನೊಡನೆ ಅವಿನಾಭಾವ ಸಂಬಂಧ ಹೊಂದಿವೆ. ಆದಿ ಕಾವ್ಯ ರಾಮಾಯಣವನ್ನು ವಾಲ್ಮೀಕಿ ಮಹರ್ಷಿಗಳು ಆ ಪಾತ್ರಗಳ ಸಮಕಾಲೀನರಾಗಿದ್ದು ತಮ್ಮೆದುರು ನಡೆದ ಜೀವನ ದರ್ಶನವನ್ನು ಕಾವ್ಯ ರೂಪಕವಾಗಿಸಿದ್ದಾರೆ. ಕ್ರೌಂಚ ಮಿಥುನದ ಶೋಕ ಪ್ರಸಂಗದ ಸಂದರ್ಭದಲ್ಲಿ ಈ ಕಾವ್ಯ ಮೊದಲಾಯಿತು. ಈ ಕಾವ್ಯವು ಜನರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಜೀವನದಿ. ಇದೊಂದು ಆದರ್ಶಗಳ ಕಾವ್ಯ. ಮಗನಾಗಿ,ರಾಜನಾಗಿ ಶ್ರೀರಾಮ, ಪತಿವ್ರತೆಯಾಗಿ ಸೀತೆ, ಭ್ರಾತೃ ಪ್ರೇಮಕ್ಕೆ ಲಕ್ಷ್ಮಣ,ಭರತ, ಶತೃಘ್ನರು ಆದರ್ಶವಾಗಿ ನಿಲ್ಲುತ್ತಾರೆ. ಭಕ್ತನಾಗಿ ಆಂಜನೇಯ, ಸಖನಾಗಿ ಸುಗ್ರೀವ, ಇನ್ನಿತರ ಪಾತ್ರಗಳೂ ತಮ್ಮದೇ ಆದ ರೀತಿಯ ಆದರ್ಶಗಳಿಗೆ ಸಾಕಾರ ವಾಗಿದ್ದಾರೆ. ಸಾಮಾನ್ಯ ಮನುಷ್ಯರಂತೆ ಬದುಕಿ ಪರಮ ಆದರ್ಶಗಳಿಗೆ ಶ್ರೇಷ್ಠ ಉದಾಹರಣೆಯಾಗಿ ನಿಲ್ಲುವ ಪಾತ್ರಗಳ ದಿವ್ಯಗಾಥೆ ಇದಾಗಿದೆ.

ಈ ಮಹಾಕಾವ್ಯದಲ್ಲಿ ಬರುವ ಶಬರಿಯ ಪಾತ್ರ ಚಿಕ್ಕದಾದರೂ ಚೊಕ್ಕವಾದ ಹಾಗೂ ಮಹತ್ವಪೂರ್ಣವಾದ ಪಾತ್ರ. ಪ್ರತಿಲೋಮ ವಿವಾಹದ ನಂತರ ಅದರಲ್ಲೂ ಕ್ಷತ್ರಿಯ ಸ್ತ್ರೀ ಯರಲ್ಲಿ ವೈಶ್ಯ ಪುರುಷನಿಂದ ಹುಟ್ಟಿದ ಸಂತಾನಕ್ಕೆ ಶಬರರು ಎನ್ನುತ್ತಿದ್ದರು. ಈಕೆಯ ಮೂಲ ಹೆಸರು ರಾಮಾಯಣದಲ್ಲಿ ತಿಳಿದು ಬರುವುದಿಲ್ಲ. ಒಬ್ಬ ಅಪ್ಸರೆಯು ತಾನು ಇಂದ್ರಾಣಿ ಶಚೀದೇವಿಗಿಂತ ಸುಂದರಿ ಎಂದು ದೇವೇಂದ್ರನೆದುರು ದರ್ಪ ತೋರಿದ್ದಕ್ಕೆ ಶಚೀದೇವಿ ಅವಳನ್ನು ಬೇಡತಿಯಾಗಿ ಹುಟ್ಟು ಎಂದು ಶಪಿಸಿದಳು. ಬೇಡತಿಯಾಗಿ ಹುಟ್ಟಿದ್ದರೂ ಪೂರ್ವ ಜನ್ಮದ ವಾಸನೆಯು ಅವಳಲ್ಲಿ ಸದ್ಗುಣಗಳನ್ನು ಪ್ರೇರೇಪಿಸಿತ್ತು. ಮುಂದೆ ಶ್ರೀರಾಮನು ಅವಳಿಗೆ ಶಾಪ ವಿಮೋಚನೆ ಮಾಡಿದ.



ಇವರು ಜೇನು, ಹಣ್ಣುಗಳನ್ನು ಕಾಡಿನಿಂದ ತಂದು ಮಾರುವ ವೃತ್ತಿಯವರು. ಶಬರಿ ಇದ್ದದ್ದು ಬಳ್ಳಾರಿ ಪ್ರಾಂತ್ಯದ ಕಿಷ್ಕಿಂಧೆಯ ಬಳಿಯ ಮತಂಗಾಶ್ರಮವಿದ್ದ (ಹೇಮಕೂಟ ಪರ್ವತದ ಬೆಟ್ಟದಲ್ಲಿ) ಮತಂಗ ಮಹರ್ಷಿಗಳು ಕಾಲವಾದ ನಂತರ ಅವರಿದ್ದ ಗುಹೆಯಲ್ಲಿ ಇವಳ ವಾಸ. ವಾಲ್ಮೀಕಿ ಮಹರ್ಷಿಗಳು ಶಬರಿಯನ್ನು ಸಿದ್ಧಿ, ಸಂಶಿತವ್ರತಾ, ಚಾರುಭಾಷಿಣಿ, ತಾಪಸೀ, ವೃದ್ಧಾ, ಪರಿಚಾರಿಣೀ, ಜಟಿಲಾ, ಚೀರ ಕೃಷ್ಣಾಜಿನಾಂಬರಾ ಎಂದೆಲ್ಲಾ ಕರೆದಿದ್ದಾರೆ. ಶಬರಿ ಗುರುವನ್ನು ಪರದೈವವೆಂದು ಚಿಂತಿಸಿ, ಆಚಾರ್ಯ ಮತಂಗ ಮಹರ್ಷಿಗಳನ್ನು ಆಶ್ರಯಿಸಿ ಗುರುಶುಶ್ರೂಷಾ ಪರಾಯಣೆಯಾಗಿದ್ದಳು. ಅವಳಿಗೆ ಜೀವನದಲ್ಲಿ ರಾಮಲಕ್ಷ್ಮಣರನ್ನು ಸಂದರ್ಶಿಸಿ ಅತಿಥ್ಯ ಮಾಡುವುದರ ಹೊರತು ಬೇರೆ ಯಾವ ಕರ್ತ ವ್ಯವೂ ಇರಲಿಲ್ಲ. ಗುರುವಿನಲ್ಲಿ ದೈವವನ್ನು ಕಂಡ ಶಬರಿ ಗುರುವಿನೊಡನೆ ತಾನೂ ದೇಹತ್ಯಾಗ ಮಾಡಲು ಸಿದ್ಧಳಾದಳು. ಗುರುವಾಜ್ಞೆಯಿಂದ ಆ ಪ್ರಯತ್ನವನ್ನು ಕೈ ಬಿಟ್ಟಳು. ರಾಮ ಲಕ್ಷ್ಮಣರ ನಿರೀಕ್ಷೆಯಲ್ಲಿ ಗುರು ವಿರಹದಿಂದ ನೊಂದು ಬದುಕು ಸಾಗಿಸಿದಳು.ರಾಮನ ದರ್ಶನಾಕಾಂಕ್ಷೆಗಿಂತಲೂ ಗುರುಗಳ ಅನುಜ್ಞೆ ಅವಳನ್ನು ಬಂಧಿಸಿತ್ತು.

ಶಬರಿಗೆ ಮತಂಗರ ಸೇವೆ ಸ್ವರ್ಗ ಸಮಾನವಾಗಿತ್ತು. ಗುರು ಮತಂಗರನ್ನು 'ಧರ್ಮಜ್ಞ' ರೆಂದು 'ಮಹಾಭಾಗ'ರೆಂದು ಶಬರಿ ವರ್ಣಿಸುತ್ತಾಳೆ. ಗುರುಗಳ ಮಾತಿನಂತೆ ಶ್ರೀರಾಮನ ದರ್ಶನವಾಯಿತು. ರಾಮ ಅವಳಲ್ಲಿಗೆ ಬಂದಾಗ ಅವಳನ್ನು ಕಂಡೊಡನೆ ಅವಳ ಯೋಗ್ಯತೆ ರಾಮನಿಗೆ ಅರಿವಾಯಿತು. ಆಶ್ರಮದ ಪರಿಸರ ಅಚ್ಚುಕಟ್ಟು, ಸ್ವಚ್ಛತೆ, ದಿವ್ಯತೆ ಮನೋಹರ ವಾದ ಶಾಂತ ಪರಿಸರ ಮೊದಲಾದವುಗಳಿಂದ ರಾಮನು ಆನಂದಿತನಾದನು. ವೃದ್ಧ



## ಧ್ವಜಸ್ತಂಭ ಮಂಟಪ

ಪ್ರತಿಮಾ ಮಂಟಪ ಮತ್ತು ರಂಗನಾಯಕ ಮಂಟಪದ ಮಧ್ಯೆ ಒಂದಷ್ಟು ವಿಶಾಲವಾದ ಸ್ಥಳವಿದೆ. ಅದರ ಮಧ್ಯದಲ್ಲೇ ಚಿನ್ನದ ಹೊಳಪಿನಿಂದ ಹೊಳೆಯುತ್ತಿರುವ ಗರುಡಗಂಬವಿದೆ. ಈ ಧ್ವಜಸ್ಥಂಭ ಮಂಟಪವು ಇಪ್ಪತ್ತು ಶಿಲಾಸ್ಥಂಬಗಳಿಂದ ಕಟ್ಟಲ್ಪಟ್ಟಿರುವ ಪ್ರಾಂಗಣವಾಗಿದೆ. ಮೂರು ದಿಕ್ಕಿನಲ್ಲೂ ಕಬ್ಬಿಣದ ಸರಳುಗಳನ್ನು ಉಪಯೋಗಿಸಿ ಮಾಡಿದ ಬೇಲಿಯಿದೆ. ಗರುಡಗಂಬದ ಪೂರ್ವಕ್ಕೆ ಅಂದರೆ ಹೆಬ್ಬಾಗಿಲಿನಿಂದ ಒಳಗೆ ಹೋಗುವಾಗ ಗರುಡಗಂಬದ ಮುಂದೆಯೇ ಬಲಿ ಪೀಠ ವಿದೆ. ಈಶಾನ್ಯ ದಿಕ್ಕಿನಲ್ಲಿ "ಕ್ಷೇತ್ರಪಾಲಕಶಿಲಾ" ಎಂಬ ಹೆಸರಿನ ಕಲ್ಲೊಂದಿದೆ.

ಳಾದ ಶಬರಿ ರಾಮಲಕ್ಷ್ಮಣರನ್ನು ಕಂಡೊಡನೆ ಅವರ ಪಾದಗಳಿಗೆ ನಮಸ್ಕರಿಸಿದಳು. ರಾಮ ಅವಳನ್ನು ಕಂಡು "ನಿನ್ನ ತಪಸ್ಸು ಹೇಗಿದೆ, ಗುರು ಸೇವೆ ಸಫಲವಾಯಿತೇ'' ಎನ್ನುತ್ತಾನೆ. ತಪಸ್ಸು, ಇಂದ್ರಿಯ ನಿಗ್ರಹಗಳನ್ನು ಗುರಿಯಾಗಿಸಿಕೊಂಡ ತಪೋಧನೆಯನ್ನು ಉಚಿತವಾದ ರೀತಿಯಲ್ಲಿ ಮಾತನಾಡಿಸುತ್ತಾನೆ.

ಶಬರಿ ಶ್ರೀರಾಮನನ್ನು ಯಥೋಚಿತವಾಗಿ ಸತ್ಕರಿಸುತ್ತಾಳೆ.

ಮಾಯಾ ತು ವಿವಿಧಂ ವನ್ಯಂ ಸಂಚಿತಂ ಪುರುಷರ್ಷಭ।
ತವಾರ್ಥೇ ಪುರುಷವ್ಯಾಘ್ರ ಪಂಪಾಯಾಸ್ತೀರ ಸಂಭವಂ॥

ಎಂದು ಪಂಪಾ ತೀರದಲ್ಲಿ ಬೆಳೆದ ನಾನಾ ರೀತಿಯ ಕಾಡು ಹಣ್ಣುಗಳನ್ನು ತಂದು ನೀಡುತ್ತಾಳೆ. ಮೂಲ ರಾಮಾಯಣದಲ್ಲಿ ಶಬರಿ ಎಂಜಲು ಹಣ್ಣನ್ನು ಕೊಟ್ಟ ಪ್ರಸಂಗವಿಲ್ಲ. ಅವಳ ಸುಸಂಸ್ಕೃತ ನಡುವಳಿಕೆ ಇದಕ್ಕೆ ವಿರುದ್ಧವಾದುದು. ರಾಮ ಬಂದೊಡನೆ ಅವರನ್ನು ಸ್ವಾಗತಿಸಿ ಆಸನ,ಅರ್ಘ್ಯ, ಪಾದ್ಯ, ಇತ್ಯಾದಿ ಉಪಚಾರ ಮಾಡಿದವಳಿಗೆ, ಅಂತಹ ಸಂಸ್ಕಾರವಂತಳಿಗೆ ಪುರುಷೋತ್ತಮನಾದ ರಾಮನಿಗೆ ಎಂಜಲು ಕೊಡಲು ಸಾಧ್ಯವೆ? ಹಾಗಾಗಿ ಇದು ಪ್ರಕ್ಷೇಪ ಎಂಬುದು ವಿದ್ವಾಂಸರ ಅಭಿಪ್ರಾಯ.

ಶಬರ ಜಾತಿಯವಳಾದ ಶಬರಿಯು ವೇದಾಧಿಕಾರವಿಲ್ಲದಿದ್ದರೂ ಕೇವಲ ಗುರುನಿಷ್ಠೆಯಿಂದ ಸದ್ಗತಿ ಹೊಂದಿದಳು. ಮೋಕ್ಷದಾತನಾದ ಶ್ರೀರಾಮನು ಮೋಕ್ಷ ಕೊಡುವೆನೆಂದರೂ ಅವಳು ಗುರುಪಾದ ಸೇರಲು ಬಯಸಿದಳು. ತಾನೇ ತನಗಾಗಿ ಚಿತೆ ಸಿದ್ಧ ಮಾಡಿಕೊಂಡು ಅಗ್ನಿ ಸ್ಪರ್ಶ ಮಾಡಿ ಹತ್ತಿ ಕುಳಿತು ದಗ್ಧಳಾಗಿ ಹೋದಳು. ದಹಿಸಲ್ಪಟ್ಟ ಅವಳ ಶರೀರದಿಂದ ದಿವ್ಯಾ ಕೃತಿಯು ಮೇಲೆದ್ದು ಆ ಪರಿಸರವನ್ನೆಲ್ಲಾ ಬೆಳಗುತ್ತಾ ಭಗವಂತನ ಸಾನಿಧ್ಯ ಸೇರಿದಳು.

ಶಬರಿ ಗುರುಗಳ ಅಣತಿಯಂತೆ ರಾಮ ಬರುವನೆಂದು ತಪಸ್ಸಿನಂತೆ ದಾರಿ ಕಾಯ್ದಳು. ಗುರುನಿಷ್ಠೆ ಶಬರಿಗೆ ಶಾಸ್ತ್ರಾಭ್ಯಾಸದ ಫಲ ನೀಡಿತು. ಶಬರಿಗೆ ಮತಂಗರ ಸೇವೆ ಸ್ವರ್ಗದ್ವಾರವಾಯಿತು. ಗುರು ಭಕ್ತಿಯ ಮಹತ್ವವನ್ನು ಹಾಗೂ ಮೋಕ್ಷ ಸಾಧನೆಗೆ ಜಾತಿ ಅಡ್ಡ ಬರುವುದಿಲ್ಲವೆಂಬ ವಿಚಾರವನ್ನು ಶಬರಿಯ ನೆವದಿಂದ ರಾಮಾಯಣ ಬೋಧಿಸುತ್ತದೆ.



### ರಸಪ್ರಶ್ನೆಗಳು

**ಆಗಸ್ಟ್ 2023 ತಿಂಗಳ ರಸಪ್ರಶ್ನೆಯ ಉತ್ತರಗಳು**

1. ಕೃತ್ತಿಕಾ ನಕ್ಷತ್ರ
2. ಪಾರ್ವತಿ
3. ಶ್ರಾವಣ ಮಾಸ
4. ಪುರುಷೋತ್ತಮ ಮಾಸ
5. ವಾದಿರಾಜ ಯತಿಗಳು
6. ಪತ್ನಿಯ ಮಾತುಗಳಿಂದ
7. ಫಾಲ್ಗುಣ ಪಂಚಮಿಯಂದು
8. ಹೆಳವನಕಟ್ಟೆ ಗಿರಿಯಮ್ಮ
9. ವರಮಹಾಲಕ್ಷ್ಮಿ
10. ಯಜ್ಞೋಪವೀತ
11. ತಿರುವಲ್ಲಾ
12. ತಿರುಕ್ಕುಡಂದೈ
13. ವಿಷ್ಣು
14. ಸಜ್ಜನರ ಸ್ನೇಹ
15. ಏಕ ಚಕ್ರಪುರ

**ಎಲ್ಲ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟವರು**

**ತೇಜಸ್ವಿನಿ ಎ.ಎಂ**

**52202202316**

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ

ತೇನ ದೇವಾ ಅಜಯಂತ ಸಾಧ್ಯಾ ಋಷ್ಯಯಶ್ಚ ಯೇ ॥

ದೇವತೆಗಳು, ಸಾಧ್ಯರು ಹಾಗೂ ಋಷಿಗಳು ಸರ್ವಪ್ರಥಮ ಹುಟ್ಟಿದರು. ಆ ಯಜ್ಞ ಪುರುಷನಿಗೆ ದರ್ಬೆಗಳ ಮೇಲೆ ಅಭಿಷೇಕ ಮಾಡಿದರು. ಅದರಿಂದಲೇ ಅವನ ಯಜನವನ್ನು ಮಾಡಿದರು.



# ಪರಮ ಪುರುಷ ಶ್ರೀ ವಿಷ್ಣು ಸ್ತವನ

- ಮೂರ್ತಿ ರಾಮನಾಥಪುರ
90083 35689

ಯತ್ಪುರುಷಂ ವ್ಯದಧುಃ। ಕತಿಧಾ ವ್ಯಕಲ್ಪಯನ್।

ಮುಖಂಕಿಮಸ್ಯ ಕೌಬಾಹೂ।ಕಾವೂರೂಪಾದಾವುಚ್ಯೇತೆ॥

ಪುರುಷನ ವಿಭಜನೆಯಾದಾಗ ಅವನಲ್ಲಿ ಅದೆಷ್ಟು ವಿಕಲ್ಪನೆಗಳಾದುವು? ಅವನ ಮುಖ ಹೇಗಿತ್ತು? ಅವನ ಬಾಹುಗಳು ಏನಾಗಿದ್ದವು? ಅವನ ಎದೆ ಹೇಗಿತ್ತು? ಅವನ ಕಾಲುಗಳು ಏನನ್ನು ಹೇಳುತ್ತವೆ?

ಬ್ರಾಹ್ಮಣೋಽಸ್ಯ ಮುಖಮಾಸೀತ್। ಬಾಹೂ ರಾಜನ್ಯಃ ಕೃತಃ।

ಊರೂ ತದಸ್ಯ ಯದ್ವೈಶ್ಯಃ -ಪದ್ಭ್ಯಾಗ್ಂಶೂದ್ರೋ ಅಜಾಯತ॥

- ಬ್ರಾಹ್ಮಣ ಇವನ ಮುಖವಾಗಿದ್ದ (ಮುಖದಿಂದ ಬ್ರಾಹ್ಮಣ ಹುಟ್ಟಿದ),ಎರಡೂ ಭುಜಗಳೇ ಕ್ಷತ್ರಿಯರು, ಈತನ ಎರಡೂ ಜಂಘೆಗಳು ವೈಶ್ಯರು ಹಾಗೂ ಎರಡೂ ಕಾಲುಗಳು ಶೂದ್ರರು.

ಚಂದ್ರಮಾ ಮನಸೋ ಜಾತಃ-ಚಕ್ಷೋಸ್ಸೂರ್ಯೋಜಾಯತ।

ಶ್ರೋಕ್ರಾದ್ವಾಯುಶ್ಚ ಪ್ರಾಣಾಶ್ಚ -ಮುಖಾದಗ್ನಿರಜಾಯುತ ॥

ಈ ಪರಮ ಪುರುಷನ ಮನಸ್ಸಿನಿಂದ ಚಂದ್ರಹುಟ್ಟಿದ. ಕಣ್ಣುಗಳಿಂದ ಸೂರ್ಯ ಹುಟ್ಟಿದ ಕಿವಿಗಳಿಂದ ವಾಯುವೂ ಮತ್ತು ಪ್ರಾಣವೂ ಹಾಗೂ ಮುಖದಿಂದ ಅಗ್ನಿ ಉತ್ಪನ್ನವಾಯಿತು.

ನಾಭ್ಯಾ ಆಸೀದಂತರಿಕ್ಷಮ್ ಶೀರ್ಷ್ಣೋ ದ್ಯೌಃಸಮವರ್ತತ।

ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತಥಾ ಲೋಕಾಗಂ
ಅಕಲ್ಪಯನ್ ॥

ಆ ಪರಮಪುರುಷನ ನಾಭಿಯಿಂದ ಅಂತರಿಕ್ಷಲೋಕ ಉತ್ಪನ್ನವಾಯಿತು. ತಲೆಯಿಂದ (ಮಸ್ತಕ) ಸ್ವರ್ಗವೂ, ಕಾಲುಗಳಿಂದ ಪೃಥ್ವಿಯೂ, ಕವಿಗಳಿಂದ ದಿಕ್ಕುಗಳೂ ಹುಟ್ಟಿದವು. ಈ ರೀತಿ ಸಮಸ್ತ ಲೋಕಗಳೆಲ್ಲವೂ ಆ ಪುರುಷನಲ್ಲಿಯೇ ಕಲ್ಪಿತವಾದುವು.

ಯತ್ಪುರುಷೇಣ ಹವಿಷಾ ದೇವಾ ಯಜ್ಞ ಮತನ್ವತ।

ವಸಂತೋ ಽಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ

ಯಾವ ಪುರುಷರೂಪ ಹವಿಕ್ಷ್ಯದಿಂದ ದೇವತೆಗಳು ಯಜ್ಞಗಳನ್ನು ಹರಡಿದರೋ,ವಸಂತನೇ ಅದರ ತುಪ್ಪವಾಗಿದ್ದ ಗೀಷ್ಮನೇ ಕಾಷ್ಠವಾಗಿದ್ದ ಹಾಗೂ ಶರತ್ (ದ್) ಹವಿಯಾಗಿತ್ತು.

ಸಪ್ತಾಸ್ಯಾಸನ್ ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ।

ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಮ್॥

ದೇವತೆಗಳು ಯಜ್ಞ ಮಾಡುವ ಸಂದರ್ಭದಲ್ಲಿ (ಸಂಕಲ್ಪದಿಂದ ಪುರುಷರೂಪ ಪಶುವನ್ನು ಬಂಧಿಸಿದರು. ಆಗ ಏಳು ಸಮುದ್ರಗಳು ಇದರ ಪರಿಧಿ (ಮೇಘಲೆಗಳು)ಗಳಾಗಿದ್ದವು. ಇಪ್ಪತ್ತೊಂದು ರೀತಿಯ ಛಂದಸ್ಸುಗಳ (ಗಾಯತ್ರೀ,ಅತಿಜಗತೀ,ಮತ್ತು ಕೃತಿಗಳಲ್ಲಿ ಪ್ರತಿಯೊಂದರ ಏಳೇಳು ರೀತಿಯ) ಸಮಿಧೆಗಳು ಉಂಟಾದವು.



ಯಜ್ಞೇನ ಯಜ್ಞಮಯಜಂತ ದೇವಾಃನಿ
ಧರ್ಮಾಣಿ ಪ್ರಥಮಾನ್ಯಾಸನ್।
ತೇ ಹ ನಾಕಂ ಮಹಿಮಾನಸ್ಸಃ ಸಚಂತೆ ಯತ್ರ ಪೂರ್ವೇ
ಸಂಧ್ಯಾಃ ಸಂತಿದೇವಾಃ ॥

ದೇವತೆಗಳು (ಹಿಂದೆ ಹೇಳಿದ ರೀತಿ) ಯಜ್ಞದ ಮೂಲಕ ಯಜ್ಞ ಸ್ವರೂಪ ಪರಮಪುರುಷನ ಯಜನವನ್ನು (ಆರಾಧನೆ) ಮಾಡಿದರು. ಈ ಯಜ್ಞದಿಂದ ಸರ್ವಪ್ರಥಮ ಧರ್ಮ ಹುಟ್ಟಿತು. ಆ ಧರ್ಮಾಚರಣೆಯಿಂದ ಆ ದೇವತೆಗಳು ಮಹಾಮಹಿಮೆಶಾಲಿ ಗಳಾಗಿ ಸ್ವರ್ಗಲೋಕವನ್ನು ಅನುಭವಿಸುತ್ತಾರೆ. ಅಲ್ಲಿ ಪ್ರಾಚೀನರಾದ ಸಾಧ್ಯ ದೇವತೆಗಳು ವಾಸ ಮಾಡುತ್ತಾರೆ. ಹಾಗಾಗಿಯೇ ನಾವೆಲ್ಲರೂ ಸರ್ವವ್ಯಾಪಿಯಾದ ಜಡ-ಚೈತನ್ಯಾತ್ಮಕ ಸ್ವರೂಪ ವಿರಾಟ್ ಪುರುಷನಿಗೆ ಕೈ ಮುಗಿದು ನಮಸ್ಕರಿಸಿ ಸ್ತುತಿ ಮಾಡುತ್ತೇವೆ.



# ಮಹಾಗೋಪುರ

ದೇವಾಲಯದ ಮಹಾದ್ವಾರವು ಪೂರ್ವಾಭಿಮುಖವಾಗಿದೆ. ರಾಜಗೋಪುರದ ಚತುಷ್ಕೋನಾಕಾರದ ಕಟ್ಟಡವು ದಕ್ಷಿಣೋತ್ತರವಾಗಿ ಮೂವತ್ತೆಂಟು ಅಡಿಗಳು ಹಾಗೂ ಪೂರ್ವಪಶ್ಚಿಮ ಮೂವತ್ತೆರಡು ಅಡಿಗಳಿವೆ. ಐವತ್ತು ಅಡಿಗಳಷ್ಟೆತ್ತರದ ಈ ಮಹಾಗೋಪುರವು ಐದು ಹಂತಗಳಲ್ಲಿ ಬೆಳೆದು ನಿಂತಿದೆ. ಒಂದೊಂದು ಹಂತವೂ ಸಣ್ಣ ಸಣ್ಣ ಗುಡಿಗಳು ಶೋಭಿಸಿದೆ. ಇದನ್ನು ಚೋಳರ ಕಾಲದಲ್ಲಿ ಅಚ್ಯುತರಾಯಲು ಅವರಿಂದ ಹದಿಮೂರನೇ ಶತಮಾನದಲ್ಲಿ ನಿರ್ಮಿಸಲಾಗಿದೆಯೆನ್ನಲಾಗಿದೆ. ಮೇಲಿನ ಶಿಖರದಲ್ಲಿ ಏಳು ಚಿನ್ನದ ಕಳಶಗಳಿವೆ. ಈ ಗೋಪುರದಲ್ಲಿ ವೈಷ್ಣವ ದೇವರುಗಳಾದ ಹನುಮಂತ, ನರಸಿಂಹ, ಲಕ್ಷ್ಮೀನರಸಿಂಹ, ಮುಂತಾದ ಮೂರ್ತಿಗಳನ್ನು ನೋಡಬಹುದಾಗಿದೆ. ರಾಜ ಗೋಪುರದ ಮಹಾದ್ವಾರವು ಇಪ್ಪತ್ನಾಲ್ಕು ಅಡಿಗಳಷ್ಟೆತ್ತರವಿದ್ದೆ, ಈ ಮಹಾದ್ವಾರಕ್ಕೆ "ಪಡಿ ವಾಕಿಲ", ಸಿಂಹದ್ವಾರ, ಮಹಾದ್ವಾರ, ಮುಖ್ಯದ್ವಾರ, ರಾಜಗೋಪುರ, ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಈ ಗೋಪುರದ ಮಹಾದ್ವಾರದೊಳಗೆ "ಗೋವಿಂದಾ ಗೋವಿಂದಾ" ಎನ್ನುತ್ತಾ ಒಳಗೆ ನಡೆದರೆ, ಮಾನವರಿಗೆ ಮೋಕ್ಷದ್ವಾರವೇ ತೆರೆದಂತೆ ! ಭೂಮಿಯ ಹಂತದಿಂದ ನೋಡಿದರೆ, ಆರು ಹಂತಗಳಿವೆ. ಅವು ಮೂಲಾಧಾರಾದಿ ಷಟ್ ಚಕ್ರಗಳ ಸಂಕೇತವಾಗಿದ್ದು, ಇನ್ನು ಮೇಲಕ್ಕೆ ನೋಡಿದರೆ ಸಹಸ್ರಾರವೆಂಬಂತೆ ಏಳು ಚಿನ್ನದ ಕಳಶಗಳಿಂದ ಶೋಭಾಯಮಾನವಾಗಿದೆ.



# ಶ್ರೀ ಪ್ರಾಣೇಶದಾಸರು


-ಡಾ॥ ಆರ್. ವಾದಿರಾಜು
9731733245


ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿದಾಸ ಸಾಹಿತ್ಯದ ಕೊಡುಗೆ ವಿಪುಲವಾದುದ್ದು ಮತ್ತು ವೈಶಿಷ್ಟ್ಯದಲ್ಲಿ ಪೂರ್ಣವಾದದ್ದು.ಕರ್ನಾಟಕ ಧಾರ್ಮಿಕ, ಸಾಂಸ್ಕೃತಿಕ ಚರಿತ್ರೆಯಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಕರ್ನಾಟಕದಲ್ಲಿ ಅವಿರತವಾಗಿ ಹರಿದು ಬಂದ ಜೀವನ ಮೌಲ್ಯಗಳನ್ನು ಜನ ಸಾಮಾನ್ಯರ ಆಡು ಭಾಷೆಯಲ್ಲಿ ತಲುಪಿಸಿ, ಲೌಕಿಕ ವಿಡಂಬನೆಯ ಮೂಲಕ ಮಾನಸಿಕ ಬೆಳವಣಿಗೆಯನ್ನು ಯಶಸ್ವಿವಾಗಿ ನಿರ್ವಹಿಸಿದವರು ಹರಿದಾಸರು ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ಇಂದಿಗೂ ವಿಶಿಷ್ಟವೆನಿಸಿದೆ. ಆದ್ದರಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿದಾಸ ಸಾಹಿತ್ಯ ವಿಶೇಷ, ವಿಭಿನ್ನ ವಿಶಿಷ್ಟ ಸ್ಥಾನ ಪಡೆಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯವು ಈ ಐದನೂರು ವರ್ಷಗಳಲ್ಲಿ ಸುಮಾರು ಮುನ್ನೂರಕ್ಕಿಂತ ಹೆಚ್ಚು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆ. ಅಂತಹ ಹರಿದಾಸರಲ್ಲಿ ಪ್ರಾಣೇಶದಾಸರು ಒಬ್ಬರು.

ಶ್ರೀಪ್ರಾಣೇಶದಾಸರು ಹರಿದಾಸ ಸಾಹಿತ್ಯವನ್ನು ಉತುಂಗ ಶಿಖರಕ್ಕೆ ಏರಿಸಿದ ಪ್ರಮುಖ ಹರಿದಾಸರಲ್ಲಿ ಒಬ್ಬರು. ದಾಸ ಸಾಹಿತ್ಯದ ತವರೂರು ಎನಿಸಿದ ಇಂದಿನ ರಾಯಚೂರು ಜಿಲ್ಲೆಗೆ ಸೇರಿದ ಲಂಗಸೂರಿನಲ್ಲಿ ಕ್ರಿ.ಶ. 1736 ರಲ್ಲಿ ಸದ್ವೈಷ್ಣವರ ವಂಶದಲ್ಲಿ ಹುಟ್ಟಿದ ಶಾನುಭೋಗ ತಿರುಕಪ್ಪನವರ ಮಗನಾಗಿ ಪ್ರಾಣೇಶದಾಸರು ಜನಿಸಿದರು. ಈ ದಾಸರ ಮೊದಲ ಹೆಸರು ಯೋಗಪ್ಪ ಅಥವಾ ಯೋಗೇಂದ್ರರಾಯರು. ಮಗು ಸುಂದರವಾಗಿ,ಸುದೃಢ ಕಾಯದಿಂದ ಹುಟ್ಟಿದರೂ ಆ ಮಗುವಿನ ಮೈ ಮೇಲೆಲ್ಲಾ ಬಿಳುಪು ಕಲೆಗಳು ವ್ಯಾಪಿಸಿದ್ದವು. ಇದರಿಂದ ಚಿಂತಿತರಾದ ತಂದೆ - ತಾಯಿಗಳು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳಿಗೆ ಶ್ರದ್ಧೆ ಭಕ್ತಿಗಳಿಂದ ಗುರು ಸೇವೆ ಮಾಡಿದರು.

ಅಚ್ಚರಿವೆಂಬಂತೆ ರಾಯರ ಪರಮಾನುಗ್ರಹದಿಂದ ಮಗುವಿನ ಮೈಮೇಲೆ ಇದ್ದ ಬಿಳುಪು ಕಲೆಗಳು ಹೋಗಿ ಅಂಗಾಲಿನಲ್ಲಿ ಮಾತ್ರ ಸ್ವಲ್ಪ ಕಲೆ ಹಾಗೆ ಉಳಿಯಿತು. ಆಗ ರಾಯರು ದಾಸರ ತಂದೆ ತಾಯಿಗಳಿಗೆ ಕನಸಿನಲ್ಲಿ ದರ್ಶನವಿತ್ತು. ಮೂಲ ಸ್ವರೂಪಕ್ಕೆ ಸೇರಿದ ಕಾರಣ ಹೋಗಲಾರದು ಎಂದು ಹೇಳಿದರಂತೆ. ಆದ್ದರಿಂದ ಭಕ್ತರು ಇಂದಿಗೂ ಇವರು ಪಾಂಡು ರಾಜನ ಅಂಶವೆಂದು ಭಾವಿಸುತ್ತಾರೆ.

ಪ್ರಾಣೇಶದಾಸರ ಪರಮ ಗುರುಗಳು ಮಾನವೀಯ ಶ್ರೀ ಜಗನ್ನಾಥದಾಸರು, ಪ್ರಾಣೇಶದಾಸರು ಅನೇಕ ವರ್ಷಗಳ ಕಾಲ ಇವರ ಸೇವೆಯನ್ನು ಮಾಡಿ ಅವರಿಂದ ಪರತತ್ತ್ವೋಪದೇಶವನ್ನು ಪಡೆದರು. ಗುರುಗಳ ಮೆಚ್ಚಿನ ಶಿಷ್ಯರಾಗಿ ಅಪರೋಕ್ಷ ಜ್ಞಾನಿಗಳೆನಿಸಿದರು.

ಪ್ರಾಣೇಶದಾಸರು ಪದ , ಪದ್ಯ ಸುಳಾದಿ ಉಗಾಭೋಗಗಳಲ್ಲದೆ ಕೃತಿಗಳನ್ನು ಸಹ ರಚಿಸಿದ್ದಾರೆ. 1. ಗಾಲವಚರಿತೆ 2. ಕಾಲಿಯಾಮರ್ದನ ಕಥೆ 3. ಬುಡಿ ಬ್ರಹ್ಮನ ಕಥೆ 4. ಗೋಪಿಕಾ ವಿಲಾಸ 5. ಭ್ರಮರ ಗೀತಾ, 6. ಮುಯ್ಯಾದ ಪದ 7. ಶ್ರೀ ಹರಿ ವಾಯುಸ್ತುತಿ 8. ಸೀತಾ ಸ್ವಯಂವರ, 9. ಕಾಳೀಸ್ವಯಂವರ 10. ಹನುಮದ್ವಿಲಾಸ 11. ಭೀಮಸೇನ ವಿಲಾಸ 12.

ವೀರಭದ್ರ ವಿಲಾಸ 13. ಪಾರ್ಥವಿಲಾಸ 14. ಅನಿರುದ್ಧವಿಲಾಸ 15. ವಶಿಷ್ಠ ವಿಶ್ವಾಮಿತ್ರಾಖ್ಯಾನ 16. ಉರ್ದ್ವಪುಂಡ್ರ ಮಹತ್ವ 17. ತಿಥಿತ್ರಯ ನಿರ್ಣಯ ಹೀಗೆ ಪ್ರಾಣೇಶದಾಸರು 17 ಕೃತಿಗಳನ್ನು ರಚಿಸಿದ್ದಾರೆ.

ಪ್ರಾಣೇಶದಾಸರ ಸಾಹಿತ್ಯದಲ್ಲಿ ಸರಳ, ಸುಂದರ, ಸ್ವಾರಸ್ಯರ ವಾಗಿರುವ ಹಾಡುಗಳು ಇವೆ. ಕೆಲವು ಕಥೆ ಹೇಳುವ ತಂತ್ರದಲ್ಲಿಯೂ ವೈವಿಧ್ಯಪೂರ್ಣವಾಗಿದೆ.ಉದಾಹರಣೆಗೆ ಸೀತಾಂಜನೆಯ ಸಂವಾದ "ನಮೋ ನಮೋ ರಾಮ ಕಳುಹಿಸಿದ ನಮ್ಮಮಮಸ್ವಾಮಿ ಬದುಕಿಹನೆ ಪೇಳೂ ತಮ್ಮ"ಎಂಬ ಹಾಡು ಸೊಗಸಾದ ಸಂವಾದ ರೂಪದಲ್ಲಿದೆ. ಅದೇ ಹಾಡಿನಲ್ಲಿ ಬರುವ ಸಾಲು "ಪೋಗಿ ಬರುವೆನು ನಿಮ್ಮಗುರುತು ಏನಿದೆ ಕೊಟ್ಟು ಬೇಗನೆಪ್ಪಣೆಯೆನೆಗೆ ಈವುದಮ್ಮ"

ಎಂಬಂತಹ ತಿಳಿಗನ್ನಡದಲ್ಲಿಯೂ ದಾಸರು ಕೃತಿ ರಚನೆ ಮಾಡಿದ್ದಾರೆ. "ವರಣನಿಗೂ ನಾರಾಯಣನಿಗೂ, ನಂಟತನ ಮಾಡುವುದಕೆ, ಸರಿಯೇ ಸಂದೇಹವನ್ನು ಸಮೀಸಿ ನೋಡಿ" ಎಂದಿದ್ದಾರೆ.

"ಜಲಧಿ ತಕ್ಕುದೋ ನಿನ್ನಳಿಯಗಣ ನಿನಗೂ
ಹಲವು ಬಗೆಯಂದಲಿ ಪರೀಕ್ಷೆಯನು ಮಾಡಿದರೆ"

ಎಂಬ ಪದಗಳು ಬಹು ಚಮತ್ಕಾರವಾಗಿ ಮೂಡಿ ಬಂದಿವೆ. ವರಣನಿಗೂ, ನಾರಾಯಣನಿಗೂ,ಜಲಧಿಗೂ,ನಾರಾಯಣನಿಗೂ ಗುಣಗಳಲ್ಲಿರುವ ಸಾಮ್ಯ ವೈಷಮ್ಯಗಳನ್ನು ತಮ್ಮ ಕೃತಿಗಳಲ್ಲಿ ದಾಸರು ತೋರಿದ್ದಾರೆ.

ನಿನ್ನ ಮಗಳವಗಿತ್ತವನ ಮಗಳ ಮದಿವ್ಯಾದಿ
ಕನ್ಯ ವಿಕ್ರಯ ಪರಸ್ಪರವೆನಿಸಿತೋ

ಎಂಬಲ್ಲಿ ಕಂಡು ಬರುವ ಭಕ್ತಿ ಪರಸ್ಪರವಾದ ನಿಂದಾಸ್ತುತಿಯ ತಂತ್ರವು ರಮಣೀಯವಾಗಿದೆ.

ದೇವರ ವಿವಾಹ ಸಂದರ್ಭಕ್ಕೆಂದು ರಚಿತವಾದಂತಹ ಒರಳ ಕಲ್ಲು ಪೂಜೆ, ಹಾಡು , ಹಸಗೆಕರೆಯುವ ಹಾಡು, ಕಂಕಣ ಕಟ್ಟುವ, ಉರುಟಣೆಯ ಉಡಿ ತುಂಬುವ ಲಾಲಿ, ಮಂಗಳಾರತಿ ಮೊದಲಾದ ಹಾಡುಗಳ ಮೂಲಕ, ಪ್ರಾಣೇಶದಾಸರು ಮಾಡುವ ಹರಿಸ್ತುತಿಗೂ ಇಂದಿಗೂ ಸಾಮಾನ್ಯ ಜನರ ಜೀವನದಲ್ಲಿ ಅಂತಹ ಸಂದರ್ಭಗಳಿಗೆ ಒದಗಿ ಬರುವಂತಹ ಪದಗಳಾಗಿವೆ. ಪ್ರಾಣೇಶದಾಸರ ಬೋಧ ಪ್ರದವಾದ ಹಾಡುಗಳ ಸಂಖ್ಯೆಯು ಗಣನೀಯವಾಗಿದೆ. ಕಟಕಿ, ವ್ಯಂಗೋಕ್ತಿಗಳನ್ನು ಬಳಸಿ ಪಾಮರವನ್ನು ದಾಸರು ತಿದ್ದಲೆತ್ನಿಸಿದ ರೀತಿ ಮನೋಜ್ಞವಾದುದು.

"ಹೋಗುವಳಗಸೀಯ ಪರಿಯಂತ
ಬ್ರಾಂತಳಾಗಿ ಬಂದೆಂಬಳ ಸೊಸೆಗೆ ಹೀಗಂತ

ಎಂಬ ಹಾಡು ಅತ್ತೆಯೊಬ್ಬಳ ಸಂಸಾರ ವ್ಯಾಮೋಹವನ್ನು ಚಿತ್ರಿಸುವ ಕಟಕಿಯ ಉದಾಹರಣೆಯಾಗಿದೆ.

ಹೀಗೆಯೇ ಆದರ್ಶ ಮಾಧ್ವ ಜೀವನದ ರೀತಿ ನೀತಿ, ದಿನಚರಿಗಳನ್ನು ತಿಳಿಸುವ ಪದಗಳು ಪ್ರೌಢವಾಗಿಯೂ ಶಾಸ್ತ್ರಗರ್ಭಿತವಾಗಿಯೂ ಇವೆ. ಗೋಪಿಚಂದನ ಮುದ್ರಾಧಾರಣ ಮಹಾತ್ಮೆ, ದೇವರಿಗೆ ನೈವೇದ್ಯ ಇಡುವ ಕ್ರಮ ತಿಥಿತ್ರಯ ನಿರ್ಣಯ, ಈ ವಿಷಯಗಳನ್ನು ಕುರಿತ ಪದ ಉಗಾಭೋಗಗಳು ಇಂತಹ ದಾಸರ ಪದಗಳಿಗೆ ಉದಾಹರಣೆಗಳಾಗಿವೆ.

ಭಕ್ತಿ ತತ್ತ್ವವನ್ನು ಜನರ ಮುಂದೆ ಇಡುವುದೇ ದಾಸರ ಉದ್ದೇಶವಾಗಿತ್ತಾದ್ದರಿಂದ ಅವರು ಬಳಸಿದ ಭಾಷೆಯೂ ಲಿಂಗಸೂರು ಸುತ್ತ ಮುತ್ತಲಿನ ಅಂದಿನ ಜನರಾಡುವ ಭಾಷೆಯೂ ಮತ್ತು ಹಾಡುವ ಭಾಷೆಯೂ ಆಗಿದೆ. ಅಲ್ಲದೆ ಗೂಢವಾದ ಅರ್ಥದಿಂದಲೂ ಕೂಡಿದೆ. ಉದಾಹರಣೆಗೆ

ಕಡ್ಡಿಮೇಯಂದೂ ತುಡುಗು ಹೋಗಲರಿಯದಂಥಾ
ದೊಡ್ಡ ಆಕಳಕರವಾ ಹಗ್ಗಾದಿಂದಾ
ದುಡ್ಡಿನಗಲ ತಾವಿನೊಳಗೆ ಕಂಬಕ್ಕಿ ಕಟ್ಟಿ
ದಡ್ಡನಲ್ಲಾವಾ ಶ್ರೀ ಪ್ರಾಣೇಶಾವಿಠ್ಠಲ
ಮಡ್ಡಾದದಿಯಾರಿದನೂ....

ಕೆಲವೊಮ್ಮೆ ಅಜ್ಞರಾದ ಹೆಣ್ಣು ಮಕ್ಕಳಿಗೆ ತಿಳಿಸಿ ಹೇಳುವ ರೀತಿಯಲ್ಲಿ

ಶ್ರೀಕಾಂತೋಲಿದ ದಾಸರೀ ಕಲಿಯುಗದಲ್ಲಿ
ಲೇಖಾಂಶರಯದೇ ತಂಗಿ
ಶೋಕ ಬ್ಯಾಡಲೆ ನರಲೋಕ ಉಳಿದರೆಂದು
ಈ ಕಂಭದೊಳಗಿಹರೇಹೇ ನೀರೆ

ತಂಗಿ, ನೀರೆ ನಲ್ಲೆ ಎಂದು ಸಂಬೋದಿಸಿ ವಿಷಯವನ್ನು ತಿಳಿಸಿದ್ದಾರೆ. ಈ ರೀತಿಯ ಕೀರ್ತನೆಗಳನ್ನು ಪ್ರಾಣೇಶದಾಸರು ಕೀರ್ತನಾ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ.ಗುರುಗಳ ಆಜ್ಞೆಯಂತೆ ಪ್ರಾಣೇಶದಾಸರು ಅನೇಕ ಸುಜೀವಿಗಳಿಗೆ ದಾಸ ಧೀಕ್ಷೆ ನೀಡಿ ದಾಸಪಂಥವನ್ನು ಬೆಳೆಸುತ್ತ 1822 ರ ಚಿತ್ರಭಾನು ಸಂವತ್ಸರದ ಅಶ್ವಿನಿ ಮಾಸದ ಶುದ್ಧ ಸಪ್ತಮಿಯಂದು ಪರ ಲೋಕಕ್ಕೆ ಪ್ರಯಾಣಿಸಿದರು.

# ಹಸೆಗೆ ಬಾರಯ್ಯಾ ಹದಿನಾಲ್ಕು ಲೋಕದೊಡೆಯ

- ಪರಗಿ ಭಾರತೀರಮಣ ಆಚಾರ್ಯ
9480263676




ಕನ್ನಡದ ಆಡು ಭಾಷೆಯಲ್ಲಿ ಹರಿದಾಸರು ಪದ ಪದ್ಯ ಸುಳಾದಿಗಳನ್ನು ರಚನೆ ಮಾಡಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು, ಶ್ರೀಮಂತಗೊಳಿಸುತ್ತಿದ್ದಾರೆ.

ಹರಿದಾಸರು ತಮ್ಮ ರಚನೆಗಳಲ್ಲಿ ಏಳು ಬೆಟ್ಟದ ಒಡೆಯನ ದರ್ಶನ, ಸಂಕೀರ್ತನ,ಯಾಯಿವರದ ಮೂಲಕ ದ್ರವ್ಯ ಸಂಗ್ರಹ ಹಾಗೂ ಆ ದ್ರವ್ಯಗಳನ್ನು ಶ್ರೀನಿವಾಸನಿಗೆ ಅಣ್ಣ ಸಂತರ್ಪಣೆಯ ಮೂಲಕ ಸಮರ್ಪಣೆ ಇತ್ಯಾದಿ ಅನೇಕ ಸೇವೆಗಳನ್ನು ಮಾಡಲೇಬೇಕು ಎಂದು ಅಸ್ಲಿಖಿತ ನಿಯಮವನ್ನು ಹಾಕಿಕೊಂಡಿದ್ದರು. ದೇವರೆಂದರೆ ತಿರುಪತಿ ತಿಮ್ಮಪ್ಪ ಗುರುಗಳೆಂದರೆ ಮಂಚಾಲೆ ರಾಘಪ್ಪ ಎಂದು ನಂಬಿದವರು ನಮ್ಮ ಹರಿದಾಸರುಗಳು. 19ನೇ ಶತಮಾನದಲ್ಲಿ ಅನೇಕ ಹರಿದಾಸರು ತಮ್ಮ ನಾಮಸಂಕೀರ್ತನೆ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಅವಿಭಾಜಿತ ಕೋಲಾರ ಜಿಲ್ಲೆಯ ಆಂಧ್ರರಾಜ್ಯದ ಗಡಿ ಪ್ರದೇಶದ ಬಾಗೇಪಲ್ಲಿಯಲ್ಲಿ ಅನೇಕ ಮಂದಿ ಹರಿದಾಸರುಗಳನ್ನು ಕಾಣಬಹುದು.

ಶ್ರೀ ಗುರುರಾಮ ವಿಠಲ ಅಂಕಿತ ಬಾಗೇಪಲ್ಲಿಯ ಸುಬ್ಬನ ದಾಸರಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನವಿದೆ. ಇವರು ಹುಟ್ಟು ಕುರುಡರು. ಆಜನ್ಮ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದವರು. ತಮ್ಮ ಕೀರ್ತನೆಗಳನ್ನು ಸಜ್ಜನರು ಪಾಡಿದರೆ ಅದೇ ನಮಗೆ ಹಾಗೂ ನಮ್ಮ ಪೂರ್ವಜರಿಗೆ ಸದ್ಗತಿ ದೊರಕಿಸುವ ಸಾಧನ ಎಂದು ದೃಢವಾಗಿ ನಂಬಿದ್ದರು.

ಶ್ರೀಬಾಗೇಪಲ್ಲಿ ಸುಬ್ಬನ ದಾಸರ ರಚನೆಗಳಲ್ಲಿ ಭಗವಂತನ ಸಂಕೀರ್ತನೆ ಲೋಕನೀತಿ, ವಿಶೇಷವಾಗಿ ಷೋಡಶೋಪಚಾರ ಪೂಜೆಯ ಪ್ರತಿ ಉಪಚಾರಕ್ಕೂ ಒಂದೊಂದು ಕೀರ್ತನೆಯನ್ನು ರಚಿಸಿದ್ದಾರೆ. ಭಗವಂತನ ಸಂಕೀರ್ತನೆಯಲ್ಲಿ ಕೃಷ್ಣ ಶ್ರೀನಿವಾಸ ಮುಂತಾದ ಭಗವದ್ ರೂಪಗಳ ಚಿಂತನೆಯ ಕೀರ್ತನೆಗಳನ್ನು ಕಾಣಬಹುದು.

ಏಳು ಬೆಟ್ಟದ ಒಡೆಯ ಶ್ರೀನಿವಾಸನ ಕಲ್ಯಾಣೋತ್ಸವಕ್ಕೆ ಸಂಬಂಧಿಸಿದಂತೆ ಹಾಗೂ ಅವನ ಅವತಾರಕ್ಕೆ ಸಂಬಂಧಿಸಿದ ಕೀರ್ತನೆಗಳನ್ನು ಇವರ ರಚನೆಗಳಲ್ಲಿ ನೋಡಬಹುದು.

ಸುಬ್ಬನ ದಾಸರ ತಿರುವೇಂಕಟನಾಥನ ಮೇಲೆ ರಚಿಸಿರುವ ಕೀರ್ತನೆಗಳಲ್ಲಿ ಕೆಲವು ಕೀರ್ತನೆಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಲು ಪ್ರಯತ್ನಿಸುತ್ತಿದ್ದೇನೆ. ಗುರುರಾಮವಿಠಲ ದಾಸರು **ಹಸೆಗೇಳ್ಳೆ ಶ್ರೀನಿವಾಸ ಮೂರ್ತಿ ನೀ ಬಿಸಜಾಲಯೆ ಸಹಿತ** ಎನ್ನುವ ಕೀರ್ತನೆಯಲ್ಲಿ ಶ್ರೀನಿವಾಸ ಕಲ್ಯಾಣದ ವಿಷಯ ವನ್ನು ಪ್ರಸ್ತಾಪಿಸುತ್ತಾ ಬ್ರಹ್ಮಾದಿಗಳ ಪ್ರಾರ್ಥನೆಯ ಬಗ್ಗೆ ತಿಳಿಸುತ್ತಾ ರುಕ್ಮಿಣಿ ಕಲ್ಯಾಣದ ವಿಷಯವನ್ನು ಸ್ಥೂಲವಾಗಿ ಪ್ರಸ್ತಾಪಿಸಿ ತಾನು ಸರ್ವಾಂತರ್ಯಾಮಿ ಎಂದು ಜಗತ್ತಿಗೆ ತೋರಿದ ವೆಂಕಟಕೃಷ್ಣ ಎಂದು ಹಾಡಿದ್ದಾರೆ.

**ಹಸೆಗೆ ಬಾರಯ್ಯ ಹದಿನಾಲ್ಕು ಲೋಕದೊಡೆಯ**
**ಕುಸುಮಾಸ್ತೈನ್ಯೈಯ್ಯ ಕೋರಿ ಪ್ರಾರ್ಥಿಪೆ ಜೀಯಾ**

ಎಂಬ ಕೀರ್ತನೆಯಲ್ಲಿ ಪಕ್ಷಿವಾಹನನಾಗಿ ಪದ್ಮಾವತಿ ಸಹಿತ ತಮ್ಮ ಹೃದಯ ಸಿಂಹಾಸನಕ್ಕೆ ಸ್ವಾಗತಿಸುತ್ತಾ ಸದಾ ಸುಜ್ಞಾನವನು ಕರುಣಿಸಲು ಪದುಮಾವತಿಯೊಂದಿಗೆ ಸ್ವಾಗತಿಸುತ್ತಾರೆ.

**ವೇಂಕಟೇಶ್ವರ ವೇದಗೋಚರ ನಿನ್ನಪಾದ**
**ಪಂಕಜವನು ಕಂಡೆ ಶ್ರೀಧರ**

ಎಂಬ ಕೀರ್ತನೆಯಲ್ಲಿ ದಾಸರು ತಮ್ಮನ್ನು ತಾವು ಅಲ್ಪಜ್ಞಾನಿ ಬುದ್ಧಿಹೀನನು ಎಂದು ಕರೆದುಕೊಂಡು ಆದರೂ ನೀನು ಅನುಗ್ರಹ ಮಾಡಿ ನಿನ್ನ ಸೇವೆಯನ್ನು ನೀಡು ಎಂದು ಬೇಡಿಕೊಳ್ಳುತ್ತಾರೆ.

ಅದೇ ಕೀರ್ತನೆಯಲ್ಲಿ ಶ್ರೀನಿವಾಸನ ಅಗಣಿತಮಹಿಮೆಗಳ ಬಗ್ಗೆ ತಿಳಿಸುತ್ತಾ ಹಾಗೆ ತೀರ್ಥವನ್ನು ಮಾರಿ ಹಣಗಳಿಸುವ ನೀನು ಎಂದು ನಿಂದಾ ಸ್ತುತಿಯನ್ನು ಮಾಡಿರುವುದು ಅವರ ಕವಿತಾ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

**ಮಂಗಳಂ ವೆಂಕಟೇಶಗೆ ಅಲಮೇಲ್**
**ಮಂಗಾ ಮನೋಹರಗೆ**
**ಮಂಗಳ ಗರುಡ ತುರಂಗಗೆ ಮುನಿಜನ**
**ಸಂಗಗೆ ಭವ ಭಯ ಭಂಗಗೆ ಜಯ ಶುಭ**

ಎಂಬ ಮಂಗಳ ಕೀರ್ತನೆಯಲ್ಲಿ ಶ್ರೀನಿವಾಸ ಯಾವ ಯುಗದಲ್ಲಿ ಯಾರಿಗೆ ಹೇಗೆ ಅನುಗ್ರಹ ಮಾಡಿದ ಎಂದು ತಿಳಿಸಿರುವುದು ಕೃತ, ತ್ರೇತಾ,ದ್ವಾಪರ, ಕಲಿಯುಗದ ವಿಷಯವನ್ನು ಪರಿಚಯಿಸಿಯಿಸುವುದು ಕೀರ್ತನಾಕಾರರ ಪದಗಳ ಜೋಡಣೆಯ ಚಾತುರ್ಯವನ್ನು ಈ ಕೀರ್ತನೆಯಲ್ಲಿ ಕಾಣಬಹುದು.

**ಬಾರೋ ವೆಂಕಟೇಶ ನಮ್ಮ ಭಾಗ್ಯ ನಿಧಿಯೇ**
**ಬಾರೋ ವೆಂಕಟೇಶ ಬೇಗ ತೋರೊ ನಿನ್ನ ಪಾದವೀಗ**
**ಸಾರಿ ಸಾರಿ ಶಿರರಬಾಗಿ ಬೇಡುವೆ ನಾ**

ಈ ಕೀರ್ತನೆಯಲ್ಲಿ ಸುಬ್ಬನ ದಾಸರು ಭವಿಷ್ಯೋತ್ತರ ಪುರಾಣದ ಪೂರ್ವಾರ್ಧ ಹಾಗೂ ಉತ್ತರಾರ್ಧವನ್ನು ಪರಿಚಯಿಸಿ ಹರಿದಾಸರಿಗೆ ಶ್ರೀನಿವಾಸ ಮಾಡುತ್ತಿರುವ ಅನುಗ್ರಹದ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

**ಧ್ಯಾನಿಸಲರಿಯೆ ನಿನ್ನ ಶ್ರೀನಿವಾಸ**
**ಧ್ಯಾನಿಸಲರಿಯೆನು ದೀನಮಂದಾರ ನಿ -**
**ತ್ಯಾನಂದ ಮೂರ್ತಿಯಂದರಿತು ಹೃದಯದೊಳು**

ಇದು ಗುರುರಾಮವಿಠ್ಠಲ ದಾಸರು ರಚನೆ ಮಾಡಿದ ಷೋಡಶ ಉಪಚಾರ ಪೂಜೆಯ ಕೀರ್ತನೆಗಳಲ್ಲಿ ಒಂದು ದೇವರನ್ನು ಧ್ಯಾನಿಸುವುದು ಷೋಡಶ ಉಪಚಾರ ಪೂಜೆಯ ಮೊದಲ ಪೂಜೆ ಅದರ ಬಗ್ಗೆ ತಿಳಿಸುತ್ತಾ ಭಗವಂತನನ್ನು ಹೇಗೆ ಧ್ಯಾನಿಸಬೇಕು. ಅದರ ಸರಳ ನಿಯಮಗಳು ಯಾವುವು ಎಂಬುದನ್ನು ತಿಳಿಸುವ ಪ್ರಯತ್ನ ಮಾಡಿ ಕಡೇ ನುಡಿಯಲ್ಲಿ ಇಂದಿನ ಸಮಾಜ ಯಾಕೆ ಧ್ಯಾನಿಸಲು ಆಗುತ್ತಿಲ್ಲ ಅದಕ್ಕೆ ಕಾರಣಗಳು ಯಾವುವು ಎಂಬುದನ್ನು ತಿಳಿಸಿರುವುದು ಭಗವದ್ ಧ್ಯಾನವನ್ನು ಮಾಡುವವರಿಗೆ ಒಂದು ರೀತಿ ಮಾರ್ಗದರ್ಶನವಾಗಿದೆ. ಗುರುರಾಮವಿಠ್ಠಲ ದಾಸರ ಕೀರ್ತನೆಗಳು ಸುಮಾರು 300 ಕ್ಕೂ ಮಿಗಿಲಾದ ಕೀರ್ತನೆಗಳು ಇಂದು ಉಪಲಬ್ಧವಿದೆ ಹರಿಕಥಾ ವಿದ್ವಾಂಸರಾಗಿದ್ದ ಟಿ.ಕೆ. ವೇಣುಗೋಪಾಲದಾಸರು ಇವರ ಕೀರ್ತನೆಗಳನ್ನು ತಮ್ಮ ಹರಿಕಥೆಗಳಲ್ಲಿ ಬಳಸುತ್ತಿದ್ದರು ನಂತರ ಹರಿದಾಸ ಸಾಹಿತ್ಯದ ಸಂಶೋಧಕರಾದ ಡಾ.ಅನಂತ ಪದ್ಮನಾಭರಾವ್ ಅವರು ಸುಬ್ಬನದಾಸರ ಕೀರ್ತನೆಗಳು ಸಮಗ್ರವಾಗಿ ಸಂಪಾದಿಸಿ ಅದನ್ನು ಸಮಗ್ರ ಹರಿದಾಸ ಸಾಹಿತ್ಯ ಸಂಪುಟಗಳ ಮೂಲಕ ಒಬ್ಬ ಅಂದ ಕವಿಯ ಪ್ರೌಢ ಕೀರ್ತನೆಗಳನ್ನೂ ಹೊರ ಜಗತ್ತಿಗೆ ಪರಿಚಯಿಸಿದರು.





## ಅಕ್ಟೋಬರ್ ತಿಂಗಳ

# ರಾಶಿ ಫಲಗಳು




**ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ**

**ಅನುವಾದ- ಕೆ.ಎನ್.ಎಸ್**


**ಮೇಷ**

ಸಮಾಜದಲ್ಲಿ ನಿಮ್ಮ ಗೌರವ ಆದರಗಳು ಬೆಳವಣಿಗೆಯಾಗುತ್ತವೆ. ಸ್ನೇಹಿತರು ಬಂಧುಗಳು ನಿಮ್ಮನ್ನು ಗೌರವಿಸುತ್ತಾರೆ. ನಿಮ್ಮ ಮೇಲಿನ ವರು ನಿಮ್ಮ ಪ್ರಯತ್ನವನ್ನು ಗುರುತಿಸದಿದ್ದರೂ ಅವರೊಡನೆ ವಾಗ್ವಾದ ಮಾಡದಿರುವುದು ಒಳಿತು. ವಾಹನ ಸೌಖ್ಯದಂಥಹ ವಿಲಾಸಮಯ ಜೀವನವನ್ನು ಅನುಭವಿಸಲಿದ್ದೀರಿ. ಯತ್ನಿಸಿದ ಕಾರ್ಯಗಳು ನೆರವೇರಲಿವೆ. ಇಷ್ಟಕಾರ್ಯ ಸಿದ್ಧಿಯುಂಟಾಗಲಿದೆ.

**ವೃಷಭ**

ಸರ್ವತ್ರ ಅನುಕೂಲಕರವಾದ ವಾತಾವರಣವಿರುತ್ತದೆ. ಶತ್ರುಜಯ, ಮಿತ್ರಲಾಭ, ಸ್ನೇಹಿತರಿಂದ ಧನಯೋಗವುಂಟಾಗುತ್ತದೆ. ಶುಭವಾರ್ತೆಗಳನ್ನು ಕೇಳುವಿರಿ.ಸಾಮಾಜಿಕ ಜೀವನ ಗೌರವಪ್ರದವಾಗಿರುತ್ತದೆ.ನಿಮ್ಮ ಸಹೋದರಿಯರೊಡನೆ ಕುಟುಂಬ ಸದಸ್ಯರೊಡನೆ ಆನಂದವಾಗಿ ಕಾಲ ಕಳೆಯುವಿರಿ. ಪ್ರಭುತ್ವದಿಂದ ಗೌರವ ದೊರಕುತ್ತದೆ. ಪುಣ್ಯಕ್ಷೇತ್ರ ದರ್ಶನ ಯೋಗವಾಗಲಿದೆ.

**ಮಿಥುನ**

ನಿಮ್ಮ ಪ್ರಯತ್ನಗಳು ಸಾನುಕೂಲ ಫಲಿತಾಂಶಗಳನ್ನು ತರುತ್ತದೆ. ನಿಮ್ಮ ಬಂಧುಗಳು, ಕುಟುಂಬ ಸದಸ್ಯರು, ಸ್ನೇಹಿತರು ನಿಮ್ಮ ನಿಲುವನ್ನು ಗುರುತಿಸುತ್ತಾರೆ ಮತ್ತು ನಿಮಗೆ ಗೌರವ ಕೊಡುತ್ತಾರೆ. ಈ ವೇಳೆಯಲ್ಲಿ ನೀವು ಮಾನಸಿಕ ನೆಮ್ಮದಿ ಹಾಗೂ ಉಪಶಮನವನ್ನು ಅನುಭವಿಸುತ್ತೀರಿ ನೂತನ ವ್ಯಾಪಾರದಲ್ಲಿ ವಿರಾಜಿಸುವಿರಿ. ಕಾಲ ಕೂಡಿ ಬರಲಿದೆ. ಆದಾಯವನ್ನು ಹೊಂದುವಿರಿ.

**ಕರ್ಕಾಟಕ**

ಗೃಹ ವಾತಾವರಣ ಚೆನ್ನಾಗಿರುತ್ತದೆ. ಸಮಾಜದಲ್ಲಿ ದೊಡ್ಡವರಿಗೆ ನಿಮ್ಮ ಸಲಹೆಗಳು ಸೂಚನೆಗಳು ಅವಶ್ಯಕವಾಗುತ್ತವೆ. ನಿಮ್ಮನ್ನು ಸಂಪರ್ಕಿಸುವ ಮೂಲಕ ಕಾರ್ಯಸಿದ್ಧಿಯಾಗಲಿದೆ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಗೆಲ್ಲಲಿದ್ದಾರೆ. ಆರ್ಥಿಕ ಅವಶ್ಯಕತೆಗಳಿಗೆ ಧನ ಲಭಿಸಲಿದೆ. ಹಿಂದೆ ಮಾಡಿದ ಬಾಕಿಗಳು ತೀರುವ ಅವಕಾಶಗಳು ಇವೆ.

**ಸಿಂಹ**

ಸಂಪದ, ಆನಂದ, ವಿದ್ಯೆಗಳಲ್ಲಿ ವಿಜಯ, ವಿವಾಹ, ಅವಕಾಶಗಳು, ವಿನೋದ ಹಾಗೂ ವ್ಯಾಪಾರದಲ್ಲಿ ವೃದ್ಧಿಯಾಗಲಿದೆ. ನೀವು ವ್ಯಕ್ತಿಗತ ವಾಗಿ ಬಹಳಾ ಸಂಘಟನೆಗಳಲ್ಲಿ ಪಾಲ್ಗೊಳ್ಳುವಿರಿ ಹೊಸ ವ್ಯಕ್ತಿಗಳನ್ನು ಭೇಟಿ ಯಾಗಲು ಅವರ ಸಹವಾಸವನ್ನು ಆಸ್ವಾದಿಸಲು ಇದು ಸಕಾಲ.

**ಕನ್ಯ**

ಇದು ಆರ್ಥಿಕ ಲಾಭ, ಭೌತಿಕ ಸುಖ, ಮತ್ತು ಇಂದ್ರಿಯ ಸುಖ ಹಾಗೂ ವಿನೋದಗಳನ್ನು ಒದಗಿಸುತ್ತದೆ. ಈ ಕಾಲ ವಿದೇಶ ಪರ್ಯಾಟನೆಗಳಿಗೆ ಅನಾವಶ್ಯಕವಾಗಿ ಖರ್ಚು ಮತ್ತು ಹಣ ವ್ಯರ್ಥವನ್ನು ಸಹಾ ಸೂಚಿಸುತ್ತದೆ. ದುಂದುವೆಚ್ಚಕ್ಕೆ ಗುರಿಯಾಗದೆ ಸಂಪಾದಿಸಿದ ಹಣವನ್ನು ಸಂರಕ್ಷಿಸಿಕೊಳ್ಳುವುದು ಒಳ್ಳೆಯದು .

**ತುಲಾ**

ನೀವು ಒಡಹುಟ್ಟಿದವರಿಂದ ಸಹಾ ಹಲವು ಲಾಭಗಳನ್ನು ಅಪೇಕ್ಷಿಸಬಹುದು.ಶುಭವಾರ್ತೆಗಳು ಬರಲಿವೆ. ಮಕ್ಕಳು ಓದಿನಲ್ಲಿ ಮುನ್ನಡೆಯುತ್ತಾರೆ. ಅವರ ಉತ್ತೀರ್ಣ ನಿಮಗೆ ಆನಂದವನ್ನುಂಟು ಮಾಡಲಿದೆ. ಈ ಸಮಯದಲ್ಲಿ ನಿಮ್ಮ ಪದವಿ ಹಾಗೂ ಗೌರವ ವೃದ್ಧಿಸುತ್ತವೆ. ನಿದ್ರಾಹೀನತೆಯಿಂದ ಶರೀರ ಬಾಧೆಯುಂಟಾಗಬಹುದು.ಶಸ್ತ್ರ ಚಿಕಿತ್ಸೆಗಳಿಗೆ ಗುರಿಯಾಗುವ ಅವಕಾಶವಿದೆ.

**ವೃಶ್ಚಿಕ**

ದೇವತಾನುಗ್ರಹವುಂಟಾಗಿ ಸತ್ಸಂಪ್ರದಾಯಗಳಿಗೆ ಕಟ್ಟುನಿಟ್ಟಾಗಿರುವುದು. ಧನ ದಾನ್ಯಲಾಭ, ಮನೆಯಲ್ಲಿ ಮಂಗಳ ತೋರಣಗಳು ಗೃಹ ಸ್ಥಿರಾಸ್ತಿಗಳ ವೃದ್ಧಿ, ಸಂತೋಷಕರವಾದ ವಾತಾವರಣ, ನಿತ್ಯವೂ ಗೃಹದಲ್ಲಿ ಮೃಷ್ಟಾನ್ನ ಭೋಜನ, ಸಂತೃಪ್ತಿ, ಮಿತ್ರ ಸಮಾಗಮ ಪರೋಪಕಾರಗಳುಂಟಾಗಳಿವೆ.

**ಧನಸ್ಸು**

ಈ ಸಮಯದಲ್ಲಿ ಉದ್ಯೋಗದಲ್ಲಿ ಪ್ರಮೋಷನ್ ಇಲ್ಲವೇ ವೇತನ ವೃದ್ಧಿಯಾಗಬಹುದು. ಹೊಸ ಅವಕಾಶಗಳನ್ನು ಪಡೆಯಲಿದ್ದೀರಿ. ಮತ್ತು ಮೇಲಧಿಕಾರಿಗಳಿಂದ ಪ್ರಶಂಸೆಗಳನ್ನು ಪಡೆದು ಗುರುತಿಸಿಕೊಳ್ಳುವಿರಿ. ಕುಟುಂಬ ಹಾಗೂ ಸ್ನೇಹಿತರು ನಿಮ್ಮನ್ನು ಗೌರವಿಸುತ್ತಾರೆ. ಅಧಿಕ ಲಾಭವುಂಟಾಗಲಿದೆ.

**ಮಕರ**

ಆರೋಪಗಳನ್ನು ಎದುರಿಸುವ ಕಾಲ. ಆರ್ಥಿಕವಾಗಿಯೂ ಸಹ ಖರ್ಚುಗಳನ್ನು ತಗ್ಗಿಸಿಕೊಳ್ಳುವುದು ಒಳಿತು. ಮಾನಸಿಕ ಪ್ರಶಾಂತತೆ ತೂರಿಬರುವುವು. ಚಂದ್ರನನ್ನು ಆರಾಧಿಸುವುದು, ಪವಿತ್ರಗ್ರಂಥ ಪಠನೆ ಮಾಡುವುದು ವಿಹಿತ.

**ಕುಂಭ**

ಆಧ್ಯಾತ್ಮಿಕ , ದೈವಿ ಸಂಬಂಧ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ಕುಟುಂಬ ವೃದ್ಧಿಯುಂಟಾಗಲಿದೆ. ನಿಮ್ಮ ಪ್ರಯತ್ನಗಳು ಅಧಿಕ ಲಾಭವನ್ನು ಒದಗಿಸುತ್ತದೆ. ವಿನೋದಗಳಲ್ಲಿ ಪಾಲ್ಗೊಳ್ಳುವಿರಿ. ನಿಮ್ಮ ಸಾಂಘಿಕ ಪ್ರವರ್ತನೆ ಎಲ್ಲರಿಗೂ ಮಾರ್ಗದರ್ಶನವಾಗಲಿದೆ. ಧಾರ್ಮಿಕ ಸಂಸ್ಥೆಗಳಿಗೆ ನೋಂದಾಯಿತರಾಗುವಿರಿ.

**ಮೀನ**

ಆಧ್ಯಾತ್ಮಿಕ, ದೈವ ಸಂಬಂಧ ಕಾರ್ಯಗಳಲ್ಲಿ ಪಾಲ್ಗೊಳ್ಳುವಿರಿ. ಕುಟುಂಬ ವೃದ್ಧಿಯುಂಟಾಗಲಿದೆ. ನಿಮ್ಮ ಪ್ರಯತ್ನಗಳಲ್ಲಿ ಅಧಿಕ ಧನವನ್ನು ಶೇಖರಿಸುವಿರಿ. ನಿಮ್ಮ ಸಾಂಘಿಕ ವರ್ತನೆ ಇತರರಿಗೆ ಮಾರ್ಗದರ್ಶಕ ವಾಗುವುದು. ಧಾರ್ಮಿಕ ಸಂಸ್ಥೆಗಳಿಗೆ ಕೈಗೂಡುವಿರಿ. ಸಂಪದ ವೃದ್ಧಿಯಾಗಲಿದೆ. ವೃತ್ತಿ ವ್ಯವಹಾರಗಳು ಬಹಳಾ ಅನುಕೂಲವಾಗಿರುತ್ತವೆ. ಉಪಕಾರಭಾವ, ಮತ್ತಷ್ಟು ಧೈರ್ಯ ಎಲ್ಲರನ್ನು ಆಕರ್ಷಿಸುತ್ತದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

94818 00691

### 1. ದೇವರಿಗೆ ದೀಪ ಹಚ್ಚುವುದೇಕೆ?

**ಉತ್ತರ :** ನಾವು ಪ್ರತಿನಿತ್ಯ ಪ್ರಾತಃಕಾಲ ಹಾಗೂ ಸಾಯಂಕಾಲ ದೇವರಿಗೆ ದೀಪವನ್ನು ಹಚ್ಚುತ್ತೇವೆ. ದೀಪವು ಜ್ಞಾನವನ್ನು ಸೂಚಿಸುತ್ತದೆ. ದೇವರು ಎಲ್ಲಾ ಜ್ಞಾನಕ್ಕೂ ಮೂಲ ಚೈತನ್ಯ . ದೀಪವು ಕತ್ತಲನ್ನು ಹೋಗಲಾಡಿಸುವಂತೆ ಜ್ಞಾನವು ಅಜ್ಞಾನವನ್ನು ಹೊಡೆದು ಹಾಕುತ್ತದೆ. ಜ್ಞಾನವೆಂಬ ಸಂಪತ್ತು ಮಿಕ್ಕೆಲ್ಲಾ ಸಂಪತ್ತಿಗಿಂತಲೂ ಶ್ರೇಷ್ಠವೆಂಬಂತೆ ನಾವು ಅಜ್ಞಾನವೆಂಬ ಸಂಪತ್ತಿಗೆ ದೀಪವನ್ನು ಬೆಳಗಿಸುವುದರ ಮೂಲಕ ಶರಣಾಗುತ್ತೇವೆ. ತುಪ್ಪ ಅಥವಾ ಎಣ್ಣೆಯ ದೀಪವನ್ನು ಹಚ್ಚಲು ಕಾರಣವೆಂದರೆ ತುಪ್ಪ ಅಥವಾ ಎಣ್ಣೆಯು ನಮ್ಮಲ್ಲಿರುವ ಋಣಾತ್ಮಕ ಭಾವಗಳಿದ್ದಂತೆ. ನಾವು ದೇವರಿಗೆ ದೀಪ ಹಚ್ಚಿದಾಗ ನಮ್ಮ ವಾಸನೆಗಳೂ ನಿಧಾನವಾಗಿ ಕರಗಿ ಕರಗಿ ಕಡೆಗೆ ಮಾಯವಾಗುತ್ತದೆ. ದೀಪ ಮೇಲ್ಮುಖವಾಗಿ ಉರಿಯುವುದರಿಂದ ನಮ್ಮ ಋಣಾತ್ಮಕ ಭಾವನೆಗಳು ಕರಗಿ ಧನಾತ್ಮಕದೆಡೆಗೆ ಮೇಲೊಯ್ಯುವ ಸಂಕೇತ ವಿದು. ದೇವರ ಮುಂದೆ ತುಳಸಿಯ ಮುಂದೆ ಬಾಗಿಲ ಮುಂದೆ ದೀಪ ಹಚ್ಚುವ ರೂಢಿಯಿದೆ. ಕಾರ್ತಿಕ ಮಾಸದಲ್ಲಿ ಮಾತ್ರ ಮನೆಯ ಸುತ್ತಲೂ ದೀಪ ಬೆಳಗುವುದು ಕಂಡು ಬರುತ್ತದೆ. ಇದರಿಂದ ಒಳಗಿನ ಅಸುರೀ ಶಕ್ತಿಯೆಂಬ ಅಜ್ಞಾನದ ಕತ್ತಲು ನಿವಾರಣೆಯಾಗಿ ಬಾಳಿನಲ್ಲಿ ಆನಂದದ ಬೆಳಕು ಬೀರಲಿ ಎಂಬುದರ ದಿವ್ಯ ಭರವಸೆಯ ಪ್ರತೀಕವಾಗಿರುತ್ತದೆ.

### 2.ದೇವರಿಗೆ ಕರ್ಪೂರ ಮಂಗಳಾರತಿ ಎತ್ತುವ ಉದ್ದೇಶವೇನು?

**ಉತ್ತರ :** ಕರ್ಪೂರದ ಆರತಿ ಬೆಳಗಿಸುವಾಗ ಕರ್ಪೂರವು ನಮ್ಮ ವಾಸನೆಗಳನ್ನು ಸೂಚಿಸುತ್ತದೆ. ಕರ್ಪೂರ ಸ್ವಲ್ಪವೂ ಉಳಿಯದಂತೆ ಕರಗಿ ಹೋಗುವುದರ ಸಂಕೇತವೆಂದರೆ ನಮ್ಮ ಅಹಂಭಾವನೆಯನ್ನು ಕರಗಿಸುವುದೆಂದರ್ಥ. ಅಂದರೆ ಪರಮಾತ್ಮನಿಂದ ನಮ್ಮನ್ನು ಬೇರ್ಪಡಿಸಲು ಸಹಾಯಕವಾದ ಅಹಂಕಾರಯುತ ಭಾವನೆಯನ್ನು ಕರಗಿಸುವುದರ ಸಂಕೇತ. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿಗಳ ರೂಪದಲ್ಲಿರುವ ಅಂತಶ್ಶಕ್ತಿ ಹೆಚ್ಚಿ ಅಥವಾ ಅಂತರಂಗದ ಬೆಳಕು ಹೆಚ್ಚಿ ಮಂಗಳ ಉಂಟಾಗಲೆಂದೇ ದೇವರೆದುರು ಬೆಳಗಿದ ಆರತಿಯ ದಿವ್ಯ ಜ್ಯೋತಿಯನ್ನು ಎರಡೂ ಹಸ್ತಗಳ ಬೊಗಸೆಯನ್ನು ಕವುಚಿ ಹಿಡಿದು ಆ ದಿವ್ಯ ಜ್ಯೋತಿಯ ಬಿಸಿ ತಾಗಿ ಹಸ್ತಗಳನ್ನು ಕಣ್ಣುಗಳಿಗೂ ತಲೆಗೂ ಮುಟ್ಟಿಸಿಕೊಳ್ಳುವುದು. ಇದು ದೇವರ ದಿವ್ಯ ಕೃಪೆ ಕಂಗಳ ಮೂಲಕ ಇಚ್ಛಾಶಕ್ತಿಯನ್ನೂ, ತಲೆಯ ಮೂಲಕ ಜ್ಞಾನಶಕ್ತಿಯನ್ನೂ, ಕೈಗಳ ಮೂಲಕ ಕ್ರಿಯಾಶಕ್ತಿಯನ್ನೂ, ಅಂತಶಕ್ತಿಯನ್ನು ಪ್ರಚೋದಿಸಲೆಂದು ಆರತಿಯ ಜ್ಯೋತಿರೂಪದ ದಿವ್ಯ ಶಕ್ತಿಯನ್ನು ತನ್ನಲ್ಲಿ ಆವಾಹಿಸಿಕೊಳ್ಳುವುದರ ಪ್ರತೀಕ.

### 3.ಗಂಧಧಾರಣೆಯ ವೈಶಿಷ್ಟ್ಯವೇನು?

**ಉತ್ತರ:** ಶ್ರೀಗಂಧವು ಶೀತಲ, ಹಗುರವಾದುದು. ಆಯಾಸ, ಒಣಗುವಿಕೆ, ವಿಷ, ಶ್ಲೇಷ್ಮ, ಬಾಯಾರಿಕೆ, ರಕ್ತಪಿತ್ತ, ಉರಿಗಳನ್ನು ಶಮನಗೊಳಿಸುವುದು. ಒಳ್ಳೆಯ ಪರಿಮಳವುಳ್ಳ ಶ್ರೀದೇವಿಗೂ ಪ್ರಿಯವಾಗಿರುವುದರಿಂದ ಇದನ್ನು ಶ್ರೀಗಂಧ ಎಂದು ಕರೆಯುತ್ತಾರೆ. ಆಹ್ಲಾದವನ್ನುಂಟು ಮಾಡುವುದರಿಂದ ಇದು ಚಂದನವೆನಿಸುತ್ತದೆ. ಗಂಧದ ಕೊರಡನ್ನು ಸಾಣೇಕಲ್ಲಿನ ಮೇಲೆ ತೇಯುತ್ತಿದ್ದರೆ ಮೇಲ್ಭಾಗದ ಕೊಳಕು ಹೋದ ಮೇಲೆ ಬರುವ ಶುಭ್ರವಾದ ಗಂಧವು ಭಗವಂತನ ಪೂಜೆಗೆ ತನ್ನನ್ನು ಅರ್ಪಿಸಿಕೊಳ್ಳಲು ಸಿದ್ಧವಾಗುತ್ತದೆ. ಹಾಗೆಯೇ ಧ್ಯಾನದಿಂದ ತೇದರೆ ಮನಸ್ಸಿನ ಮೇಲೆ ದುರ್ವಾಸನೆ ಕಾಣಿಸಿಕೊಂಡು ತೊಲಗಿ ಹೋದ ನಂತರ ತುಂಬಾ ಆಳದಲ್ಲಿರುವ ಪರಮಾತ್ಮನನ್ನು ಸಮೀಪಿಸುತ್ತಿರುವಾಗ ಸುವಾಸನೆಗಳು ಕಾಣಿಸಿಕೊಂಡು ಪರಮಾತ್ಮನಿಗೆ ಅರ್ಪಿತವಾಗುವುದು ಎಂಬುದರ ಸಂಕೇತ.

### 4. ದೇವರಿಗೆ ಘಂಟೆ ಬಾರಿಸುವುದೇಕೆ?

**ಉತ್ತರ :** ಭಗವಂತನ ಪೂಜೆಯ ಪ್ರಾರಂಭದಲ್ಲಿ ಘಂಟಾನಾದವನ್ನು ಮಾಡುತ್ತೇವೆ. 'ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಕ್ಷಸಾಂ ಕುರುವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ' ಎಂದು ಹೇಳಿ ಘಂಟಾನಾದವನ್ನು ಮಾಡುತ್ತೇವೆ. ಇದರ ಉದ್ದೇಶವೆಂದರೆ ದೈವಿಕ ಶಕ್ತಿಯು ಒಳಗೆ ಬಂದು ರಕ್ಕಸ ಶಕ್ತಿಯು ಹೊರಗೆ ಹೋಗಲಿ ಅಂದರೆ ನಮ್ಮೊಳಗೆ ಧನಾತ್ಮಕಶಕ್ತಿ ಪ್ರವೇಶವಾಗಿ ಋಣಾತ್ಮಕ ಶಕ್ತಿ ಹೊರಹೋಗಲಿ ಎಂಬುದರ ಸಂಕೇತವೇ ಘಂಟಾನಾದ. ನಾವು ನೈವೇದ್ಯವನ್ನು ಇಡುವಾಗ, ಮಂಗಳಾರತಿ ಎತ್ತುವಾಗ ಗಂಧದ ಕಡ್ಡಿ ಬೆಳಗುವಾಗಲೆಲ್ಲಾ ಘಂಟಾನಾದನವನ್ನು ಮಾಡುತ್ತೇವೆ. ಘಂಟಾನಾದದಿಂದ ನಮ್ಮ ಎಡ ಹಾಗೂ ಬಲ ಮೆದುಳು ಒಂದೇ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಒಂದು ಸಲ ಘಂಟೆ ಬಾರಿಸಿದರೆ ತರಂಗ ನಮ್ಮಲ್ಲಿರುವ ಷಟ್ಚಕ್ರಗಳನ್ನು ಮುಟ್ಟುತ್ತದೆ. ಘಂಟಾನಾದನದಿಂದ ನಮ್ಮಲ್ಲಿರುವ ಋಣಾತ್ಮಕ ಶಕ್ತಿಗಳು ಹೊರಹೋಗಿ ಶಾಂತಿ ಲಭಿಸುತ್ತದೆ.

### 5. ದೇವರಿಗೆ ಗಂಧದ ಕಡ್ಡಿ ಹಚ್ಚುವುದೇಕೆ?

**ಉತ್ತರ :** ಸುಗಂಧದ್ರವ್ಯವನ್ನು ಭಗವಂತನಿಗೆ ಸಮರ್ಪಿಸಬೇಕು. ಊದಿನ ಕಡ್ಡಿಯಿಂದ ಬರುವ ಹೊಗೆಯು ಮೇಲಕ್ಕೆ ಹೋಗುತ್ತಾ ನಮ್ಮ ಪ್ರಾರ್ಥನೆಯನ್ನು ಭಗವಂತನಲ್ಲಿಗೆ ತೆಗೆದುಕೊಂಡು ಹೋಗುತ್ತದೆ. ಇದು ನಮ್ಮ ಚಿತ್ತವನ್ನು ಶುದ್ಧಿ ಮಾಡುತ್ತದೆ. ಗಂಧದ ಕಡ್ಡಿ ಉರಿಯುತ್ತಾ ಸುವಾಸನೆಯನ್ನು ಕೊಡುತ್ತಾ ಕಡೆಗೆ ಬೂದಿಯಾಗಿ ಬಿಡುತ್ತದೆ.ಇದು ಬೇರೆಯವರಿಗೆ ಒಳ್ಳೆಯದನ್ನು ಮಾಡುವ ತ್ಯಾಗ ಮನೋಭಾವವನ್ನು ತೋರಿಸುತ್ತದೆ. ಗಂಧದ ಕಡ್ಡಿಯನ್ನು ಹಚ್ಚಿ ದೇವರ ಮುಂದೆ ಧ್ಯಾನಕ್ಕೆ ಕೂತರೆ ಮನಶುದ್ಧಿಯಾಗಿ ಏಕಾಗ್ರತೆ ಹೊಂದಿ ಭಗವಂತನ ಪ್ರಾರ್ಥನೆಗೆ ಸಹಾಯ ಮಾಡುತ್ತದೆ. ಗಂಧದ ಕಡ್ಡಿ ಹಚ್ಚುವುದರಿಂದ ಕೀಟಗಳನ್ನು ತಡೆಗಟ್ಟಬಹುದು. ಸುಗಂಧ ಚಿಕಿತ್ಸೆಗೂ ಸಹಕಾರಿ ವಾಯುದೇವರು ಧೂಪಕ್ಕೆ ಅಧಿದೇವತೆ. ದೇಹದಲ್ಲಿರುವ ದುಷ್ಟಕಣಗಳು ಹೋಗಿ ದೇವಕಣಗಳು ಬರುವುದರ ಸಂಕೇತವೇ ಈ ಗಂಧದ ಕಡ್ಡಿ ಹಚ್ಚುವುದು.

ನೀತಿಕಥೆ



# ಮೋಹವೆಂಬ ಜಾಲದಿಂದ ಹೊರ ಬರುವ ಹಾದಿ

-ಎ.ಆರ್. ರಘುರಾಮ
9916138436

ಕೆಲವು ವಸ್ತುಗಳು ಮೇಲೆ ನಾವು ಅತಿಯಾಗಿ ಅವಲಂಬಿತರಾಗಿರುತ್ತೇವೆ. ಅವುಗಳ ಮೇಲೆ ನಮಗೆ ಅರಿವಿಲ್ಲದಂತೆಯೇ ಮೋಹ ಉಂಟಾಗಿರುತ್ತದೆ. ಅದನ್ನು ಬಿಟ್ಟು ಇರುವುದು ಸಾಧ್ಯವೇ ಇಲ್ಲ ಎಂಬಷ್ಟರ ಮಟ್ಟಿಗೆ ನಾವು ಅದಕ್ಕೆ ಅಂಟಿಕೊಂಡಿರುತ್ತೇವೆ. ಇದು ಒಂದು ರೀತಿ ಬಂಧನವಾಗಿ ನಮ್ಮನ್ನು ಕಾಡುತ್ತಿರುತ್ತದೆ. ಅದರಿಂದ ಕೊಂಚ ಹೊರ ಬಂದರೆ ಜಗತ್ತಿನ ವಿವಿಧ ಸಂಗತಿಗಳು ನಮಗೆ ಸಂತಸವನ್ನು ಕೊಡಲು ಕಾದಿರುತ್ತವೆ.

ಮಂಗಳಾಪುರ ಎಂಬ ಗ್ರಾಮದಲ್ಲಿ ಒಬ್ಬ ಯುವಕನಿದ್ದ. ಆತ ಒಂದು ಕತ್ತೆ ಸಾಕಿದ್ದ. ಅದೇ ಅವನಿಗೆ ಸರ್ವಸ್ವ. ಮರಳನ್ನು, ಅಗಸರು ಒಗೆದ ಬಟ್ಟೆಗಳನ್ನೂ ಕತ್ತೆ ಮೇಲೆ ಹೇರಿಕೊಂಡು ಬರುವುದು ನಿತ್ಯ ಕಾಯಕ. ಇದರಿಂದ ಜೀವನ ಸಾಗುತ್ತಿತ್ತು. ಹತ್ತಾರು ವರ್ಷ ಇದೇ ಕೆಲಸ ಮಾಡಿದ ಆತನಿಗೆ ಒಂದು ದಿನ ಇದೆಲ್ಲವನ್ನೂ ಬಿಟ್ಟು ಬೆಟ್ಟದ ಮೇಲೆ ಕುಳಿತು ಧ್ಯಾನ ಮಾಡಬೇಕು ಎನಿಸಿತು. ಕತ್ತೆಯನ್ನು ಮಿತ್ರನಿಗೆ ಒಪ್ಪಿಸಿ ತೆರಳಿದ. ನಾಲ್ಕು ದಿನ ಕಳೆಯಿತು. ಧ್ಯಾನಕ್ಕೆ ಕುಳಿತಾಗಲೆಲ್ಲಾ ಕತ್ತೆಯೇ ಕಣ್ಣೆದುರು ಬರುತ್ತಿತ್ತು. ಅದು ಆಹಾರ ತಿಂದಿತೇ? ಮಿತ್ರನಿಂದ ಏಟನ್ನು ತಿಂದಿತೇ? ವಿಶ್ರಾಂತಿ ಪಡೆಯಿತೋ ಇಲ್ಲವೋ ಹೀಗೆ ಕಾಡತೊಡಗಿತು.ಬೆಟ್ಟದಿಂದ ಇಳಿದು ಬಂದ. ಕತ್ತೆಯನ್ನು ನೋಡುವ ತನಕ ಆತನಿಗೆ ಸಮಾಧಾನವೇ ಇರಲಿಲ್ಲ. ಮಿತ್ರನ ಮನೆಗೆ ಬಂದು ಕತ್ತೆ ಮೈದಡವಿದ. ಅದೂ ಖುಷಿಯಿಂದ ಕುಣಿದಾಡಿತು. ನಾಲ್ಕು ದಿನ ಕತ್ತೆಯನ್ನು ಜತೆಗೇ ಇದ್ದ. ಮನಸ್ಸು ಮತ್ತೆ ಧ್ಯಾನದ ಕಡೆ ಎಳೆಯಿತು. ಗುಡ್ಡಕ್ಕೆ ಹೋಗಿ ಕುಳಿತು ಎರಡು ದಿನದ ನಂತರ ಮತ್ತೆ ಕತ್ತೆ ಕನಸಿನಲ್ಲಿ ಬಂದು ಕಾಡತೊಡಗಿತು. ಏನು ಮಾಡಬೇಕೆಂದು ತಿಳಿಯಲಿಲ್ಲ ಮತ್ತೆ ಗುಡ್ಡ ಇಳಿದು ಬರಲೇ ಬೇಕಾಯಿತು.ಮಿತ್ರನಿಂದ ಕತ್ತೆಯನ್ನು ತನ್ನ ಸುಪರ್ದಿಗೆ ಪಡೆದ, ಸಮೃದ್ಧವಾದ ಕಾಡಿನತ್ತ ತೆರಳಿದ. ಅಲ್ಲಿ ಕತ್ತೆ ಸುಖವಾಗಿ ಜೀವಿಸುವ ವಾತಾವರಣವಿತ್ತು. ಕತ್ತೆಯನ್ನು ಅಲ್ಲಿಯೇ ಬಿಟ್ಟು ಬಂದ. ಅವನ ಮನಸ್ಸು ಈಗ ನಿರಾಳವಾಗಿತ್ತು. ಹೊಸತನ ಚಿಮ್ಮುತ್ತಿತ್ತು.ಒಂದಿಷ್ಟು ದೂರ ನಡೆದು ಬಂದವನೇ ಕುಣಿದಾಡ ತೊಡಗಿದ. ಯುದ್ಧವನ್ನು ಗೆದ್ದು ಕುದುರೆ ಮೇಲೆ ವಾಪಸ್ಸಾಗುತ್ತಿದ್ದ ರಾಜ ಎದು ರಾದರೂ ಅದರ ಪರಿವೆ ಇಲ್ಲದೆ ಯುವಕ ಕುಣಿದಾಡುತ್ತಿದ್ದ.ಅಚ್ಚರಿಗೊಂಡ ರಾಜ ಕುದುರೆ ನಿಲ್ಲಿಸಿ "ನನಗಿಂತಾ ನೀನು ಸಂತೋಷವಾಗಿರುವೆ ಕಾರಣ ಏನು" ಎಂದು ಪ್ರಶ್ನಿಸಿದ.

ಮಹಾರಾಜಾ, ನೀನು ಯುದ್ಧದಲ್ಲಿ ಗೆದ್ದು ಬಂದಿರುವೆ. ಆದರೆ ನಾಳೆ ಮತ್ತೊಂದು ಯುದ್ಧ ಬರಬಹುದು ಎಂಬ ಆತಂಕ ನಿನ್ನಲ್ಲಿರುವುದರಿಂದ ಸಂತಸವನ್ನು ಅನುಭವಿಸಲು ಆಗುತ್ತಿಲ್ಲ . ಐಶ್ವರ್ಯವು ನೀರಿನ ಗುಳ್ಳೆಯಂತೆ ಕ್ಷಣಿಕ. ದೇಹವು ದೀಪದಂತೆ ಅಸ್ಥಿರ. ತಾರುಣ್ಯವು ಚಂಚಲ. ಭುಜಬಲವು ಮಿಂಚಿನಂತೆ ಕ್ಷಣಿಕ ಕಾಲದಲ್ಲಿ ನಶಿಸಿ ಹೋಗುತ್ತದೆ. ಹಾಗಾಗಿ ಎಲ್ಲ ಮೋಹ ಗಳನ್ನು ತೊರೆದು ಮನಸ್ಸನ್ನು ಮುಕ್ತವಾಗಿಟ್ಟುಕೋ ಎಂದ. ರಾಜನಿಗೆ ಸತ್ಯ ದರ್ಶನ ವಾಯಿತು.ರಾಜ್ಯ, ಕೋಶ, ಸಂಪತ್ತು - ಎಲ್ಲ ಮೋಹಗಳಿಂದ ಮನ ಸ್ಸನ್ನು ಮುಕ್ತವಾಗಿಸಿಕೊಂಡು ಆತನೂ ಕುಣಿಯತೊಡಗಿದ.

ಬಹುತೇಕರು ಇಂದು ಆಸ್ತಿ, ಮನೆ, ಹಣ, ಮೊಬೈಲ್ ಫೋನ್, ಅದ ರೊಳಗೆ ಅಡಗಿರುವ ಮಾಯಾಲೋಕದಲ್ಲೇ ಮುಳುಗಿರುತ್ತಾರೆ. ಅದರ ವ್ಯಾಮೋಹದಿಂದ ಹೊರಬರಲಾಗದೇ ಬಂಧಿತರಾಗಿರುತ್ತಾರೆ. ಹೊರ ಬರುವ ಹಾದಿಯನ್ನು ನಾವೇ ಕಂಡು ಕೊಂಡಾಗ ಮನಸ್ಸು ಮುಕ್ತವಾಗುತ್ತದೆ, ಹಗುರಾಗುತ್ತದೆ, ವಿಕಾಸದ ಪಥದಲ್ಲಿ ಹೆಜ್ಜೆ ಹಾಕಲಾರಂಭಿಸುತ್ತದೆ. ಈ ಹೆಜ್ಜೆಗಳನ್ನೇ ಹತ್ತಾರು ಮಂದಿ ಅನುಸರಿಸುತ್ತಾರೆ, ಆದರಿಸುತ್ತಾರೆ.

## ಬಾಲ ವಿನೋದಿನಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....



ಈ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.



### ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ತು ಗಾ ಗೆ ದ್ಧಿ ಟ್ಟ ರ

ಆ ನಿ ರ ಬು ಮ

ಉತ್ತರಗಳು:

ಆತುರಗಾರನಿಗೆ ಬುದ್ಧಿ ಮಟ್ಟ

### ದಾರಿ ತೋರಿಸಿ



| | | | | | | |
|---|---|---|---|---|---|---|
| | | 1 | 3 | 3 | 6 | 7 |
| | | ↓ | 1 | 2 | 7 | 9 |
| 3 | 2 | 1 | 5 | 6 | 5 | 7 |
| 4 | 8 | 3 | 11 | 10 | 9 | 8 |
| 5 | 6 | 7 | 10 | 11 | 12 | 18 |
| 8 | 3 | 8 | 14 | 17 | 13 | 19 |
| 14 | 7 | 9 | 11 | 13 | 14 | 17 |
| 18 | 11 | 10 | 15 | 16 | | |
| 13 | 12 | 13 | 14 | ↓ | | |

ದುರ್ಗಾಮಾತೆಯು ರಾಕ್ಷಸನನ್ನು (ಅಸುರ) ನನ್ನು ಸಂಹಾರ ಮಾಡಲು ಬಂದ ದಾರಿಯನ್ನು ಮಕ್ಕಳೇ ಕಂಡು ಹಿಡಿಯಿರಿ.



# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01. ತಿರುಮಲೆಯನ್ನು ಕಲಿಯುಗದಲ್ಲಿ ಏನೆಂದು ಕರೆಯುತ್ತಾರೆ?................ ..............................
02. ಉಪನಿಷತ್ತುಗಳು ಯಾವುದಕ್ಕೆ ವಿಶೇಷ ಸ್ಥಾನ ಕೊಟ್ಟಿದೆ?...................... ..............................
03. ಮೈಸೂರು ಎಂದೊಡನೆ ನೆನಪಾಗುವುದು ಏನು?..................... ..............................
04.ಯಾರು ಕನಸಿನಲ್ಲಿ ಕಾಣಿಸಿಕೊಂಡು ಇಂದಿರೇಶ ಅಂಕಿತ ನೀಡಿದರು? ..............................
05. ವೆಂಕಟೇಶ್ವರನ ಪರಮ ಭಕ್ತ ಯಾರು? ..............................
06. ಯಾವ ಆಲಯದಲ್ಲಿ ಅಕ್ಷರಾಭ್ಯಾಸ ಮಾಡಿಸಲು ಜನರು ಬರುತ್ತಾರೆ? ..............................
07.ಹೊರನಾಡಿನಲ್ಲಿರುವ ದೇವಿ ಯಾರು? .............................. ..............................
08. ಪುರಂದರದಾಸರು ಎಲ್ಲಿಗೆ ಹೋಗುತ್ತಿದ್ದರು? ...................... ..............................
09. ಕಲಿಯುಗದ ಪ್ರತ್ಯಕ್ಷ ದೈವ ಯಾರು? ..............................
10. ಬನ್ನೇರುಘಟ್ಟದಲ್ಲಿರುವ ದೇವರು ಯಾರು?................ ..............................
11. ಮಾಧವತೀರ್ಥರು ಯಾವ ಸಂವತ್ಸರ ವೃಂದಾವನಸ್ಥರಾದರು? .......................... ..........
12.ಚಾರುಭಾಷಿಣಿ ಯಾರು? ..............................
13. ಕಲೆಗಳು ಅವರ ಶರೀರದಲ್ಲಿ ಎಲ್ಲಿ ಉಳಿಯಿತು? ..............................
14. ಐಶ್ವರ್ಯವು ಏನಿನ್ನಂತೆ ಕ್ಷಣಿಕ? ..............................
15. ಯಾರ ಮನೆಯಲ್ಲಿ ಹಲ್ಲಿಯಾಗಿ ಜನಿಸಿದನು? ..............................




## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.09.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು :** | **ವಿಳಾಸ :** |
| **ಚಂದಾ ಸಂಖ್ಯೆ :** | |
| **ತಂದೆಯ ಹೆಸರು :** | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ :** |



## ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು



ಲಕ್ಷ್ಮೀದೇವಿ, ಸರಸ್ವತೀದೇವಿ, ಗೊಂಬೆಗಳ ಹಬ್ಬ, ದುರ್ಗಾದೇವಿಗೆ ಸಂಬಂಧಿಸಿದ ವಸ್ತುಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ದೀಪ , ತೋರಣ, ತಾಳಪತ್ರೆ, ಪಂಚಆರತಿ, ದೀಪದಸ್ತಂಭ, ಪೆನ್ನು, ಮತ್ತು ಇಂಕಿನ ಬಾಟಲು

# ಇದು ... ನೀರೇ ಅಲ್ಲವೇ ಎಂದು ಭಾವಿಸಬಾರದು

**ಚಿತ್ರಕಥೆ**


ಕಥೆ: ತೆಲುಗು ಮೂಲ : ಡಾ|| ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ





ಮಹರ್ಷಿ ! ಎಷ್ಟು ದಾನಗಳು ನೀಡಿದರೂ ಸಾಧಾರಣೆ ಕಾಣಲಿಲ್ಲ ಮೂರು ಬಾರಿ ಚಾತಕ ರೂಪವನ್ನು, ಒಂದು ಜನ್ಮದಲ್ಲಿ ಹದ್ದಿನ ರೂಪದಲ್ಲಿ ಏಳು ಜನ್ಮಗಳಲ್ಲಿ ನಾಯಿಯ ರೂಪದಲಿ ಮತ್ತು ಈಗ ಈ ರೂಪದಲ್ಲಿ ಇದ್ದೇನೆ.... ನನ್ನನ್ನು ಕಾಪಾಡಿ
ಓ ರಾಜ ! ನೀನು ವೆಂಕಟಾಚಲದಲ್ಲಿ ಜಲದಾನ ಮಾಡಲಿಲ್ಲ ನೀರಿಗೆ ಬೆಲೆ ಇಲ್ಲವೆಂದು ಭಾವಿಸಿ ಭಕ್ತರಿಗೆ ನೀರು ಕೊಡಲಿಲ್ಲ. ಅದಕ್ಕೆ ನಿನಗೆ ಈ ದುರ್ಗತಿ !
ಮಹಾತ್ಮ! ಇದಕ್ಕೆ ವಿಮೋಚನೆಯೇ ಇಲ್ಲವೇ...?
ಶ್ರೀವೆಂಕಟಾಚಲದಲ್ಲಿ ನಾನು ಮಾಡಿದ ಪುಣ್ಯವನ್ನು ನಿನಗೆ ಪಾಪ ಶಾಂತಿಗಾಗಿ ಧಾರೆಯೆರೆಯುತ್ತೇನೆ . ಅದು ನಿನ್ನ ಪ್ರಾರಬ್ಧ ಕರ್ಮವನ್ನು ತೊಲಗಿಸುತ್ತದೆ.
ಮಹರ್ಷಿಯ ಕೃಪೆಯಿಂದ ರಾಜನಿಗೆ ಎಲ್ಲಾ ಪಾಪಗಳು ಪರಿಹಾರವಾಯಿತು.
ಮಹರ್ಷಿ ! ನಿಮ್ಮಿಂದ ನನ್ನ ಪಾಪಗಳೆಲ್ಲ ನಾಶವಾದವು. ಶ್ರೀ ವೆಂಕಟಾಚಲ ಕ್ಷೇತ್ರದಲ್ಲಿ ಜಲದಾನ ಮಾಡಿದರೆ ವಿಷ್ಣು ಲೋಕವು ಪ್ರಾಪ್ತಿಯಾಗುತ್ತದೆಂದು ನನ್ನ ಜೀವನದ ಮೂಲಕ ಎಲ್ಲರಿಗೂ ತಿಳಿಸುವಂತೆ ಅನುಗ್ರಹಿಸಿ
ತಥಾಸ್ತು ! ನೀನೊಬ್ಬನೇ ಅಲ್ಲ. ವೆಂಕಟಪರ್ವತದ ಮೇಲೆ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಜಲದಾನ ಮಾಡುವುದು ಪ್ರತಿಯೊಬ್ಬರ ಕರ್ತವ್ಯ
ಸರ್ವೇ ಜನಾಃ ಸುಖಿನೋ ಭವಂತು

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)



## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನ ದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರ ಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

## ತಿರುಮಲೆ ತಿರುಪತಿ ದೇವಸ್ಥಾನಗಳು

25-08-2023 ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಆಲಯ ಪ್ರಾಂಗಣದಲ್ಲಿ ನಡೆದ ಶ್ರೀ ವರಮಹಾಲಕ್ಷ್ಮೀ ವ್ರತದ ದೃಶ್ಯಮಾಲಿಕೆ. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿ ದಂಪತಿಗಳು, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್.ರವರು ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು.






## ತಿರುಮಲೆ ತಿರುಪತಿ ದೇವಸ್ಥಾನಗಳು

ತಿ.ತಿ.ದೇ., ಆಡಳಿತ ಭವನದ ಪ್ರಾಂಗಣದಲ್ಲಿ ನಡೆದ ಭಾರತ ಸ್ವಾತಂತ್ರ್ಯ ದಿನೋತ್ಸವದ (15-08-2023) ಸಂದರ್ಭದಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರ ರೆಡ್ಡಿಯವರು ನಮ್ಮ ರಾಷ್ಟ್ರದ ಬಾವುಟವನ್ನು ಧ್ವಜಾರೋಹಣ ಮಾಡಿದರು. ಇವರೊಂದಿಗೆ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್., ರವರು ಭದ್ರತಾ ಸಿಬ್ಬಂದಿಯವರಿಂದ ಗೌರವ ವಂದನೆಯನ್ನು ಸ್ವೀಕರಿಸಿದರು.







SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-09-2023 and Posting at Tirupati RMS.Regd. with the Registrar of Newspapers for India
underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month.

